ಸಂಪುಟ: 04 ಸಂಚಿಕೆ: 61 ಪುಟಗಳು: 08 ಬುಧವಾರ 15 ಮೇ 2024

www.udayavahini.in epaper.udayavahini.in Udayavahini news Udayavahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**
ಸ್ವಾರ್ಥ ಭಾವನೆ ಇಲ್ಲದೆ ಇತರರಿಗಾಗಿ ಕೆಲಸ ಮಾಡುವುದು ನಮಗೆ ನಾವೇ ಉಪಕಾರ ಮಾಡಿಕೊಂಡಂತೆ


# ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ದೇವರಾಜೇಗೌಡ ನಿವಾಸದ ಮೇಲೆ ಎಸ್‌ಐಟಿ ಅಧಿಕಾರಿಗಳ ದಾಳಿ

• ಉದಯವಾಹಿನಿ, ಹಾಸನ

ಸಂಸದ ಪ್ರಜ್ವಲ್ ರೇವಣ್ಣ ಅಶ್ಲೀಲ ವೀಡಿಯೋ ಪ್ರಕರಣ ಹಾಗೂ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ಪ್ರಕರಣದಲ್ಲಿ ವಕೀಲ ದೇವರಾಜೇಗೌಡ ಅವರು ಜೈಲುಪಾಲಾಗಿದ್ದಾರೆ. ಈ ಬೆನ್ನಲ್ಲೇ ಅವರ ನಿವಾಸದ ಮೇಲೆ ಎಸ್‌ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಹಾಸನದ ರವೀಂದ್ರನಗರದಲ್ಲಿರುವಂತ ವಕೀಲ ದೇವರಾಜೇಗೌಡ ಅವರ ನಿವಾಸದ ಮೇಲೆ ಎಸ್‌ಐಟಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಹಾಸನದ ರವೀಂದ್ರನಗರದಲ್ಲಿರುವಂತ ವಕೀಲ ದೇವರಾಜೇಗೌಡ ಅವರ ನಿವಾಸದಲ್ಲಿ ಮಹಿಳೆಗೆ ಲೈಂಗಿಕ ಕಿರುಕುಳ ಪ್ರಕರಣ ಸಂಬಂಧ ಪರಿಶೀಲನೆಯನ್ನು ನಡೆಸುತ್ತಿದ್ದಾರೆ. ಅಂದಹಾಗೇ ಹಾಸನ ಪೆನ್ ಡ್ರೈವ್ ಪ್ರಕರಣಕ್ಕೆ ಮೊದಲು ಟ್ವಿಸ್ಟ್ ಸಿಕ್ಕಿದೇ ವಕೀಲ ದೇವರಾಜೇಗೌಡ ಅವರಿಂದ ಆಗಿದೆ. ನನ್ನ ಬಳಿ ಇದ್ದಂತ ಪೆನ್ ಡ್ರೈವ್ ಅನ್ನು ವಕೀಲ ದೇವರಾಜೇಗೌಡ ಅವರಿಗೆ ನೀಡಲಾಗಿತ್ತು ಎಂಬುದಾಗಿ ಪ್ರಜ್ವಲ್ ಮಾಜಿ ಕಾರು ಚಾಲಕ ಕಾರ್ತಿಕ್ ಹೇಳಿದ್ದರು.

## ಉತ್ತಮ ಮಳೆಯಿಂದ ಮೈತುಂಬಿ ಹರಿದ ಕಾವೇರಿ ನದಿ ನೀರು

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಮಳೆಯ ಅಬ್ಬರ ಜೋರಾಗಿದ್ದು, ಕೆರೆ, ಕಟ್ಟೆ, ಹಳ್ಳ, ನದಿಗಳು ನಿಧಾನವಾಗಿ ಮರುಜೀವ ಪಡೆದುಕೊಳ್ಳುತ್ತಿವೆ. ಹಲವು ದಿನಗಳಿಂದ ಕಾವೇರಿ ಜಲಾನಯನ ಪ್ರದೇಶದಲ್ಲಿ ವ್ಯಾಪಕ ಮಳೆಯಾಗುತ್ತಿರುವ ಕಾರಣ ಕಾವೇರಿ ನದಿ ಮೈದುಂಬಿ ಹರಿಯುತ್ತಿದೆ. ಕೊಡಗು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಕಳೆದ ಕೆಲವು ದಿನಗಳಿಂದ ಉತ್ತಮ ಮಳೆಯಾಗುತ್ತಿದೆ. ಹಲವು ಕಡೆ ನೀರಿಲ್ಲದೆ ಬತ್ತಿ ಹೋಗಿದ್ದ ಕಾವೇರಿ ನಿಧಾನವಾಗಿ ಹರಿಯಲು ಆರಂಭಿಸಿದೆ. ಇದರಿಂದ ಜಲಾಶಯಗಳ ಒಳಹರಿವು ಹೆಚ್ಚಾಗಿದ್ದು, ಜಲಾಶಯದ ಒಳಹರಿವು ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಳ ಕಂಡಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿಗಾ ಕೇಂದ್ರ ಮಾಹಿತಿ ನೀಡಿದೆ. ಕಳೆದ ಒಂದು ವಾರದಿಂದ ರಾಜ್ಯಾದ್ಯಂತ ಉತ್ತಮ ಮಳೆಯಾಗುತ್ತಿದ್ದು, ಮುಂದಿನ ದಿನಗಳಲ್ಲಿ ಮಳೆ ಮತ್ತಷ್ಟು ಹೆಚ್ಚಾಗಲಿದ್ದು, ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಣೆ ಮಾಡಿದೆ. ಇದರಿಂದ ಕಾವೇರಿ ನದಿ ಹರಿವು ಮತ್ತಷ್ಟು ಹೆಚ್ಚಾಗಲಿದೆ.

## ಸರ್ಕಾರ ಬೀಳಿಸಲು ನಮ್ಮ ಪ್ರಯತ್ನ ಏನೂ ಬೇಕಾಗಿಲ್ಲ: ಮಾಜಿ ಸಚಿವ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ಸರ್ಕಾರ ಪತನ ಮಾಡುವ ಪ್ರಯತ್ನವನ್ನು ನಾವು ಮಾಡಲ್ಲ ಎಂದು ಮಾಜಿ ಡಿಸಿಎಂ ಡಾ. ಸಿಎನ್ ಅಶ್ವತ್ಥ ನಾರಾಯಣ ಸ್ಪಷ್ಟಪಡಿಸಿದರು. ಬೆಂಗಳೂರಿನಲ್ಲಿ ಮಾತನಾಡಿದ ಅವರು, ನಾವು ಅಂತಹ ಪ್ರಯತ್ನ ಮಾಡುವ ಅಗತ್ಯ ಇಲ್ಲ.ಕಾಂಗ್ರೇಸ್ ಸರ್ಕಾರ ಬಂದಾಗಿನಿಂದ ಸಿಎಂ ಹುದ್ದೆ ಪೈಪೋಟಿ ನಡೆಯುತ್ತಿದೆ. ಈ ಸರ್ಕಾರ ಉಳಿಯಲ್ಲ ಅಂತ ಜನನೇ ಹೇಳ್ತಾ ಇದ್ದಾರೆ ಎಂದರು. ಅವರ ಒಳಜಗಳದಿಂದ ಸರ್ಕಾರ ಬೀಳಲಿದೆ. ಲೋಕಸಭಾ ಚುನಾವಣೆ ತನಕ ಕಾಯ್ತಾ ಇದ್ರು. ಈಗ ಕುರ್ಚಿ ಕಾಲು ಮುರಿದುಕೊಂಡು ಪೈಪೋಟಿ ಮಾಡ್ತಾ ಇದ್ದಾರೆ ಸರ್ಕಾರ ಬೀಳಿಸಲು ನಮ್ಮ ಪ್ರಯತ್ನ ಏನೂ ಬೇಕಾಗಿಲ್ಲ. ಅವರೇ ಸಿಎಂ ಹುದ್ದೆಗೆ ಪೈಪೋಟಿ ಮಾಡಿ ಸರ್ಕಾರ ಬೀಳಲಿದೆ ಎಂದರು.

## ಎಲ್ಲಾ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳು ಗೆಲುವು ಸಾಧಿಸುವ ವಿಶ್ವಾಸವಿದೆ

• ಉದಯವಾಹಿನಿ, ಬೆಂಗಳೂರು

ವಿಧಾನಪರಿಷತ್ತಿಗೆ ನಡೆಯುವ ಚುನಾವಣೆಗೆ ಇಬ್ಬರು ಅಭ್ಯರ್ಥಿಗಳೂ ನಾಮಪತ್ರ ಸಲ್ಲಿಸಿದ್ದಾರೆ. ನಮ್ಮೆಲ್ಲ ಅಭ್ಯರ್ಥಿಗಳು ಗೆಲುವು ಸಾಧಿಸುವುದು ಖಚಿತ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ವಿಶ್ವಾಸದಿಂದ ನುಡಿದರು. ಮಾಧ್ಯಮ ಪ್ರತಿನಿಧಿಗಳ ಜೊತೆ ಅವರು ಮಾತನಾಡಿದರು. ನಮ್ಮ ಪಕ್ಷದ ಎಲ್ಲಾ ಹಿರಿಯ ಮುಖಂಡರು, ಜೆಡಿಎಸ್ ಪಕ್ಷದ ಸಮ್ಮುಖದಲ್ಲಿ ನಮ್ಮ ಇಬ್ಬರು ಅಭ್ಯರ್ಥಿಗಳು ಶುಭಗಳಿಗೆಯಲ್ಲಿ ನಾಮಪತ್ರ ಸಲ್ಲಿಸಿದ್ದಾರೆ. ವಿಧಾನಪರಿಷತ್‌ನಲ್ಲಿ ಅಪಾರ ಅನುಭವ ಇರುವ ನಮ್ಮ ಇಬ್ಬರು ಅಭ್ಯರ್ಥಿಗಳು ಮತ್ತೊಮ್ಮೆ ದೊಡ್ಡ ಅಂತರದಲ್ಲಿ ವಿಜಯಶಾಲಿಯಾಗಿ ಬರಲಿದ್ದಾರೆ ಎಂದು ನುಡಿದರು. ಈ ಚುನಾವಣೆಯನ್ನೂ ಒಗ್ಗಟ್ಟಾಗಿ ಎದುರಿಸಿ ಎಲ್ಲಾ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ಗೆಲುವು ಸಾಧಿಸುವ ವಿಶ್ವಾಸವಿದೆ ಎಂದು ತಿಳಿಸಿದರು.



- ಹ್ಯಾಟ್ರಿಕ್ ಗೆಲುವಿನ ಹುಮ್ಮಸ್ಸಿನಲ್ಲಿ ಮೋದಿ
- 12 ರಾಜ್ಯಗಳ ಸಿಎಂ, 6 ಮಿತ್ರಪಕ್ಷಗಳ ನಾಯಕರ ಸಮ್ಮುಖದಲ್ಲಿ ವಾರಣಾಸಿಯಲ್ಲಿ ಮೋದಿ ನಾಮಪತ್ರ ಸಲ್ಲಿಕೆ,
- ದಶಾಶ್ವಮೇಧಕ್ಕೆ ಭೇಟಿ

# ನಮೋ ನಾಮಿನೇಶನ್!

1 ವಾರಣಾಸಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನಾಮಪತ್ರ ಸಲ್ಲಿಕೆ

2 ನರೇಂದ್ರ ಮೋದಿಗೆ ಮುಖ್ಯ ಸೂಚಕರಾದ ಪಂಡಿತ್ ಗಣೇಶ್ವರ್ ಶಾಸ್ತ್ರಿ

3 ನಾಮಪತ್ರ ಸಲ್ಲಿಕೆ ವೇಳೆ ಪ್ರಧಾನಿ ಮೋದಿಗೆ ಯೋಗಿ ಆದಿತ್ಯನಾಥ್ ಸಾಥ್

**ಉತ್ತರ ಪ್ರದೇಶದ ವಾರಣಸಿ ಲೋಕಸಭಾ ಕ್ಷೇತ್ರದಿಂದ ಸತತ ಮೂರನೇ ಬಾರಿಗೆ ಆಯ್ಕೆ ಬಯಸಿ ಪ್ರಧಾನಿ ನರೇಂದ್ರ ಮೋದಿ ಅವರು ನಾಮಪತ್ರ ಸಲ್ಲಿಸಿದರು. ಈ ವೇಳೆ ಎನ್‌ಡಿಎ ನಾಯಕರು ಪ್ರಧಾನಿ ಅವರಿಗೆ ಸಾಥ್ ನೀಡುವ ಮೂಲಕ ಬೃಹತ್ ಶಕ್ತಿ ಪ್ರದರ್ಶನ ನಡೆಸಿದರು. ನಾಮಪತ್ರ ಸಲ್ಲಿಕೆಗೆ ಮುನ್ನ ಗಂಗಾ ನದಿಯಲ್ಲಿ ಪುಣ್ಯಸ್ನಾನ ಮಾಡಿ, ಕಾಲಭೈರವೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ವಾರಾಣಸಿ ಲೋಕಸಭಾ ಕ್ಷೇತ್ರದಿಂದ ಹ್ಯಾಟ್ರಿಕ್ ಬಾರಿಸುವ ಗುರಿಯೊಂದಿಗೆ ಪ್ರಧಾನಿ ಮೋದಿ ಅವರು ಬೆಳಗ್ಗೆ ೧೧.೪೦ಕ್ಕೆ ವಾರಾಣಸಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಉಮೇದುವಾರಿಕೆ ಸಲ್ಲಿಸಿದರು.**

### ದಶಾಶ್ವಮೇಧಕ್ಕೆ ಭೇಟಿ

ನಾಮಪತ್ರ ಸಲ್ಲಿಕೆ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ದಶಾಶ್ವಮೇಧ ಘಾಟ್‌ಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಬಳಿಕ ಗಂಗಾ ನದಿಯಲ್ಲಿನ ದೋಣಿಯಲ್ಲಿ ಸಂಚಾರ ಮಾಡಿದರು. ಈ ವೇಳೆ ವಿವಿಧ ರಾಜ್ಯಗಳು ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸಚಿವರು ಹಾಜರಿದ್ದರು 2014ರಲ್ಲಿ ಮೊದಲ ಬಾರಿಗೆ ವಾರಾನಸಿಯಿಂದ ನರೇಂದ್ರ ಮೋದಿ ಸ್ಪರ್ಧಿಸಿದಾಗ, ಅವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಎಎಪಿ ನಾಯಕ ಅರವಿಂದ್ ಕೇಜ್ರಿವಾಲ್ ಅವರಿಗಿಂತ ಸುಮಾರು 3.37 ಲಕ್ಷ ಹೆಚ್ಚು ಮತಗಳನ್ನು ಪಡೆದಿದ್ದರು. ಈ ಕ್ಷೇತ್ರದಲ್ಲಿ ಶೇ.58.35ರಷ್ಟು ಮತದಾನವಾಗಿತ್ತು.2019 ರಲ್ಲಿ, ವಾರಣಾಸಿಯಲ್ಲಿ ಶೇಕಡಾ 57.81 ರಷ್ಟು ಮತದಾನವಾದಾಗ, ಮೋದಿಯವರ ಗೆಲುವಿನ ಅಂತರವು ಸಮಾಜವಾದಿ ಪಕ್ಷದ ಶಾಲಿನಿ ಯಾದವ್ ವಿರುದ್ಧ 4.80 ಲಕ್ಷ ಮತಗಳಿಗೆ ಏರಿತು. ಕ್ಷೇತ್ರದ ಬಹುಪಾಲು ಮತದಾರರು ಬ್ರಾಹ್ಮಣರು, ಭೂಮಿಹಾರ್ಗಳು ಮತ್ತು ಜೈಸ್ವಾಲ್‌ಗಳು ಸೇರಿದಂತೆ ಮೇಲ್ಜಾತಿ ಹಿಂದೂಗಳು, ನಂತರ ಮುಸ್ಲಿಮರು ಮತ್ತು ಒಬಿಸಿಗಳು ಇದ್ದಾರೆ.



### ಮೂರನೇ ಬಾರಿ ಸ್ಪರ್ಧೆ!

ಪ್ರಧಾನಿ ಮೋದಿ ಅವರು ವಾರಣಾಸಿಯಿಂದ ಮೂರನೇ ಬಾರಿ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಪ್ರಧಾನಿ ಅಭ್ಯರ್ಥಿ ಎಂದು ಘೋಷಣೆಯಾದಾಗಿನಿಂದ ಅಂದರೆ 2014ರಿಂದ ವಾರಣಾಸಿಯಿಂದ ಮೋದಿ ಕಣಕ್ಕಿಳಿಯುತ್ತಿದ್ದಾರೆ. 2014ರಲ್ಲಿ ವಾರಣಾಸಿ ಜೊತೆ ವಡೋದರಾದಿಂದಲೂ ಕಣಕ್ಕಿಳಿದಿದ್ದ ನರೇಂದ್ರ ಮೋದಿ ಎರಡು ಕ್ಷೇತ್ರಗಳಲ್ಲೂ ಗೆಲುವು ಸಾಧಿಸಿದ್ದರು. ಬಳಿಕ ವಡೋದರಾ ಬಿಟ್ಟು ವಾರಣಾಸಿಯನ್ನು ಉಳಿಸಿಕೊಂಡಿದ್ದರು. 2019ರಲ್ಲಿ ವಾರಣಾಸಿಯಲ್ಲಿ ಮಾತ್ರ ಸ್ಪರ್ಧಿಸಿ, ಗೆಲುವು ಸಾಧಿಸಿದ್ದರು. ಈ ಬಾರಿಯೂ ಒಂದೇ ಕ್ಷೇತ್ರದಲ್ಲಿ ನರೇಂದ್ರ ಮೋದಿ ಸ್ಪರ್ಧಿಸಿದ್ದಾರೆ.

### ಬಿಗಿ ಭದ್ರತೆ

ಪ್ರಧಾನಿ ನರೇಂದ್ರ ಮೋದಿ ಅವರು ವಾರಣಸಿ ಲೋಕಸಭಾ ಕ್ಷೇತ್ರದಿಂದ ಮೂರನೇ ಬಾರಿ ಆಯ್ಕೆ ಬಯಸಿ ನಾಮಪತ್ರ ಸಲ್ಲಿಕೆ ಹಿನ್ನೆಲೆಯಲ್ಲಿ ದೇವ ನಗರಿ ವಾರಣಸಿಯಲ್ಲಿ ಬಾರಿ ಪೊಲೀಸ್ ಬಿಗಿ ಭದ್ರತೆ ಮಾಡಲಾಗಿತ್ತು. ಜೊತೆಗೆ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳು ,ಕೇಂದ್ರ ಸಚಿವರು ಭಾಗಿಯಾದ ಹಿನ್ನೆಲೆಯಲ್ಲಿ ಹಿಂದೆಂದೂ ಕಂಡು ಕೇಳರಿಯದ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು.

### ಗಣ್ಯಾತಿಗಣ್ಯರು ನಾಮಪತ್ರ ಸಲ್ಲಿಕೆಯಲ್ಲಿ ಭಾಗಿ

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಕೂಡ ನಾಮಪತ್ರ ಸಲ್ಲಿಕೆಯಲ್ಲಿ ಭಾಗವಹಿಸಿದ್ದಾರೆ. ಇದರೊಂದಿಗೆ ಎನ್‌ಡಿಎ ಮಿತ್ರಪಕ್ಷಗಳ ನಾಯಕರು ಭಾಗವಹಿಸಿದ್ದಾರೆ. ಇದರಲ್ಲಿ ಲೋಕದಳದ ರಾಷ್ಟ್ರೀಯ ಅಧ್ಯಕ್ಷ ಜಯಂತ್ ಚೌಧರಿ, ಎಲ್‌ಜೆಪಿ ಮುಖ್ಯಸ್ಥ ಚಿರಾಗ್ ಪಾಸ್ವಾನ್, ಅಪ್ನಾ ದಳ (ಎಸ್) ಅಧ್ಯಕ್ಷೆ ಅನುಪ್ರಿಯಾ ಪಟೇಲ್, ಎಸ್‌ಬಿಎಸ್‌ಪಿ ಅಧ್ಯಕ್ಷ ಓಂಪ್ರಕಾಶ್ ರಾಜ್‌ಭರ್, ಜಿತನ್ ರಾಮ್ ಮಾಂಝಿ, ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಕೂಡ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಉಪಸ್ಥಿತರಿದ್ದರು.

• ಉದಯವಾಹಿನಿ, ವಾರಾಣಸಿ

ಉತ್ತರ ಪ್ರದೇಶದ ವಾರಣಸಿ ಲೋಕಸಭಾ ಕ್ಷೇತ್ರದಿಂದ ಸತತ ಮೂರನೇ ಬಾರಿಗೆ ಆಯ್ಕೆ ಬಯಸಿ ಪ್ರಧಾನಿ ನರೇಂದ್ರ ಮೋದಿ ಅವರು ನಾಮಪತ್ರ ಸಲ್ಲಿಸಿದರು. ಈ ವೇಳೆ ಎನ್ ಡಿಎ ನಾಯಕರು ಪ್ರಧಾನಿ ಅವರಿಗೆ ಸಾಥ್ ನೀಡುವ ಮೂಲಕ ಬೃಹತ್ ಶಕ್ತಿ ಪ್ರದರ್ಶನ ನಡೆಸಿದರು.

ನಾಮಪತ್ರ ಸಲ್ಲಿಕೆಗೆ ಮುನ್ನ ಗಂಗಾ ನದಿಯಲ್ಲಿ ಪುಣ್ಯಸ್ನಾನ ಮಾಡಿ, ಕಾಲಭೈರವೇಶ್ವರನಿಗೆ ವಿಶೇಷ ಪೂಜೆ ಸಲ್ಲಿಸಿದ ಬಳಿಕ ವಾರಾಣಸಿ ಲೋಕಸಭಾ ಕ್ಷೇತ್ರದಿಂದ ಹ್ಯಾಟ್ರಿಕ್ ಬಾರಿಸುವ ಗುರಿಯೊಂದಿಗೆ ಪ್ರಧಾನಿ ಮೋದಿ ಅವರು ಬೆಳಗ್ಗೆ 11.40ಕ್ಕೆ ವಾರಾಣಸಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಉಮೇದುವಾರಿಕೆ ಸಲ್ಲಿಸಿದರು. ಈ ದಿನ ಅಭಿಜಿತ್ ಮುಹೂರ್ತ, ಆನಂದ ಯೋಗ, ಸರ್ವಾರ್ಥಿಸಿದ್ದ ಯೋಗ, ಭೌಮ ಪುಷ್ಯ ನಕ್ಷತ್ರದ ಕಾಕತಾಳೀಯ ಸಂಗಮವಾಗಿದ್ದು, ಇದು ಉತ್ತಮ ದಿನವಾಗಿದೆ ಎಂದು ಅಯೋಧ್ಯ ರಾಮಮಂದಿರ ಶಂಕು ಸ್ಥಾಪನೆಗೆ ಶುಭ ಮುಹೂರ್ತ ನೀಡಿದ್ದ ಪಂಡಿತ್ ಶಾಸ್ತ್ರಿ ದ್ರಾವಿಡ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ನಾಮಪತ್ರ ಸಲ್ಲಿಕೆಗೆ ಸಮಯ ನಿಗದಿ ಪಡಿಸಿದ್ದರು.

ನಾಮಪತ್ರ ಸಲ್ಲಿಕೆ ವೇಳೆ ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ 12ಕ್ಕೂ ಅಧಿಕ ಬಿಜೆಪಿ ಆಡಳಿತ ಮತ್ತು ಮೈತ್ರಿ ರಾಜ್ಯಗಳ ಮುಖ್ಯಮಂತ್ರಿಗಳು ಮೋದಿ ಅವರಿಗೆ ಸಾಥ್ ನೀಡಿದರು. ಜೂನ್ 1 ರಂದು ನಡೆಯಲಿರುವ 7ನೇ ಹಾಗು ಕಡೆಯ ಹಂತದ ಚುನಾವಣೆ ನಡೆಯಲಿದೆ.

ಪ್ರಧಾನಿ ನರೇಂದ್ರ ಮೋದಿ ಅವರಿಗೆ ಎನ್ ಡಿಎ ಮಿತ್ರ ಪಕ್ಷದ ಹಲವು ನಾಯಕರು ಸಥ್ ನೀಡಿದರು. ಈ ವೇಳೆ ಬಿಜೆಪಿಯ ಎನ್‌ಡಿಎ ಪಾಲುದಾರರಾದ ಲೋಕದಳ ಅಧ್ಯಕ್ಷ ಜಯಂತ್ ಚೌಧರಿ, ಎಲ್‌ಜೆಪಿ ಮುಖ್ಯಸ್ಥ ಚಿರಾಗ್ ಪಾಸ್ವಾನ್, ಅಪ್ನಾ ದಳ (ಎಸ್) ಅಧ್ಯಕ್ಷೆ ಅನುಪ್ರಿಯಾ ಪಟೇಲ್ ಮತ್ತು ಸುಹೇಲ್‌ದೇವ್ ಭಾರತೀಯ ಸಮಾಜ ಪಕ್ಷದ ಅಧ್ಯಕ್ಷ ಓಂಪ್ರಕಾಶ್ ರಾಜ್‌ಭರ್.ಟಿಡಿಪಿ ಮುಖ್ಯಸ್ಥ ಚಂದ್ರಬಾಬು ನಾಯ್ಡು ಭಾಗಿಯಾಗಿದ್ದರು. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರಲ್ಲದೆ, ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್, ಉತ್ತರ ಖಾಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ, ಮಧ್ಯ ಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್,ಛತ್ತೀಸ್ ಘಡ ಮುಖ್ಯಮಂತ್ರಿ ವಿಷ್ಣು ದೇವ ಸಾಯಿ, ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ್ ಶಿಂಧೆ, ರಾಜಸ್ತಾನದ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ, ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್, ಸಿಕ್ಕಿಂ ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಮತ್ತು ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸಹಾ ಸೇರಿದಂತೆ ಘಟಾನುಘಟಿ ನಾಯಕರು ಹಾಜರಿದ್ದರು.

### ಗಂಗೆ ದತ್ತು ಪಡೆದಿದ್ದಾಳೆ

ಗಂಗಾನದಿ ಜತೆಗಿನ 10 ವರ್ಷಗಳ ನಂಟು ಹೊಂದಿರುವ ಬಗ್ಗೆ ಪ್ರಧಾನಿ ಅವರು ವೀಡಿಯೊ ಹಂಚಿಕೊಂಡಿದ್ದು, ಗಂಗಾಮಾತೆ ನನ್ನನ್ನು ದತ್ತು ಪಡೆದಿದ್ದಾಳೆ ಎಂದು ಹೇಳಿದ್ದಾರೆ. ಈ 10 ವರ್ಷಗಳಲ್ಲಿ ನನ್ನ ಮತ್ತು ಗಂಗಾಮಾತೆಯ ಜತೆಗಿನ ನಂಟು ಇನ್ನಷ್ಟು ಬಲಿಷ್ಠವಾಗಿದೆ ಎಂದು ಅವರು ಬರೆದುಕೊಂಡಿದ್ದಾರೆ. ನಾಮಪತ್ರ ಸಲ್ಲಿಕೆ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ದಶಾಶ್ವಮೇಧ ಘಾಟ್‌ಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು. ಬಳಿಕ ಗಂಗಾ ನದಿಯಲ್ಲಿನ ದೋಣಿಯಲ್ಲಿ ಸಂಚಾರ ಮಾಡಿದರು.

# ಪ್ರಜ್ವಲ್ ಅಣ್ಣನ ಮಗನೇ ಹೌದು, ನನ್ನ ಕೇಳಿ ಹೋಗಿದ್ದಾನಾ?

## ವಿದೇಶಕ್ಕೆ ಹೋಗಿರುವ ಪ್ರಜ್ವಲ್ ರೇವಣ್ಣರನ್ನು ಏಕೆ ಕರೆಸಿಲ್ಲ?: ರಾಜ್ಯ ಸರ್ಕಾರಕ್ಕೆ ಎಚ್‌ಡಿಕೆ ಪ್ರಶ್ನೆ

• ಉದಯವಾಹಿನಿ, ಬೆಂಗಳೂರು

ಪ್ರಜ್ವಲ್ ರೇವಣ್ಣ ನನಗೆ ಅಣ್ಣನ ಮಗನೇ ಇರಬಹುದು. ನನ್ನ ಕೇಳಿ ವಿದೇಶಕ್ಕೆ ಹೋಗಿದ್ದಾನಾ? ಬೆಳೆದ ಮಕ್ಕಳು ನಮ್ಮನ್ನು ಕೇಳಿ ಹೋಗ್ತಾರಾ? ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಗರಂ ಆಗಿದ್ದಾರೆ.

ವಿದೇಶಕ್ಕೆ ಹೋಗಿರುವ ಪ್ರಜ್ವಲ್ ರೇವಣ್ಣರನ್ನು ಏಕೆ ಕರೆಸಿಲ್ಲ? ಎಂದು ರಾಜ್ಯ ಸರ್ಕಾರಕ್ಕೆ ಪ್ರಶ್ನೆ ಮಾಡಿದ್ದಾರೆ.

ದೇವೇಗೌಡರ ಕುಟುಂಬಕ್ಕೆ ಕಳಂಕ ತರಲು ಈ ರೀತಿ ಮಾಡಿದ್ದಾರೆ. ದೇವರಾಜೇಗೌಡರನ್ನು ಈಗ ಕೇಸ್ ಹಾಕಿ ಅರೆಸ್ಟ್ ಮಾಡಿದ್ದು ಯಾಕೆ? ಒಂದು ತಿಂಗಳಿನಿಂದ ಏನೇನೆಲ್ಲಾ ಬೆಳವಣಿಗೆ ಆಯಿತು? ದೊಡ್ಡ ತಿಮಿಂಗಲದ ಆಡಿಯೋ ಬಿಟ್ಟು, ದೇವರಾಜೇಗೌಡರ ಬಂಧನ ಮಾಡಿದ್ದಾರಾ? ಎಂದು ಕಿಡಿಕಾರಿದ್ದಾರೆ.

ಸಂತ್ರಸ್ತೆಯರಿಗೆ ನ್ಯಾಯ ಸಿಗುವಂತೆ ಆಗಬೇಕು. ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಒಂದು ಮಹಿಳೆ ದೂರು ಕೊಟ್ಟಿದ್ದಾರಲ್ಲ. ಆ ಹೆಣ್ಣು ಮಕ್ಕಳಿಗೆ ಹೆದರಿಸಿ ದೂರು ಪಡೆಯಲು ಪ್ರಯತ್ನ ಮಾಡ್ತಾ ಇದಾರೆ. ಅದೆಲ್ಲಾ ಕೆಲವೇ ದಿನಗಳಲ್ಲಿ ಹೊರಗೆ ಬರಲಿದೆ. ಅದರ ಬಗ್ಗೆ ಏನು ಕ್ರಮ ತಗೊಂಡಿದ್ದೀರಿ ಗೃಹ ಸಚಿವರೇ? ವಿಡಿಯೋದಲ್ಲಿ ಬಂದಂತಹ ಮಹಿಳೆಯರ ಕುಟುಂಬಗಳ ಬಗ್ಗೆ ಸರ್ಕಾರಕ್ಕೆ ಅನುಕಂಪ ಇದೆಯಾ? ಇದರಲ್ಲಿ ಯಾವುದನ್ನೂ ವಹಿಸಿಕೊಳ್ಳುವ ಪ್ರಶ್ನೆ ಇಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಈಗಿನ ಮಾಹಿತಿ ತಂತ್ರಜ್ಞಾನದಲ್ಲಿ ಅಪರಾಧಿ ನಿರಪರಾಧಿ ಆಗ್ತಾನೆ. ಸರ್ಕಾರಕ್ಕೆ ಬದ್ದತೆ ಇದ್ದರೆ ತನಿಖೆಯನ್ನು ಸೂಕ್ತ ರೀತಿಯಲ್ಲಿ ನಡೆಸಲಿ. ಕುಮಾರಸ್ವಾಮಿ ಅವರು ರೇವಣ್ಣ ಕುಟುಂಬ ಮುಗಿಸಲು ನೋಡ್ತಿದಾರೆ ಅಂತ ಅಪಪ್ರಚಾರ ಮಾಡ್ತಿದಾರೆ. ನಾನು ನ್ಯಾಯದ ಪರ, ಮಹಿಳೆಯರ ಪರ ಇದ್ದೇನೆ. ಈ

### ಸರ್ಕಾರದಲ್ಲೇ ಇದೆ ದೊಡ್ಡ ತಿಮಿಂಗಿಲ



### ರೇವಣ್ಣಗೆ ಜಾಮೀನು ಸಿಕ್ಕಿದೆ ಎಂದು ಸಂಭ್ರಮ ಬೇಡ

ಸಂತ್ರಸ್ತ ಮಹಿಳೆ ಕಿಡ್ನ್ಯಾಪ್ ಕೇಸ್‌ನಲ್ಲಿ ಮಾಜಿ ಸಚಿವ ಹೆಚ್.ಡಿ.ರೇವಣ್ಣಗೆ ಜಾಮೀನು ಸಿಕ್ಕಿದೆ. ರೇವಣ್ಣ ಕುಟುಂಬ ಕೊಂಚ ನಿರಾಳವಾದಂತಾಗಿದೆ. ರೇವಣ್ಣಗೆ ಜಾಮೀನು ಸಿಕ್ಕಿದೆ ಎಂದು ಸಂಭ್ರಮಿಸುವುದು ಬೇಡ.ಇದು ಸಂತಸಪಡಿವ ಸಮಯವಲ್ಲ ಎಂದು ಹೇಳಿದ್ದಾರೆ. ರಾಜ್ಯದಲ್ಲಿ ಹೀನಾಯ ಘಟನೆ ನಡೆದಿದೆ. ರಾಜ್ಯವೇ ತಲೆ ತಗ್ಗಿಸುವ ಘಟನೆ ಇದು ಎಂದು ಹೇಳಿದರು. ನಮಗೆ ಜನ್ಮ ಕೊಟ್ಟ ತಂದೆ-ತಾಯಿ ಇದ್ದಾರೆ. ಒಡಹುಟ್ಟಿದವರಿದ್ದಾರೆ. ಎಸ್‌ಐಟಿ ಈವರೆಗೂ ಪೆನ್ ಡ್ರೈವ್ ಪ್ರಕರಣ ಟಚ್ ಮಾಡಿಲ್ಲ. ಪೆನ್ ಡ್ರೈವ್ ಹಂಚಿದವರ ವಿರುದ್ಧ ಈವರೆಗೂ ಕ್ರಮ ಕೈಗೊಂಡಿಲ್ಲ. ರಾಜ್ಯ ಸರ್ಕಾರಕ್ಕೆ ಸಂತ್ರಸ್ತರ ಬಗ್ಗೆ ಕಿಂಚಿತ್ತಾದರೂ ಕಾಳಜಿ ಎಂಬುದು ಇದೆಯೇ? ಎಂದು ಪ್ರಶಿಸಿದ್ದಾರೆ.

ವಿಡಿಯೋದಲ್ಲಿ ಆ ವ್ಯಕ್ತಿಯ ಯಾವುದೇ ಚಿತ್ರಣ ಇಲ್ಲ ಅಂತ ಪತ್ರಿಕೆಯೊಂದು ಬರೆದಿದೆ. ಈ ಪ್ರಕರಣ ಎಲ್ಲಿಗೆ ಹೋಗುತ್ತೆ? ಎಂದು ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

**ಪೆನ್ ಡ್ರೈವ್ ಹಂಚಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇದ್ದಾನೆ : ಮಾಜಿ ಸಿಎಂ ಹೊಸ ಬಾಂಬ್**

ರಾಸಲೀಲೆ ಪೆನ್ ಡ್ರೈವ್ ಪ್ರಕರಣದ ಕುರಿತಂತೆ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಸ್ಫೋಟಕ ಹೇಳಿಕೆ ನೀಡಿದ್ದು, ಮಹಾನಾಯಕ ಆಯ್ತು, ಇದೀಗ ಪೆನ್ ಡ್ರೈವ್ ಪ್ರಕರಣದಲ್ಲಿ ದೊಡ್ಡ ತಿಮಿಂಗಿಲ ಇದೆ ಎಂದು ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪೆನ್ ಡ್ರೈವ್ ಹಂಚಿಕೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಇದ್ದಾನೆ. ದೊಡ್ಡ ತಿಮಿಂಗಿಲ ಹಿಡಿದ್ರೆ ಎಲ್ಲಾ ಗೊತ್ತಾಗುತ್ತೆ. ಆ ದೊಡ್ಡ ತಿಮಿಂಗಿಲ ಸರ್ಕಾರದಲ್ಲೇ ಇದ್ದಾರೆ. ಎಲ್ಲಿ ಹಿಡಿತೀರಿ? ದೊಡ್ಡ ತಿಮಿಂಗಿಲದ ಆಡಿಯೋ ಬಿಟ್ಟಿದ್ದಕ್ಕೆ ಕೇಸ್ ಹಾಕಿದ್ರು. ದೇವರಾಜೇಗೌಡನ ಮೇಲೆ ಕೇಸ್ ಹಾಕಿದ್ರು ಎಂದು ವಾಗ್ದಾಳಿ ನಡೆಸಿದ್ದಾರೆ.

ರೇವಣ್ಣಗೆ ಜಾಮೀನು ಸಿಕ್ಕಿದೆ ಎಂದು ಸಂಭ್ರಮ ಬೇಡ. ನಾನು ಸಂತೋಷ ಪಡುತ್ತೇನೆ ಎಂದು ಭಾವಿಸಬೇಡಿ. ಕಾರ್ಯಕರ್ತರು ಸಂಭ್ರಮಿಸುವ ಸಮಯ ಇದಲ್ಲ. ರಾಜ್ಯದಲ್ಲಿ ಹೀನಾಯ ಘಟನೆ ನಡೆದಿದೆ. ರಾಜ್ಯವೇ ತಲೆ ತಗ್ಗಿಸುವ ಘಟನೆ ಇದು ಎಂದು ಹೇಳಿದರು.

# ಕುಮಾರಸ್ವಾಮಿ ತಿಮಿಂಗಲ ಹೇಳಿಕೆಗೆ ಡಿಸಿಎಂ ಡಿಕೆಶಿ ತಿರುಗೇಟು!

• ಉದಯವಾಹಿನಿ, ಬೆಂಗಳೂರು

ಸಂಸದ ಪ್ರಜ್ವಲ್ ರೇವಣ್ಣದ್ದು ಎನ್ನಲಾದ ಅಶ್ಲೀಲ ವಿಡಿಯೋ ಪೆನ್‌ಡ್ರೈವ್ ಪ್ರಕರಣದಲ್ಲಿ ದೊಡ್ಡ ತಿಮಿಂಗಲ ಹಿಡಿದ್ರೆ ಸತ್ಯ ಏನು ಎಂಬುವುದು ಹೊರ ಬರುತ್ತಿದೆ ಎಂದು ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಡಿಸಿಎಂ ಡಿಕೆ ಶಿವಕುಮಾರ್ ವಿರುದ್ಧ ಪರೋಕ್ಷವಾಗಿ ವಾಗ್ದಾಳಿ ನಡೆಸಿದ್ದರು.

ಈ ಸಂಬಂಧ ಪ್ರತಿಕ್ರಿಯೆ ನೀಡಿರುವ ಶಿವಕುಮಾರ್ ಯಾರು ಯಾರನ್ನು ಬೇಕಾದರೂ ಹೊಡೆದು ಬಡಿದು ನುಂಗಿಹಾಕಿಕೊಳ್ಳಲಿ' ಎಂದು ಟಾಂಗ್ ನೀಡಿದ್ದಾರೆ. ನನಗೆ ಸ್ಟ್ರೈಕ್ ಮಾಡುವ ಅವಶ್ಯಕತೆ..ನರೇಟಿವ್ ಬದಲಾಯಿಸುವ ಅವಶ್ಯಕತೆಯೂ ಇಲ್ಲ ಎಂದಿದ್ದಾರೆ.

ಎಲ್ಲಾದಕ್ಕೂ ಉತ್ತರ ಸಮಯವೇ ನೀಡುತ್ತದೆ. ನಾನು ಜಸ್ಟ್ ಎಕ್ಸಿಬಿಟರ್, ನಾನು ಪ್ರೊಡ್ಯುಸರೂ ಅಲ್ಲ, ಡೈರೆಕ್ಟರೂ ಅಲ್ಲ. ಐ ಫೀಲ್ ಸ್ವಾರಿ ಫಾರ್ ಹಿಮ್ ಎಂದು ಕುಮಾರಸ್ವಾಮಿ ಅವರನ್ನು ಉದ್ದೇಶಿಸಿ ಹೇಳಿದ್ದಾರೆ. ಅವರದ್ದು ದೊಡ್ಡ ಕುಟುಂಬ. ಹೀಗೆಲ್ಲಾ ಆಗಬಾರದಿತ್ತು. ಅದಕ್ಕಾಗಿ ನನಗೂ ಬೇಸರವಿದೆ, ನೋವಿದೆ.

ನಾನು ಯಾರಿಗೂ ಕೆಟ್ಟದ್ದು ಬಯಸುವುದಿಲ್ಲ, ನನಗೆ ಪ್ರಕರಣದ ಸಂಬಂಧವೂ ಇಲ್ಲ ಎಂದ ಡಿಕೆಶಿ, ನನ್ನ ಬ್ರದರ್ ಕುಮಾರಣ್ಣನಿಗೆ ಮಾತ್ರ ಅಸೆಂಬ್ಲಿಯಲ್ಲಿ ಉತ್ತರ ಕೊಡುತ್ತೇನೆ ಎಂದು ತಿಳಿಸಿದ್ದಾರೆ.



### ಇಂಡಿಯಾ ಒಕ್ಕೂಟದ ಸರ್ಕಾರ ರಚನೆ ಆಗಲಿದೆ

ಇಡೀ ದೇಶದಲ್ಲಿ ಇಂಡಿಯಾ ಒಕ್ಕೂಟದ ಪರವಾದ ಅಲೆಯಿದೆ. ಒಳ್ಳೆಯ ವಾತಾವರಣ ಕಾಣುತ್ತಿದ್ದು, ನಮ್ಮ ಒಕ್ಕೂಟ ಸರ್ಕಾರ ರಚನೆ ಮಾಡುತ್ತದೆ ಎಂದು ಡಿಸಿಎಂ ಡಿ. ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು. ಮಹಾರಾಷ್ಟ್ರ ಮುಖ್ಯಮಂತ್ರಿ ಕರ್ನಾಟಕದಲ್ಲಿ ಆಪರೇಷನ್ ಮಾಡುವ ಬಗ್ಗೆ ಮಾತನಾಡಿದ್ದಾರೆ. ಅವರ ಸರ್ಕಾರವೇ ಬಿದ್ದು ಹೋಗುವ ಸ್ಥಿತಿಯಲ್ಲಿದೆ ಎಂದರು.

**ಈ ದಿನದ ದರ** ಪೆಟ್ರೋಲ್: 99.84 ₹/L ಡೀಸೆಲ್ : 85.93 ₹/L ಬಂಗಾರ: ₹7,282/Gram(24ct) ₹6,675/Gram(22ct) ಬೆಳ್ಳಿ: ₹86.00/Gram

## ಕನ್ನಡಿಗರ ತಂಟೆಗೆ ಬರುವ ಮುನ್ನ ಬೆಳವಡಿ ಮಲ್ಲಮರನ್ನು ಒಮ್ಮೆ ನೆನಪು ಮಾಡಿಕೊಳ್ಳಿ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಬೀಳಿಸೋದಕ್ಕೆ ಯಾವುದೇ ಕಾರಣಕ್ಕೂ ಸಾಧ್ಯವಿಲ್ಲ. ಕನ್ನಡಿಗರ ತಂಟೆಗೆ ಬರುವ ಮುನ್ನ ವೀರ ರಾಣಿ ಬೆಳವಡಿ ಮಲ್ಲಮರನ್ನು ಒಮ್ಮೆ ನೆನಪು ಮಾಡಿಕೊಳ್ಳಿ ಎಂಬುದಾಗಿ ಕರ್ನಾಟಕ ಕಾಂಗ್ರೆಸ್‌ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂಧೆಗೆ ತಿರುಗೇಟು ನೀಡಿದೆ. ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವಂತ ಕರ್ನಾಟಕ ಕಾಂಗ್ರೆಸ್, ಕರ್ನಾಟಕದ ಸರ್ಕಾರವನ್ನು ಉರುಳಿಸಲು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ್ ಶಿಂಧೆಯವರ ಸಹಕಾರ ಕೋರಿರುವ ಕರ್ನಾಟಕದ ಬಿಜೆಪಿ ನಾಯಕರನ್ನು ಕಿತ್ತೂರು ರಾಣಿ ಚೆನ್ನಮ್ಮನ ಬೆನ್ನಿಗೆ ಚೂರಿ ಹಾಕಿದ ಮಲ್ಲಪ್ಪ ಶೆಟ್ಟಿಗೆ ಹೋಲಿಸಬಹುದು ಎಂದಿದೆ. ಏಕನಾಥ ಶಿಂಧೆ ಅವರೇ, ಈ ಸರ್ಕಾರ ಕನ್ನಡಿಗರ ಸ್ವಾಭಿಮಾನದ ಸರ್ಕಾರ, ಕನ್ನಡಿಗರ ಆಶೀರ್ವಾದದ ಸರ್ಕಾರ, ಕನ್ನಡಿಗರ ಪ್ರೀತಿಯ ಸರ್ಕಾರ. ಕನ್ನಡಿಗರ ತಂಟೆಗೆ ಬರುವ ಮುನ್ನ ವೀರ ರಾಣಿ ಬೆಳವಡಿ ಮಲ್ಲಮರನ್ನು ಒಮ್ಮೆ ನೆನಪು ಮಾಡಿಕೊಳ್ಳಿ ಎಂಬುದಾಗಿ ಗುಡುಗಿದೆ.

## ರಾಜ್ಯಕ್ಕೇ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ 5 ಲಕ್ಷ ರೂ ನೀಡಿದ ಡಿಸಿಎಂ

• **ಉದಯವಾಹಿನಿ, ಬೆಂಗಳೂರು**

ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಬಾಗಲಕೋಟೆಯ ಅಂಕಿತಾ ಬಸಪ್ಪ ಮೊದಲನೇ ಸ್ಥಾನಗಳಿಸಿದ್ದಾರೆ.ಈ ನಡುವೆ ಇಂದು ಅಂಕಿತ ಬಸಪ್ಪ ಅವರು ಡಿ.ಸಿಎಂ ಡಿ.ಕೆ ಶಿವಕುಮಾರ್ ಅವರನ್ನು ಬೇಟಿಯಾದರು ಈ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣದಲ್ಲಿ ಶಿವಕುಮಾರ್ ಅವರು ಮಾಹಿತಿಯನ್ನು ಹಂಚಿಕೊಂಡರು. ಪರೀಕ್ಷೆಯಲ್ಲಿ ರಾಜ್ಯಕೆ ಪ್ರಥಮ ಸ್ಥಾನ ಪಡೆದ ಬಾಗಲಕೋಟೆಯ ಮುಧೋಳ ಮೂಲದ ವಿದ್ಯಾರ್ಥಿನಿ ಅಂಕಿತಾ ಬಸಪ್ಪ ಮೂರನೇ ಸ್ಥಾನ ಪಡೆದ ಮಂಡ್ಯದ ಕನ್ನಲಿ ಗ್ರಾಮದ ನವನೀತ್ ಅವರನ್ನು ಭೇಟಿಯಾಗಿ ಸನ್ಮಾನಿಸಿ ಗೌರವಿಸಿದೆ. ಹಾಗೆಯೇ ಅವರ ಮುಂದಿನ ವಿದ್ಯಾಭ್ಯಾಸಕ್ಕಾಗಿ ಅಂಕಿತಾಗೆ 5 ಲಕ್ಷ ರೂ. ಹಾಗೂ ನವನೀತ್‌ಗೆ 2 ಲಕ್ಷ ರೂ. ಚೆಕ್ ವಿತರಿಸಿದೆ. ಸರ್ಕಾರಿ ಶಾಲೆಯ ಮಕ್ಕಳು ಯಾರಿಗೇನೂ ಕಡಿಮೆಯಿಲ್ಲ ಎಂಬುದನ್ನು ಈ ಇಬ್ಬರೂ ಮಕ್ಕಳು ನಿರೂಪಿಸಿದ್ದಾರೆ. ಮುಂದೆ ಕೂಡ ಇದೇ ರೀತಿ ಓದಿ ನಿಮ್ಮ ಶಾಲೆ, ಶಿಕ್ಷಕರು, ಪೋಷಕರಿಗೆ ಕೀರ್ತಿ ತನ್ನಿ ಎಂದು ಶುಭ ಹಾರೈಸಿದೆ ಅಂತ ಹೇಳಿದ್ದಾರೆ.

## ಪ್ರತಿಭಟನೆ: ಪ್ರಯಾಣಿಕರ ಪರದಾಟ!

• **ಉದಯವಾಹಿನಿ, ಬೆಂಗಳೂರು**

ನಿಗದಿ ಮಾಡಿದ ಸಂಬಳಕ್ಕಿಂತ ಕಡಿಮೆ ಸಂಬಳ ನೀಡುತ್ತಿರುವ ಹಿನ್ನಲೆಯಲ್ಲಿ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಚಾಲಕರಿಂದ ದಿಢೀರ್ ಪ್ರತಿಭಟನೆ ನಡೆಸಿದ ಸನ್ನಿವೇಶ ಕಂಡು ಬಂದಿದೆ. ಇನ್ನೂ ಶಾಂತಿನಗರ ಡಿಪೋ- 3 ರ ಮುಂದೆ ಬಸ್ಸನ್ನು ಹೊರ ತೆಗೆಯದೇ ತಮಗೆ ಬರಬೇಕಾಗಿರುವ ಸಂಬಂಳಕ್ಕಾಗಿ ಡ್ರೈವರ್‌ಗಳು ಪ್ರತಿಭಟಿಸಿದರು. ಇನ್ನೂ ಸನ್ನಿವೇಶವನ್ನು ಅರಿತುಕೊಂಡು ಶೀಘ್ರವೇ ಬಿಎಂಟಿಸಿ ಅಧಿಕಾರಿಗಳು ವೇತನ ನೀಡುವ ಭರವಸೆ ನೀಡಿದ ಬಳಿಕ ಮಧ್ಯಾಹ್ನ ಮುಷ್ಕರವನ್ನು ಹಿಂದಕ್ಕೆ ಪಡೆದು ಚಾಲಕರು ಕರ್ತವ್ಯಕ್ಕೆ ಹಾಜರಾದರು ಎನ್ನಲಾಗಿದೆ.

## ಎಕ್ಸ್‌ಪ್ರೆಸ್ ವೇನಲ್ಲಿ ವಿಶೇಷ ಕ್ಯಾಮೆರಾ!

• **ಉದಯವಾಹಿನಿ, ಬೆಂಗಳೂರು**

ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ತಪ್ಪಿಸಲು, ಸಾವು-ನೋವು ಕಡಿಮೆ ಮಾಡಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಕೃತಕ ಬುದ್ದಿಮತ್ತೆ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸುತ್ತಿದೆ. ಮಿತಿ ಮೀರಿ ವೇಗವಾಗಿ ಚಲಿಸುವ ವಾಹನಗಳ ಮೇಲೆ ನಿಗಾ ಇಡಲು ಕೃತಕ ಬುದ್ದಿಮತ್ತೆ (ಎಐ) ಆಧಾರಿತ ಸ್ವಯಂಚಾಲಿತ ನಂಬರ್ ಪ್ಲೇಟ್ ರೆಕಗ್ನಿಷನ್ (ಎಎನ್‌ಪಿಆರ್) ಕ್ಯಾಮೆರಾಗಳನ್ನು ಬೆಂಗಳೂರು-ನಿಡಘಟ್ಟ ನಿಡಘಟ್ಟ-ಮೈಸೂರು ಮಾರ್ಗಗಳ ಆಯಕಟ್ಟಿನ ಸ್ಥಳಗಳಲ್ಲಿ ಅಳವಡಿಸಲಾಗುತ್ತಿದೆ. ಮೊದಲಿಗೆ 118 ಕಿಲೋಮೀಟರ್ ಉದ್ದಕ್ಕೂ ಪ್ರತಿ 10 ಕಿಲೋಮೀಟರ್ ದೂರಕ್ಕೆ ಒಂದು ಕ್ಯಾಮೆರಾವನ್ನು ಅಳವಡಿಸಲು ಯೋಜಿಸಲಾಗಿತ್ತು. ಇದೀಗ ಪ್ರತಿ 2 ಕಿಲೋಮೀಟರ್ ಒಂದರಂತೆ 60ಕ್ಕೂ ಹೆಚ್ಚು ಎಐ ಆಧಾರಿತ ಕ್ಯಾಮೆರಾಗಳನ್ನು ಅಳವಡಿಸಲು ನಿರ್ಧರಿಸಲಾಗಿದೆ. ರಾಷ್ಟ್ರೀಯ ಹೆದ್ದಾರಿಯು ಸಂಚಾರಕ್ಕೆ ಮುಕ್ತವಾದ 9 ತಿಂಗಳಲ್ಲಿ ಅಪಘಾತದಿಂದ 185 ಜನರು ಮೃತಪಟ್ಟಿದ್ದರು. ಹೆದ್ದಾರಿಯ ಸುರಕ್ಷತೆ ಕುರಿತು ಸಾಕಷ್ಟು ಟೀಕೆಗಳು ವ್ಯಕ್ತವಾಗಿದ್ದರು. ಈ ಹಿನ್ನಲೆ ಕ್ಯಾಮೆರಾಗಳನ್ನು ಅಳವಡಿಸಲಾಗಿದೆ.

## ಪ್ರಜ್ವಲ್ ರೇವಣ್ಣ ಭಾರತಕ್ಕೆ ವಾಪಸ್?

• **ಉದಯವಾಹಿನಿ, ಬೆಂಗಳೂರು**

ಶಾಸಕ ಎಚ್.ಡಿ.ರೇವಣ್ಣಗೆ ಜಾಮೀನು ಸಿಕ್ಕಿದ ಹಿನ್ನೆಲೆಯಲ್ಲಿ ವಿದೇಶದಲ್ಲಿ ತಲೆಮರೆಸಿಕೊಂಡಿರುವ ಪ್ರಜ್ವಲ್ ರೇವಣ್ಣ ವಾಪಸ್ ಆಗುವ ಹಾಗೂ ಕೋರ್ಟ್‌ಗೆ ಶರಣಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಈ ವಾರದಲ್ಲಿ ಪ್ರಜ್ವಲ್ ರೇವಣ್ಣ ಅವರು ವಿದೇಶದಿಂದ ವಾಪಸ್ ಆಗಲಿದ್ದಾರೆ. ಬುಧವಾರ ಸಂಜೆ ಬೆಂಗಳೂರಿಗೆ ಬಂದು ಗುರುವಾರ ನ್ಯಾಯಾಲಯದ ಮುಂದೆ ಪ್ರಜ್ವಲ್ ಹಾಜರಾಗಲಿದ್ದಾರೆ ಎನ್ನಲಾಗಿದೆ.ಇದರ ನಡುವೆ ಎಸ್‌ಐಟಿ ಮುಂದೆ ಬುಧವಾರ ಭವಾನಿ ರೇವಣ್ಣ ವಿಚಾರಣೆಗೆ ಹಾಜರಾಗುವ ಸಾಧ್ಯತೆ ಇದೆ.ಶಾಸಕ ಎಚ್.ಡಿ.ರೇವಣ್ಣಗೆ ಜಾಮೀನು ಸಿಕ್ಕ ಬಳಿಕ ನ್ಯಾಯಾಲಯದ ಮುಂದೆ ಹಾಜರಾಗುವಂತೆ ರೇವಣ್ಣ ಕುಟುಂಬದ ವಕೀಲರು ಸಲಹೆ ಸಹ ನೀಡಿದ್ದು ಹೀಗಾಗಿ ಈ ವಾರದಲ್ಲಿಯೇ ಪ್ರಜ್ವಲ್ ರೇವಣ್ಣ ವಿದೇಶದಿಂದ ಬರುವ ಸಾಧ್ಯತೆಗಳಿವೆ.


## ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್

• **ಉದಯವಾಹಿನಿ, ಬೆಂಗಳೂರು**

ಮಾಜಿ ಸಚಿವ, ಜೆಡಿಎಸ್ ಶಾಸಕ ಹೆಚ್.ಡಿ.ರೇವಣ್ಣ ಜೈಲಿನಿಂದ ಬಿಡುಗಡೆಯಾಗುತ್ತಿದ್ದಂತೆ ಜೈಲಿನ ಮುಂಭಾಗದಲ್ಲಿ ಜಮಾವಣೆಗೊಂಡಿದ್ದ ಜೆಡಿಎಸ್ ಕಾರ್ಯಕರ್ತರನ್ನು ನಿಯಂತ್ರಿಸಲು ಪೊಲೀಸರು ಲಾಠಿ ಚಾರ್ಜ್ ಮಾಡಿದ ಘಟನೆ ನಡೆದಿದೆ.ಮಹಿಳೆ ಕಿಡ್ನ್ಯಾಪ್ ಕೇಸ್‌ನಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಹೆಚ್.ಡಿರೇವಣ್ಣಗೆ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.ಈ ಹಿನ್ನೆಲೆಯಲ್ಲಿ ಹೆಚ್.ಡಿ.ರೇವಣ್ಣ ಪರಪ್ಪನ ಅಗ್ರಹಾರ ಜೈಲಿನಿಂದ ಬಿಡಿಗಡೆಯಾಗಿದ್ದಾರೆ. ರೇವಣ್ಣ ಬಿಡುಗಡೆಯಾಗಿ ಹೊರಬರುತ್ತಿದ್ದಂತೆ ಜೈಲು ಬಳಿ ಜೆಡಿಎಸ್ ಕಾರ್ಯಕರ್ತರು ಜಮಾವಣೆಗೊಂಡಿದ್ದು, ಸಂಭ್ರಮಾಚರಣೆಗೆ ಸಜ್ಜಾಗಿದ್ದಾರೆ.ಸ್ಥಳದಲ್ಲಿ ಜಮಾವಣೆಗೊಂಡಿರುವ ಕಾರ್ಯಕರ್ತರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸಪಟ್ಟಿದ್ದಾರೆ. ಈ ವೇಳೆ ಪೊಲೀಸರು ಲಾಠಿ ಚಾರ್ಜ್ ನಡೆಸಿ ಜೆಡಿಎಸ್ ಕಾರ್ಯಕರ್ತರನ್ನು ಚದುರಿಸಿದ ಘಟನೆ ನಡೆದಿದೆ.

## ಶೇ 92% ಅಂಕ ಹೆತ್ತವರಿಗೂ ಶಾಲೆಗೆ ಕೀರ್ತಿ

• **ಉದಯವಾಹಿನಿ, ಬೆಂಗಳೂರು**



ದೇಶವ್ಯಾಪ್ತಿ ಪ್ರಕಟವಾದ ಸಿಬಿಎಸ್‌ಈ (ಸೆಂಟ್ರಲ್ ಬೋರ್ಡ್ ಆಫ್ ಸೆಕೆಂಡರಿ ಎಜುಕೇಷನ್) 10ನೇ ತರಗತಿ ಪರೀಕ್ಷೆಯಲ್ಲಿ ಕೆಂಗೇರಿಯ ಕೊಡಿಪಾಳ್ಯದ ವಿಶ್ವ ವೆಂಕಟೇಶ್ವರ ಇಂಟರ್ನ್ಯಾಷನಲ್ ಸ್ಕೂಲ್‌ನ ಅನ್ನಪೂರ್ಣಮ, ಶ್ರೀಪಾದರಾವ್ ದಂಪತಿಯ ಪುತ್ರಿ ಮಾನ್ಯ ಎಸ್ ರಾವ್ ಶೇ 92% ಹೆಚ್ಚು ಅಂಕ ಗೊಳಿಸಿ ಉತ್ತೀರ್ಣ ರಾಗಿದ್ದು ಹೆತ್ತವರಿಗೂ ಶಾಲೆಗೆ ಕೀರ್ತಿ ತಂದಿದ್ದಾಳೆ, ಮಾನ್ಯ ಸೋಶಿಯಲ್ ಸೈನ್ಸ್ ನಲ್ಲಿ 98, ಗಣಿತದಲ್ಲಿ 95, ಇಂಗ್ಲಿಷ್ 93, ಕನ್ನಡ 93, ವಿಜ್ಞಾನದಲ್ಲಿ 81 ಅಂಕಗಳನ್ನು ಪಡೆದಿದ್ದಾಳೆ, ಸಾಮಾನ್ಯ ಮಾಧ್ಯಮ ವರ್ಗದ ಕುಟುಂಬದ ಇವಳ ಸಾಧನೆ ಮೆಚ್ಚುವಂತದಾಗಿದ್ದು ಮಾದರಿಯಾಗಿದ್ದಾಳೆ ಎಂದು ವಿದ್ಯಾ ಸಂಸ್ಥೆಯ ಅಧ್ಯಕ್ಷ ಕಟ್ಟಾ ಬಾಲಾಜಿ ಬಾಬು ಅಭಿನಂದಿಸಿದರು, ಇವಳ ಈ ಸಾಧನೆಗೆ ಪೋಷಕರು, ಅಧ್ಯಾಪಕರು, ಸಹಪಾಠಿಗಳು ಹರ್ಷ ವ್ಯಕ್ತಪಡಿಸಿ ಅಭಿನಂದಿಸಿದ್ದಾರೆ.

# ಹವಾಮಾನ ಇಲಾಖೆಯ ಮೈಲಿಗಲ್ಲು ಹೆಜ್ಜೆಗೆ ತೊಡಕು

### ■ ದಿನದಿಂದ ಹಿಡಿದು 5 ದಿನಗಳ ಹವಾಮಾನ ಮುನ್ಸೂಚನೆ, ಸಾಧನ ಅಳವಡಿಕೆಗೆ ಹಿನ್ನಡೆ

• **ಉದಯವಾಹಿನಿ, ಬೆಂಗಳೂರು**




ಉದಯವಾಹಿನಿ ಚಿತ್ರ

ಕರ್ನಾಟಕದ ಹವಾಮಾನ ಮುನ್ಸೂಚನೆಯ ಚಿತ್ರಣ ಕೊಡುಗೆ ಭಾರತೀಯ ಹವಾಮಾನ ಇಲಾಖೆ ಅಧಿಕಾರಿಗಳು ಈ ವಲಯದಲ್ಲಿ ಮತ್ತೊಂದು ಮೈಲಿಗಲ್ಲು ಸಾಧನೆಗೆ ಮುಂದಾಗಿದೆ. ಆದರೆ ಇದಕ್ಕೆ ಸಣ್ಣ ತೊಡಕು ಉಂಟಾಗಿದೆ.

ಬೆಂಗಳೂರು ಸೇರಿದಂತೆ ಕರ್ನಾಟಕದ ಹವಾಮಾನ ವರದಿಯನ್ನು ತಿಳಿಸಲು ರಾಜ್ಯ ಮತ್ತು ಭಾರತೀಯ ಹವಾಮಾನ ಸಂಸ್ಥೆಗಳು ಇವೆ. ಮುಂದಿನ ಮೂರು ದಿನದಿಂದ ಹಿಡಿದು ಐದು ದಿನಗಳ ಹವಾಮಾನ ಮುನ್ಸೂಚನೆ ಖಚಿತತೆಯನ್ನು ಹಾಲಿ ಸಂಸ್ಥೆಗಳು ನೀಡುತ್ತಿವೆ.

ಇದೀಗ ಇನ್ನು ಒಂದು ಹೆಜ್ಜೆ ಮುಂದೆ ಹೋಗಿರುವ ಐಎಂಡಿ ಹವಾಮಾನ ತಜ್ಞರು, ಹವಾಮಾನ ವೈಪರಿತ್ಯ, ಮಳೆ, ತಾಪಮಾನ ಇನ್ನಿತರ ವಿಷಯಗಳ ಮತ್ತಷ್ಟು ನಿಖರ ಮಾಹಿತಿಗೆ ಬೆಂಗಳೂರಿನಲ್ಲಿ 'ಡಾಪ್ಲರ್ ವೆದರ್ ರಾಡಾರ್ ಅಳವಡಿಕೆಗೆ ಮುಂದಾಗಿದೆ. ಆದರೆ ಈ ಸಾಧನ ಅಳವಡಿಕೆಗೆ ಹಿನ್ನಡೆ ಆಗಿದೆ ಎಂದು ವರದಿ ಆಗಿದೆ.

ಡಾಪ್ಲರ್ ವೆದರ್ ರಾಡಾರ್ ಅನ್ನು ಅತೀ ಎತ್ತರದ ಕಟ್ಟಡದ ಮೇಲೆ ಅಳವಡಿಕೆಗೆ ಐಎಂಡಿ ಯೋಜಿಸಿದೆ. ಈ ಬಗ್ಗೆ ಸರ್ಕಾರಿ ಮತ್ತು ಖಾಸಗಿ ಕಟ್ಟಡದ ಮೇಲೆ ಅಳಡಿಕೆಗೆ ಮುಂದಾಗಿದ್ದು, ಮಾಲೀಕರ ಜತೆ ಮಾತುಕತೆ ನಡೆಸಿದೆ. ಅದರೆ ನಗರದಲ್ಲಿ ಎಲ್ಲೂ ಅದಕ್ಕೆ ಸೂಕ್ತ ಜಾಗ ಸಿಕ್ಕಿಲ್ಲ. ಹೀಗಾಗಿ ಮಹತ್ವದ ಯೋಜನೆಗೆ ತಾತ್ಕಲಿಕವಾಗಿ ಹಿನ್ನಡೆ ಆಗಿದೆ.

**ಜಿಲ್ಲೆಗಳಲ್ಲಿ ಭಾರೀ ಮಳೆ**

> **ಪ್ರಸ್ತುತದಲ್ಲಿ ಉತ್ತರ ಒಳನಾಡಿನಲ್ಲಿ ಭೂಮಿ ಮೇಲ್ಮೈನಲ್ಲಿ ಸ್ಟ್ರಫ್ ಏರ್ಪಟ್ಟಿದೆ. ಇದನ್ನು ಹವಾಮಾನ ಇಲಾಖೆ ಸುಮಾರು ನಾಲ್ಕು ದಿನಗಳ ಹಿಂದೆಯೇ ಮುನ್ಸೂಚನೆ ನೀಡಿದೆ. ಇದರಿಂದಲೇ ಬೆಂಗಳೂರು ಸೇರಿದಂತೆ ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಭಾರೀ ಮಳೆ ಬರುತ್ತಿದೆ. ಉತ್ತರ ಕರ್ನಾಟಕ ಹಾಗೂ ಇನ್ನಿತರ ಭಾಗದಲ್ಲಿ ಸಾಧಾರಣ ಮಳೆ ಆಗುತ್ತಿದೆ.**

ಕೆಲವೇ ದಿನಗಳಲ್ಲಿ ಮುಂಗಾರು ಮಳೆ ಆರಂಭವಾಗಲಿದೆ. ಮಳೆಗಾಲ ಹಿನ್ನೆಲೆಯಲ್ಲಿ ಈ ರಾಡಾರ್ ಅಳಡವಿಕೆ ಭಾರೀ ಮಹತ್ವ ಪಡೆದಿದೆ.

ಈಗಾಗಲೇ ಇದೇ ಐಎಂಡಿಯು ಗೋವಾ ಹಾಗೂ ತಮಿಳುನಾಡಿನಲ್ಲಿ ಯಶಸ್ವಿಯಾಗಿ ಅಳವಡಿಕೆ ಮಾಡಿದೆ. ಅದೇ ರೀತಿ ಬೆಂಗಳೂರಿನಲ್ಲಿ ಅಳವಡಿಕೆಗೆ ಐಎಂಡಿ ಮುಂದಾಗಿದೆ. ಈಗಾಗಲೇ ಹೆಸರಘಟ್ಟ, ಬೆಂಗಳೂರು ಕೃಷಿ ವಿದ್ಯಾಲಯ (ಜಿಕೆವಿಕೆ) ಭಾಗದಲ್ಲಿ ಪರಿಶೀಲಿಸಿರುವ ಅಧಿಕಾರಿಗಳು ಅಲ್ಲಿನ ಸ್ಥಳ ಈ ರಾಡಾರ್ ಅಳವಡಿಕೆಗೆ ಯೋಗ್ಯವಾಗಿಲ್ಲ ಎಂದು ಹೇಳಿದೆ. ಅಲ್ಲದೇ ಖಾಸಗಿ ಮತ್ತು ಸರ್ಕಾರ ಬೃಹತ್ ಕಟ್ಟಡಗಳ ಮಾಲೀಕರ ಜೊತೆಗೆ ಐಎಂಡಿ ಅಧಿಕಾರಿಗಳು ಮಾತುಕತೆ ನಡೆಸಿದ್ದಾರೆ.

ಈ ರಾಡಾರ್ ಅನ್ನು ಸುಮಾರು 25 ಅಂತಸ್ತಿನ ಕಟ್ಟಡಗಳ ಮೇಲೆ ಅಳವಡಿಸಬೇಕಿದೆ. ರಾಡಾರ್ ಇರುವ ಕಟ್ಟಡದ ಸುತ್ತಮುತ್ತ ಸುಮಾರು 40 ಮೀಟರ್ ವ್ಯಾಪ್ತಿಯಲ್ಲಿ ರಾಡಾರ್‌ಗೆ ಬರುವ ಎಲೆಕ್ಟ್ರಾನಿಕ್ ಸಿಗ್ನಲ್ ಬರುತ್ತವೆ. ಹೀಗಾಗಿ ಈ ವ್ಯಾಪ್ತಿಯಲ್ಲಿ ಯಾವುದೇ ಅಡೆತಡೆಗಳು ಇರಬಾರದು. ಅಂತಹ ಕಟ್ಟಡಗಳನ್ನು ಐಎಂಡಿ ಅಧಿಕಾರಿಗಳು ಹುಡುಕುತ್ತಿದ್ದಾರೆ. ಸದ್ಯಕ್ಕೆ ಸಿಕ್ಕಿಲ್ಲ ಎಂದು ತಿಳಿದು ಬಂದಿದೆ.

**ಅಧ್ಯಯನ ಮಾಡಲು ಅನುಕೂಲ**

**ಐಎಂಡಿಯು ಈ ರಾಡಾರ್ ಅಳವಡಿಕೆ ಮಾಡಿದ ನಂತರ ಮೋಡಗಳು, ಸಿಡಿಲು, ಗಾಳಿಯ ಮಾದರಿ ಕುರಿತು ಸಂಪೂರ್ಣ ಅಧ್ಯಯನ ನಡೆಸಲಿದೆ. ಪ್ರತಿ ಗಂಟೆಯ ವ್ಯತ್ಯಾಸದಲ್ಲಿ ನಡೆಯುವ ಹವಾಮಾನ ವೈಪರಿತ್ಯಗಳ ಸ್ಪಷ್ಟತೆ ಬಗ್ಗೆ ಖಚತಿ ಮಾಹಿತಿ ನೀಡಲು, ಅಧ್ಯಯನ ಮಾಡಲು ಅನುಕೂಲವಾಗುತ್ತದೆ.**

## ವಿಧಾನ ಪರಿಷತ್ ಚುನಾವಣೆ: 11 ಅಭ್ಯರ್ಥಿಗಳಿಂದ ನಾಮಪತ್ರ ಸಲ್ಲಿಕೆ

• **ಉದಯವಾಹಿನಿ, ಬೆಂಗಳೂರು**

ಬಿಜೆಪಿಯಿಂದ ಮೂವರು, ಕಾಂಗ್ರೆಸ್‌ನಿಂದ ಇಬ್ಬರು, ಜೆಡಿಎಸ್ ನಿಂದ ಒಬ್ಬರು ಸೇರಿದಂತೆ ಒಟ್ಟು 11 ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದಾರೆ. ಇದಲ್ಲದೆ, ಐದು ಸ್ವತಂತ್ರ ಅಭ್ಯರ್ಥಿಗಳು ಸಹ ತಮ್ಮ ನಾಮಪತ್ರಗಳನ್ನು ಸಲ್ಲಿಸಿದರು. ಕಾಂಗ್ರೆಸ್ನಿಂದ ರಾಮೋಜಿ ಗೌಡ ಬೆಂಗಳೂರು ಪದವೀಧರ ಕ್ಷೇತ್ರದಿಂದ ಮತ್ತು ಡಿ.ಟಿ. ಶ್ರೀನಿವಾಸ್ ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ನಾಮಪತ್ರ ಸಲ್ಲಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಎಚ್.ಮುನಿಯಪ್ಪ, ಮಧು ಬಂಗಾರಪ್ಪ ಸೇರಿದಂತೆ ಹಲವು ಗಣ್ಯರು ನಾಮಪತ್ರ ಸಲ್ಲಿಸುವಾಗ ಹಾಜರಿದ್ದರು.




ಉದಯವಾಹಿನಿ ಚಿತ್ರ

ಬೆಂಗಳೂರು ಪದವೀಧರ ಕ್ಷೇತ್ರವು ರಾಜ್ಯ, ರಾಜಧಾನಿಯನ್ನು ಪ್ರತಿನಿಧಿಸುವುದರಿಂದ ಪ್ರಮುಖ ಪಾತ್ರ ವಹಿಸುತ್ತದೆ ಮತ್ತು ಅದನ್ನು ಗೆಲ್ಲಲು ಕಾಂಗ್ರೆಸ್‌ಯಾವುದೇ ಅವಕಾಶವನ್ನು ಬಿಡುತ್ತಿಲ್ಲ.

ಸುದ್ದಿಗಾರರೊಂದಿಗೆ ಮಾತನಾಡಿದ ಸಿದ್ದರಾಮಯ್ಯ, ನಾವು ಚುನಾವಣೆಗೆ ಆರು ತಿಂಗಳ ಮೊದಲೇ ನಮ್ಮ ಅಭ್ಯರ್ಥಿಗಳ ಹೆಸರನ್ನು ಘೋಷಿಸಿದ್ದೆವು, ಮತ್ತು ನಮ್ಮ ಅಭ್ಯರ್ಥಿಗಳಿಗೆ ಮತದಾರರನ್ನು ಭೇಟಿ ಮಾಡಲು ಮತ್ತು ಪ್ರಚಾರ ಮಾಡಲು ಸಮಯವಿತ್ತು. ಎಲ್ಲಾ ಆರು ಸ್ಥಾನಗಳನ್ನು ಗೆಲ್ಲುವ ವಿಶ್ವಾಸವಿದೆ ಎಂದು ಸಿಎಂ ಹೇಳಿದರು. ಕರ್ನಾಟಕ ದಕ್ಷಿಣ ಶಿಕ್ಷಕರ ಕ್ಷೇತ್ರದಿಂದ ವೈ.ಎ.ನಾರಾಯಣಸ್ವಾಮಿ, ಬೆಂಗಳೂರು ಪದವೀಧರ ಕ್ಷೇತ್ರದಿಂದ ಎ.ದೇವೇಗೌಡ, ಕರ್ಣದಿಂದ ಧನಂಜಯ ಸರ್ಜಿ ಸೇರಿದಂತೆ ಮೂವರು ಬಿಜೆಪಿಯಿಂದ ನಾಮ ಪತ್ರ ಸಲ್ಲಿಸಿದರು.

## ಖಾಸಗಿ ಶಾಲೆಗೆ ಬಾಂಬ್ ಬೆದರಿಕೆ ಕರೆ!

• **ಉದಯವಾಹಿನಿ, ಬೆಂಗಳೂರು**



ಉದಯವಾಹಿನಿ ಚಿತ್ರ

ಬೆಂಗಳೂರಿನ ಅಮೃತ್ ಹಳ್ಳಿಯ ಜೈನ್ ಶಾಲೆಯ ಬೆನ್ನಲ್ಲೇ ಮತ್ತೊಂದು ಖಾಸಗಿ ಶಾಲೆಗೆ ಬಾಂಬ್ ಬೆದರಿಕೆ ಇ-ಮೇಲ್ ಬಂದಿದ್ದು, ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಸೋಮನ ಹಳ್ಳಿ ಬಳಿಯ ಖಾಸಗಿ ಶಾಲೆಯಾದ ಈಡಿಫೈ ಶಾಲೆಗೆ ಬಾಂಬ್ ಬೆದರಿಕೆ ಕರೆ ಬಂದಿದೆ.ಇಮೇಲ್ ಮೂಲಕ ಶಾಲೆಯ ಆಡಳಿತ ಮಂಡಳಿಗೆ ಬಾಂಬ್ ಬೆದರಿಕೆ ಕರೆ ಬಂದಿದ್ದು, ಕೂಡಲೇ ಈಡಿಫೈ ಶಾಲಾ ಸಿಬ್ಬಂದಿಯನ್ನು ಹೊರ ಕಳಸಿ ಪೊಲೀಸರು ತಪಾಸಣೆ ನಡೆಸಿದ್ದಾರೆ.

ಹುಸಿಬಾಂಬ್ ಕರೆಯಾದ್ರೂ, ಶ್ವಾನದಳ ಹಾಗೂ ಪೊಲೀಸರು ತಪಾಸಣೆ ನಡೆಸಿದ್ದಾರೆ. ಕಗ್ಗಲೀಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಪ್ರಕರಣ ನಡೆದಿದೆ.

ಇದಕ್ಕೂ ಮುನ್ನ ಬೆಂಗಳೂರಿನ ಜೈನ್ ಹರಿಟೇಜ್ ಶಾಲೆಗೆ ದುಷ್ಕರ್ಮಿಗಳು ಮಧ್ಯರಾತ್ರಿ ಬಾಂಬ್ ಬೆದರಿಕೆ ಇ-ಮೇಲ್ ಕಳುಹಿಸಿದ್ದಾರೆ. ಹೀಗಾಗಿ ಶಾಲೆಯಲ್ಲಿ ತಪಾಸಣೆ ನಡೆಸಲಾಗುತ್ತಿದೆ.

ಅಮೃತಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ರಾತ್ರಿ ಸುಮಾರು 12.20ರ ಸುಮಾರಿಗೆ ಬಾಂಬ್ ಬೆದರಿಕೆಯ ಮೇಲ್ ರವಾನೆಯಾಗಿದೆ. ಶಾಲೆಗೆ ಸ್ಥಳೀಯ ಪೊಲೀಸರು, ಡಾಗ್ ಸ್ಕ್ವಾಡ್, ಬಾಂಬ್ ಸ್ಕ್ವಾಡ್ ಭೇಟಿ ನೀಡಿ ಪರಿಶೀಲನೆ ನಡೆಸಿವೆ. ಸದ್ಯ ಪೊಲೀಸರಿಂದ ಪರಿಶೀಲನೆ ಮುಂದುವರಿದಿದೆ. ಪರಿಶೀಲನೆಯಲ್ಲಿ ಇದೊಂದು ಹುಸಿ ಬಾಂಬ್ ಮೇಲ್ ಎನ್ನುವುದು ಧೃಢವಾಗಿದೆ.

## 6,740 ಕ್ಕೂ ಸರ್ಕಾರಿ ಹುದ್ದೆಗೆ ಅರ್ಜಿ ಸಲ್ಲಿಸುವುದಕ್ಕೆ ಇಂದು, ನಾಳೆ ಕೊನೆ ದಿನ

• **ಉದಯವಾಹಿನಿ, ಬೆಂಗಳೂರು**

ಕರ್ನಾಟಕ ಲೋಕಸೇವಾ ಆಯೋಗ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ರೈಲ್ವೆ ಇಲಾಖೆ, ಕೇಂದ್ರ ಲೋಕಸೇವಾ ಆಯೋಗವು ನಡೆಸುತ್ತಿರುವ ವಿವಿಧ ಹುದ್ದೆಗಳ ನೇಮಕಾತಿಗಳಿಗೆ ಅರ್ಜಿ ಸಲ್ಲಿವುದಕ್ಕೆ ಇಂದು ನಾಳೆ ಕೊನೆ ದಿನಾಂಕವಾಗಿದ್ದು, ಈ ನಿಟ್ಟಿನಲ್ಲಿ ಈಗ ನಾವು ನಿಮಗಾಗಿ ಮಹತ್ವದ ಮಾಹಿತಿಯನ್ನು ನೀಡುತ್ತಿದ್ದೇವೆ.

ಕೂಡಲೇ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಈ ನಿಟ್ಟಿನಲ್ಲಿ ನಿಮಗಾಗಿ ಇಲ್ಲಿದೆ ಮಾಹಿತಿ. ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳಾದ ಗಡಿ ಭದ್ರತಾ ಪಡೆ, ಕೇಂದ್ರ ಕೈಗಾರಿಕಾ ಭದ್ರತಾ ಪಡೆ, ಕೇಂದ್ರ ಮೀಸಲು ಪೊಲೀಸ್ ಪಡೆ, ಇಂಡೊ-ಟಿಬೆಟನ್ ಗಡಿ ಪೊಲೀಸ್ ಸಶಸ್ತ್ರ ಸೀಮಾ ಬಲ ಪಡೆಗಳಲ್ಲಿ ಅಗತ್ಯ ಗ್ರೂಪ್ ಎ ಅಸಿಸ್ಟಂಟ್ ಕಮಾಂಡಂಟ್ -506 ಹುದ್ದೆಗಳಿಗೆ ಅಪ್ಲಿಕೇಶನ್ ಸಲ್ಲಿಸಲು ಇಂದು ಕೊನೆ ದಿನಾಂಕವಾಗಿದೆ. 14-05-2024 ರ 18-00 ಗಂಟೆವರೆಗೆ. ಅರ್ಜಿ ಸಲ್ಲಿಸಬಹುದಾಗಿದೆ. ಆರ್ ಆರ್‌ಬಿ'ಯು ರೈಲ್ವೆ ಭದ್ರತಾ ಪಡೆಯ ರೈಲ್ವೆ ಸಬ್ ಇನ್ಸ್‌ಪೆಕ್ಟರ್- 452 , ರೈಲ್ವೆ ಕಾನ್ಸ್‌ಟೇಬಲ್- 4208 ಹುದ್ದೆಗಳಿಗೆ ಅಧಿಸೂಚಿಸಿತ್ತು. ಸದರಿ ಹುದ್ದೆಗಳಿಗೆ ಅರ್ಜಿ ಸ್ವೀಕಾರ ಮಾಡುವುದು ಇಂದೇ ಕೊನೆ ದಿನವಾಗಿದೆ. 9 ಇಲಾಖೆಗಳ ಉಳಿಕೆ ಮೂಲ ವೃಂದ ಹಾಗೂ ಹೆಚ್‌ಕೆ ವೃಂದದ ವಿವಿಧ ಗ್ರೂಪ್ ಬಿ 327 ಹುದ್ದೆಗಳ ಅರ್ಜಿಗೆ ಇಂದೇ ಕೊನೆ ದಿನವಾಗಿದೆ.

ಇಂದು ರಾತ್ರಿ 23-59 ಗಂಟೆಯೊಳಗೆ ಅರ್ಜಿ ಸಲ್ಲಿಸಿ. ಹೆಚ್ಚಿನ ಮಾಹಿತಿಗೆ ಕೆಪಿಎಸ್‌ಸಿ ವೆಬ್‌ಸೈಟ್‌ಗೆ ಭೇಟಿ ನೀಡಬಹುದು.ಪದವಿ ಪಾಸಾದವರು ಅರ್ಜಿ ಸಲ್ಲಿಸಬಹುದಾದ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ -247 ಹುದ್ದೆಗಳಿಗೆ ಅರ್ಜಿ ಆಹ್ವಾನ ಮಾಡಲಾಗಿದೆ. ಈ ನಡುವೆ ಈ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಮೇ 15, 2024 ರ ರಾತ್ರಿ 23-00 ಗಂಟೆವರೆಗೆ ಅವಕಾಶ ಇರುತ್ತದೆ.





ಉದಯವಾಹಿನಿ ಚಿತ್ರ

**ಕರ್ನಾಟಕ ರಾಜ್ಯ ಸರ್ಕಾರದ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಉಳಿಕೆ ಮೂಲ ವೃಂದ, ಕಲ್ಯಾಣ ಕರ್ನಾಟಕ (ಸ್ಥಳೀಯ) ವೃಂದದಲ್ಲಿರುವ 1000 ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅಧಿಸೂಚಿಸಿ ಅರ್ಜಿ ಆಹ್ವಾನಿಸಿದ್ದು, ಈ ಹುದ್ದೆಗಳಿಗೆ ಮೇ 15, 2024 ಅರ್ಜಿ ಸಲ್ಲಿಸಲು ಕೊನೆ ದಿನವಾಗಿದೆ. ಕಲ್ಯಾಣ ಕರ್ನಾಟಕ ಭಾಗಕ್ಕೆ 97 ಪಿಡಿಒ ಹುದ್ದೆಗಳು ಹಾಗೂ ಉಳಿಕೆ ಮೂಲ ವೃಂದದಲ್ಲಿ 150 ಪಿಡಿಒ ಹುದ್ದೆಗಳಿಗೆ ಕೆಪಿಎಸ್‌ಸಿಯಿಂದ ನೇಮಕಾತಿ ನಡೆಸಲಾಗುತ್ತಿದೆ. ಅರ್ಜಿ ಸಲ್ಲಿಸಲು ಮೇ 15 ಕಡೆಯ ದಿನಾಂಕವಾಗಿದೆ.**

## ದೇಶಕ್ಕೆ ರಾಜ್ಯಕ್ಕೆ ಕೀರ್ತಿ ತಂದ ವಿದ್ಯಾಭಾರತಿ ಶಾಲೆಯ ವಿದ್ಯಾರ್ಥಿಗಳು

• **ಉದಯವಾಹಿನಿ,ಕೆಂಗೇರಿ**




ಉದಯವಾಹಿನಿ ಚಿತ್ರ

**ವಿದ್ಯಾರ್ಥಿಗಳಿಗೆ ಶಿಕ್ಷಣ ಫಲ**

ವಿದ್ಯಾರ್ಥಿಗಳು ದೇಶಕ್ಕೆ, ರಾಜ್ಯಕ್ಕೆ ಕೀರ್ತಿ ತಂದು ಶಾಲೆಯ ಹೆಸರನ್ನು ರಾಜ್ಯ ಮಟ್ಟದಲ್ಲಿ ತರುವ ಮಟ್ಟಕ್ಕೆ ಬೆಳೆಯಬೇಕು ಎಂದು ಕೆಂಗೇರಿ ಉಪನಗರದ ವಿದ್ಯಾಭಾರತಿ ಶಾಲೆ ಯ ಮುಖ್ಯೋಪಾಧ್ಯಾಯರಾದ ಶ್ರೀ ಮತಿ ಸುಧಾ ಹಾಗು ಕಾರ್ಯದರ್ಶಿಯಾದ ಕುಮಾರಸ್ವಾಮಿ ಯವರು ಅಭಿಪ್ರಾಯ ವ್ಯಕ್ತಪಡಿಸಿದರು ಕೆಂಗೇರಿ ಉಪನಗರದ ಅಪೂರ್ವ ಬಡಾವಣೆಯಲ್ಲಿರುವ ಪ್ರತಿಷ್ಠಿತ ಶಾಲೆಗಳಲ್ಲಿ ಒಂದಾದ ವಿದ್ಯಾಭಾರತಿ ಪ್ರೌಢಶಾಲೆಯಲ್ಲಿ 2024 ನೇ ಸಾಲಿನ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶಾಲೆಗೆ ಕೀರ್ತಿ ತಂದಂತಹ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು ಎಂ ಮೃದುಲ ರವರು ಶೇಕಡಾ 96.64% ಅಂದರೆ 625 ಕ್ಕೆ 604 ಪಡೆದರೆ ರಜಾಕ್ ಎಂಬಾತ 96.36% 625 ಕ್ಕೆ 602 ಅಂಕವನ್ನು ಪಡೆದು ಶಾಲೆಗೆ ಮೊದಲಿಗರಾಗಿ ತೇರ್ಗಡೆಯಾಗಿದ್ದಾರೆ

ಇವರುಗಳನ್ನು ವಿದ್ಯಾಭಾರತಿ ಶಾಲೆಯ ಸಿಬ್ಬಂದಿ ವರ್ಗದವರು ಅಭಿನಂದಿಸಿದರು ನಂತರ ಮಾತನಾಡಿದ ಎಂ ಮೃದುಲ ರವರು ಶಾಲೆಯ ಮುಖ್ಯೋಪಾಧ್ಯಾಯರು ಹಾಗು ಎಲ್ಲಾ ವಿಷಯಗಳ (ಶಿಕ್ಷಕರು) ಭೋದಕ ವರ್ಗದವರ ಸಹಾಯದಿಂದ ಮತ್ತು ಸತತ ಪರಿಶ್ರಮದಿಂದ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿದರ ಫಲವಾಗಿ ಹೆಚ್ಚು ಅಂಕವನ್ನು ಪಡೆಯಲು ಸಾಧ್ಯವಾಗಿದೆ ವಿದ್ಯಾಭ್ಯಾಸಕ್ಕೆ ಬೇಕಾದ ಒಳ್ಳೆಯ ವಾತಾವರಣ ನುರಿತ ಶಿಕ್ಷಕರ ಪ್ರೋತ್ಸಾಹ ಮತ್ತು ಸಲಹೆ ಹಾಗು ವಿದ್ಯಾರ್ಥಿಗಳಿಗೆ ಯಾವ ವಿಷಯಗಳಲ್ಲಿ ಹೆಚ್ಚು ಆಸಕ್ತಿ ಇದೆ ಎಂಬುದನ್ನು ಪರಿಗಣಿಸಿ ಅವರಿಗೆ ಅದರಲ್ಲಿ ಹೆಚ್ಚು ಓದಿ ಕೊಳ್ಳಲು ಅವಕಾಶವನ್ನು ನೀಡಿದರ ಫಲವಾಗಿ ಮತ್ತು ಎಲ್ಲಾ ವಿಷಯಗಳಲ್ಲಿ ಪರಿಣಿತಿಯನ್ನು ಹೊಂದಿರುವ ಶಿಕ್ಷಕರ ಭೋದನಾ ಕೌಶಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ ಅದರಿಂದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಶೇಕಡಾ.96.64% ಅಂಕವನ್ನು ಪಡೆಯಲು ಸಾಧ್ಯವಾಯಿತು ಹಾಗೆಯೇ ನಮ್ಮ ಪೋಷಕರ ಸಲಹೆ ಸಹಕಾರದಿಂದ ಉನ್ನತಮಟ್ಟದ ಶಿಕ್ಷಣ ಪಡೆಯುವುದರೊಂದಿಗೆ ನಮ್ಮ ಪೋಷಕರಿಗೆ ವಿದ್ಯಾಭಾರತಿ ಶಾಲೆಗೆ ಹಾಗು ದೇಶಕ್ಕೆ ಮತ್ತು ರಾಜ್ಯಕ್ಕೆ ಕೀರ್ತಿ ತರುವ ಮಟ್ಟಕ್ಕೆ ಬೆಳೆದು ಒಳ್ಳೆಯ ಸುಸಂಸ್ಕೃತ ವಿದ್ಯಾವಂತ ವಿದ್ಯಾರ್ಥಿಯಾಗಿ ಹೊರಹೊಮ್ಮುವ ಕೆಲಸವನ್ನು ಮಾಡಲಾಗುವುದು ಎಂದು ತಿಳಿಸಿದರು

> **ಶಾಲೆಯ ಎಲ್ಲಾ ಶಿಕ್ಷಕರ ನೆರವು ಮತ್ತು ಪ್ರೋತ್ಸಾಹದಿಂದ ಹೆಚ್ಚು ಅಂಕವನ್ನು ಪಡೆಯಲು ಸಾಧ್ಯವಾಯಿತು ಎಂದು ತಿಳಿಸಿದರು ಈ ಸಂದರ್ಭದಲ್ಲಿ ವಿದ್ಯಾಭಾರತಿ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀಮತಿ ಸುಧಾ ಕಾರ್ಯದರ್ಶಿ ಕುಮಾರಸ್ವಾಮಿ ತರಗತಿ ಶಿಕ್ಷಕರಾದ ಬಾಲಮಣಿ ಮೇಡಂ ಶೀಲಾ ಮೇಡಂ ಜಯಣ್ಣ ಸರ್ ಜ್ಯೋತಿ ಮೇಡಂ ಶೈಲಜಾ ಮೇಡಂ ರಶ್ಮಿ ಮೇಡಂ ಗಣಿತ ಅತಿಥಿ ಉಪನ್ಯಾಸಕ ಶ್ರೀಧರ್ ಶಾಲೆಯ ವ್ಯವಸ್ಥಾಪಕ ದೀಪ್ತಿ ಮಂಜುನಾಥ್ ಸೇರಿದಂತೆ ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಅಭಿನಂದಿಸಿ ಉಪಸ್ಥಿತರಿದ್ದರು**
>
> -ರಜಾಕ್ ಯುವಕ

## ನಟಿ ಛಾಯಾ ಸಿಂಗ್ ಮನೆಯಲ್ಲಿ ಚಿನ್ನಾಭರಣ ಕಳ್ಳತನ

• **ಉದಯವಾಹಿನಿ, ಬೆಂಗಳೂರು**


ನಟಿ ಛಾಯಾ ಸಿಂಗ್ ಅವರ ತಾಯಿ ಮನೆಯಲ್ಲಿ ಕಳ್ಳತನ ಮಾಡಿ ಈಗ ಪೊಲೀಸರ ಅತಿಥಿಯಾಗಿದ್ದಾರೆ. ಕಳ್ಳತನ ಮಾಡಿದ ಮನೆಕೆಲಸದಾಕೆಯ ಬಂಧನವಾಗಿದೆ. ಛಾಯಾ ಸಿಂಗ್ ಕುಟುಂಬ ಹಲವು ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿದೆ. ಇದೀಗ ನಟಿ ಛಾಯಾ ಸಿಂಗ್ ತಾಯಿ ಚಮನಲತಾ ಮನೆಯಲ್ಲಿ ಕೆಲಸಕ್ಕಿದ್ದ ಮಹಿಳೆಯಿಂದ ಕೃತ್ಯ ಜರುಗಿದೆ.ಕೆಲಸದ ವೇಳೆ, ಚಿನ್ನಾಭರಣ ದೋಚಿ ಏನೂ ಅರಿಯದಂತೆ ಕೆಲಸದಾಕೆ ವರ್ತಿಸಿದ್ದಾರೆ. ಮನೆಯ ಮಾಲೀಕರು ಚಿನ್ನಾಭರಣ ಪರಿಶೀಲಿಸಿದ ವೇಳೆ ಘಟನೆ ಬೆಳಕಿಗೆ ಬಂದಿದೆ.

ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ತನಿಖೆಯ ವೇಳೆ ಕೆಲಸದಾಕೆ ಉಷಾ ಈ ಕೃತ್ಯ ಮಾಡಿರುವುದು ಬೆಳಕಿಗೆ ಬಂದಿದ್ದು, ಅವರನ್ನು ಬಂಧಿಸಿ ಆಭರಣ ವಶಪಡಿಸಿಕೊಂಡಿದ್ದಾರೆ. ಬಂಧಿತಳಿಂದ 66 ಗ್ರಾಂ ಗೋಲ್ಡ್ ಸೇರಿ, 150 ಬೆಳ್ಳಿ ಆಭರಣ ವಶಕ್ಕೆ ಪಡೆಯಲಾಗಿದೆ. ಅಂದಹಾಗೆ, ಛಾಯಾ ಸಿಂಗ್ ಪ್ರಸ್ತುತ ಕನ್ನಡದ 'ಅಮೃತಧಾರೆ'ಸೀರಿಯಲ್‌ನಲ್ಲಿ ನಾಯಕಿ ಭೂಮಿಕಾ ಪಾತ್ರಧಾರಿಯಾಗಿ ನಟಿಸುತ್ತಿದ್ದಾರೆ. ಶಿವರಾಜ್‌ಕುಮಾರ್ ನಟನೆಯ 'ಭೈರತಿ ರಣಗಲ್' ಸಿನಿಮಾದಲ್ಲಿ ಛಾಯಾ ನಟಿಸಿದ್ದಾರೆ. ಈ ವರ್ಷದ ಅಂತ್ಯದಲ್ಲಿ ಸಿನಿಮಾ ತೆರೆ ಕಾಣಲಿದೆ.

## ಜೈಲಿನಿಂದ ನೇರವಾಗಿ ತಂದೆಯ ನಿವಾಸಕ್ಕೆ ತೆರಳಿದ ರೇವಣ್ಣ

• **ಉದಯವಾಹಿನಿ, ಬೆಂಗಳೂರು**

ಮಹಿಳೆ ಕಿಡ್ನ್ಯಾಪ್ ಕೇಸ್ ಅಲ್ಲಿ ಬಂಧನವಾಗಿದ್ದ ಹಾಸನ ಜಿಲ್ಲೆಯ ಹೊಳೆನರಸೀಪುರ ಜೆಡಿಎಸ್ ಶಾಸಕ ಎಚ್ ಡಿ ರೇವಣ್ಣ ಅವರು ಇಂದು ಬೆಂಗಳೂರಿನ ಪರಪ್ಪನ ಅಗ್ರಹಾರದಿಂದ ಬಿಡುಗಡೆಯಾಗಿ ನೇರವಾಗಿ ಬೆಂಗಳೂರಿನ ಪದ್ಮನಾಭನಗರದಲ್ಲಿರುವ ತಮ್ಮ ತಂದೆ ಎಚ್ ಡಿ ದೇವೇಗೌಡರ ನಿವಾಸಕ್ಕೆ ತೆರಳಿದರು.



ಕಳೆದ ಹತ್ತು ದಿನಗಳಿಂದ ಅವರು ಮಹಿಳೆ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಪ್ಪನ ಅಗ್ರಹಾರದಲ್ಲಿ ಜೈಲುವಾಸ ಅನುಭವಿಸಿದ್ದರು ನಿನ್ನೆ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಎಚ್ ಡಿ ರೇವಣ್ಣ ಅವರಿಗೆ ಶರತ್ತು ಬದ್ಧ ಜಾಮೀನು ನೀಡಿ ಆದೇಶ ಹೊರಡಿಸಿತು. ಅದರಂತೆ ಇದೀಗ ಇಂದು ಮಧ್ಯಾಹ್ನ ಶಾಸಕ ಎಚ್ ಡಿ ರೇವಣ್ಣ ಅವರು ಜೈಲಿನಿಂದ ಬಿಡುಗಡೆಯಾದರು.

ಜೈಲಿಂದ ಹೊರಗಡೆ ಬರುತ್ತಿದ್ದಂತೆ ಅವರ ಬೆಂಬಲಿಗರು ಕಾರ್ಯಕರ್ತರು, ಅಭಿಮಾನಿಗಳು ಘೋಷಣೆ ಕೂಗಿದರು ಈ ವೇಳೆ ರೇವಣ್ಣ ಅವರ ಕಾರ್ಯಕರ್ತರನ್ನು ನಿಯಂತ್ರಿಸಲು ಪೊಲೀಸರು ಹರಸಾಹಸ ಪಟ್ಟರು ನಂತರ ರೇವಣ್ಣ ಅವರು ಕಾರಿನಲ್ಲಿ ಬೆಂಗಳೂರಿನ ಪದ್ಮನಾಭನಗರದಲ್ಲಿರುವ ತಮ್ಮ ತಂದೆ ಎಚ್ ಡಿ ದೇವೇಗೌಡ ಅವರ ನಿವಾಸಕ್ಕೆ ನೇರವಾಗಿ ತೆರಳಿದ್ದಾರೆ.

# ಇಡೀ ಪ್ರಕರಣದ ಹಿಂದೆ ದೊಡ್ಡ ತಿಮಿಂಗಿಲ ಇದೆ

### ■ ಹೆಚ್.ಡಿ.ಕುಮಾರಸ್ವಾಮಿ ಗುಡುಗು ■ ಪ್ರಕರಣಕ್ಕೆ ಸಂಬಂಧಿಸಿ ನಾನು ಯಾರನ್ನೂ ವಹಿಸಿಕೊಳ್ಳುವ ಪ್ರಶ್ನೆಯೇ ಇಲ್ಲ

• **ಉದಯವಾಹಿನಿ, ಬೆಂಗಳೂರು**



ಉದಯವಾಹಿನಿ ಚಿತ್ರ

ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರ ಬಂಧನ ರಾಜಕೀಯ ಪ್ರೇರಿತ ಎಂದು ಕಿಡಿಕಾರಿದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು, ಇದೆಲ್ಲದರ ಹಿಂದೆ ದೊಡ್ಡ ತಿಮಿಂಗಿಲವೇ ಇದೆ ಎಂದು ಗುಡುಗಿದರು.

ವಿಡಿಯೋದಲ್ಲಿ ಬಂದಂತಹ ಮಹಿಳೆಯರ ಕುಟುಂಬಗಳ ಬಗ್ಗೆ ಸರಕಾರಕ್ಕೆ ಅನುಕಂಪ ಎನ್ನುವುದು ಇದೆಯಾ? ಈ ಪ್ರಕರಣಕ್ಕೆ ಸಂಬಂಧಿಸಿ ನಾನು ಯಾರನ್ನೂ ವಹಿಸಿಕೊಳ್ಳುವ ಪ್ರಶ್ನೆ ಇಲ್ಲ. ಮಾಹಿತಿ ತಂತ್ರಜ್ಞಾನದ ಈ ಕಾಲದಲ್ಲಿ ಅಪರಾಧಿ ನಿರಪರಾಧಿ ಆಗುತ್ತಾನೆ. ಸರಕಾರಕ್ಕೆ ಬದ್ಧತೆ ಇದ್ದರೆ ತನಿಖೆಯನ್ನು ಸೂಕ್ತ ರೀತಿಯಲ್ಲಿ ನಡೆಸಲಿ. ಅದನ್ನು ಬಿಟ್ಟು ರೇವಣ್ಣ ಸುತ್ತ ತನಿಖೆ ಗಿರಕಿ ಹೊಡೆಯುವ ಅಗತ್ಯವಿಲ್ಲ ಎಂದರು. ಕುಮಾರಸ್ವಾಮಿ ಅವರು ರೇವಣ್ಣ ಕುಟುಂಬವನ್ನು ಮುಗಿಸಲು ನೋಡುತ್ತಿದ್ದಾರೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. ನಾನು ನ್ಯಾಯದ ಪರ ಇದ್ದೇನೆ, ನೊಂದ ಮಹಿಳೆಯರ ಪರ ಇದ್ದೇನೆ ಎಂದು ತಿಳಿಸಿದರು.

ಆ ಮಹಿಳೆಯರಿಗೆ ನ್ಯಾಯ ಸಿಗುವಂತೆ ಆಗಬೇಕು. ರಾಷ್ಟ್ರೀಯ ಮಹಿಳಾ ಆಯೋಗಕ್ಕೆ ಓರ್ವ ನೊಂದ ಮಹಿಳೆ ದೂರು ಕೊಟ್ಟಿದ್ದಾರೆ. ಆ ಹೆಣ್ಣುಮಗಳಿಗೆ ಹೆದರಿಸಿ ಅವರಿಂದ ದೂರು ಪಡೆಯಲು ಪ್ರಯತ್ನ ಮಾಡಿದ್ದಾರೆ. ಅವರಿಗೆ ಹೆದರಿಸಿ ಬೆದರಿಸಿದವರು ಯಾರು? ಮಫ್ತಿಯಲ್ಲಿ ಅವರ ಮನೆ ಬಳಿ ಹೋಗಿ ಹೆದರಿಸಿದ್ದು ಯಾರು? ಇದೆಲ್ಲಾ ಎಸ್ ಐಟಿಗೆ ಗೊತ್ತಾ? ಎಂದು ಮಾಜಿ ಮುಖ್ಯಮಂತ್ರಿ ಹೆಚ್ ಡಿ ಕುಮಾರಸ್ವಾಮಿ ಕೇಳಿದರು. ಹಾಸನದಲ್ಲಿ ಪೆನ್ ಡ್ರೈವ್ ಗಳನ್ನು ಹಂಚಿರುವ ವ್ಯಕ್ತಿಗಳು ಎಲ್ಲಿ ಎಫ್ ಐಆರ್ ದಾಖಲಾಗಿರುವ ಒಬ್ಬ ವ್ಯಕ್ತಿಯನ್ನೂ ಎಸ್ ಐಟಿ ಹಿಡಿಯಲಿಲ್ಲ. ವಿಡಿಯೋಗಳನ್ನು ಮೊದಲು ಕದ್ದು ಇಷ್ಟೆಲ್ಲಾ ರಾದ್ಧಾಂತಕ್ಕೆ ಕಾರಣನಾದ ಕಾರು ಚಾಲಕನನ್ನು ಇದುವರೆಗೂ ತನಿಖಾ ತಂಡ ಬಂಧನ ಮಾಡಿಲ್ಲ ಯಾಕೆ? ಆದರೆ, ಖಾಸಗಿ ಚಾನಲ್ ನಲ್ಲಿ ಒಂದೂವರೆ ಗಂಟೆ ಕಾಲ ಕೂರಿಸಿಕೊಂಡು ಅವನನ್ನು ಸಂದರ್ಶನ ಮಾಡುತ್ತಾರೆ. ಎಸ್ ಐಟಿ ತಂಡಕ್ಕೆ ಸಿಗದ ಆ ವ್ಯಕ್ತಿ ಸುಲಭವಾಗಿ ಖಾಸಗಿ ಚಾನೆಲ್ ಗೆ ಸಿಗುತ್ತಾನೆ ಎಂದರೆ ಇಲ್ಲಿ ಏನ್ ನಡೆಯುತ್ತಿದೆ? ಎಂದು ಕುಮಾರಸ್ವಾಮಿ ಅವರು ಖಾರವಾಗಿ ಪ್ರಶ್ನೆ ಮಾಡಿದರು.

ಇನ್ನೇನು ಪ್ರಜ್ವಲ್ ರೇವಣ್ಣ ಅವರ ವಿಡಿಯೋಗಳು ಹೊರಬರುತ್ತವೆ ಎಂದು ಫೇಸ್ ಬುಕ್ಕಿನಲ್ಲಿ ಸಮಯದ ಸಮೇತ ಪೋಸ್ಟ್ ಹಾಕಿದ್ದ ನವೀನ್ ಗೌಡ ಎನ್ನುವ ವ್ಯಕ್ತಿ ನಮ್ಮ ಪಕ್ಷದ ಶಾಸಕರಿಗೆ ಪೆನ್ ಡ್ರೈವ್ ಕೊಟ್ಟಿದ್ದೇನೆ ಎಂದು ಹೇಳಿದ್ದಾನೆ. ಅವನು ಏನೆಲ್ಲಾ ಹೇಳಿದ್ದಾನೆ, ಸಾಮಾಜಿಕ ಜಾಲತಾಣಗಳಲ್ಲಿ ಏನೆಲ್ಲಾ ಪೋಸ್ಟ್ ಮಾಡಿದ್ದಾನೆ ಎನ್ನುವುದು ಎಸ್ ಐಟಿಗೆ ಗೊತ್ತಿಲ್ಲವೇ? ಇವನನ್ನು ಹಿಡಿದ್ರಾ? ಎಂದು ಮಾಜಿ ಮುಖ್ಯಮಂತ್ರಿಗಳು ತೀಕ್ಷ್ಣವಾಗಿ ಪ್ರಶ್ನಿಸಿದರು.

> **ರಾಜ್ಯದಲ್ಲಿ ಅತ್ಯಂತ ಹೀನಾಯ ಘಟನೆ ನಡೆದಿದೆ. ರೇವಣ್ಣ ಕೂಡ ಆರೋಪ ಎದುರಿಸಬೇಕಾಯಿತು. ಅವರಿಗೆ ನಿರೀಕ್ಷಣಾ ಜಾಮೀನು ಸಿಕ್ಕಿದೆ. ನಮ್ಮ ಪಕ್ಷದ ಕಾರ್ಯಕರ್ತರಿಗೂ ಹೇಳಬಯಸುತ್ತೇನೆ. ಇದು ಪಟಾಕಿ ಸಿಡಿಸಿ ಸಂತೋಷಪಡುವ ಸಮಯ ಅಲ್ಲ. ಇಡೀ ಪ್ರಕರಣದಲ್ಲಿ ತಪ್ಪು ಮಾಡಿದವರಿಗೆ ಶಿಕ್ಷೆಯಾದಾಗ ಸಂಭ್ರಮಿಸಿ. ಈ ಘಟನೆ ರಾಜ್ಯವೇ ತಲೆ ತಗ್ಗಿಸುವಂತಹ ಘಟನೆ ಎಂದು ಹೇಳಿದರು.**
>
> **ಮಾಜಿ ಮುಖ್ಯಮಂತ್ರಿ ಹೆ.ಡಿ.ಕುಮಾರಸ್ವಾಮಿ**

> **ನಾನು ಎಸ್ ಐಟಿ ಅಧಿಕಾರಿಗಳಿಗೆ ಒಂದು ಮಾತು ಹೇಳಲು ಇಚ್ಚಿಸುತ್ತೇನೆ. ತಮಗೂ ತಂದೆ-ತಾಯಿ ಜನ್ಮ ಕೊಟ್ಟಿದ್ದಾರೆ. ಅಕ್ಕ ತಂಗಿ ಎಲ್ಲರೂ ನಿಮಗೂ ಇರುತ್ತಾರೆ. ದಯಮಾಡಿ ಪ್ರಾಮಾಣಿಕವಾಗಿ ತನಿಖೆ ನಡೆಸಿ. ಚುನಾವಣೆ ಸಂದರ್ಭದಲ್ಲಿ ಪೆನ್ ಡ್ರೈವ್ ಹಂಚಿ ಅಶ್ಲೀಲ ದೃಶ್ಯಗಳ ಮೂಲಕ ಸಮಾಜದಲ್ಲಿ ಕೆಟ್ಟ ಪರಿಸ್ಥಿತಿಯನ್ನು ಸೃಷಿ ಮಾಡಿದರಲ್ಲ, ಅವರನ್ನು ಇಲ್ಲಿಯವರೆಗೆ ನೀವು ಮುಟ್ಟಿಲ್ಲ. ಘಟನೆಗೆ ಕಾರಣನಾದ ವ್ಯಕ್ತಿಯನ್ನೂ ಹಿಡಿಯಲಿಲ್ಲ. ಇದೆಲ್ಲವನ್ನೂ ಮಾಡಬೇಕಾದ್ದು ಸರ್ಕಾರದ ಜವಾಬ್ದಾರಿ ಎಂದು ಹೇಳಿದರು.**

> **ಬಿಜೆಪಿ ಪಕ್ಷದ ಮಾಜಿ ಶಾಸಕರೊಬ್ಬರ ಎಡಬಲದಲ್ಲಿ ಇದ್ದ ಇಬ್ಬರನ್ನು ಹಿಡಿಯಲಾಗಿದೆ ಮಾಧ್ಯಮಗಳಲ್ಲಿ ಗಮನಿಸಿದೆ. ಇನ್ನೊಂದು ವಾರದಲ್ಲಿ ಮುಖ್ಯವಾದವರನ್ನು ಹಿಡಿಯಲಾಗುತ್ತದೆ ಎಂದು ಕಾಂಗ್ರೆಸ್ ಶಾಸಕರು ಹೇಳಿದ್ದಾರೆ. ಹಾಗಾದರೆ, ಎಸ್ ಐಟಿ ತನಿಖೆಯ ಎಲ್ಲಾ ಅಂಶಗಳು ಇವರಿಗೆ ಹೇಗೆ ಸೋರಿಕೆ ಆಗುತ್ತಿವೆ. ಇದಕ್ಕೆ ಸರಕಾರ ಉತ್ತರ ಕೊಡಬೇಕಿದೆ ಎಂದು ಒತ್ತಾಯಿಸಿದರು.**

# ಕೆರೆಯಂಗಳಕ್ಕೆ ಮೂಲಸೌಲಭ್ಯ ಮರೀಚಿಕೆ

## ದಶಕಗಳು ಉರುಳಿ ಹೋಗುತ್ತಿದ್ದರೂ ಇಲ್ಲಿಯವರೆಗೆ ಬಡಾವಣೆ ಅಭಿವೃದ್ಧಿಯ ಮಾತು ಮರೀಚಿಕೆಯಾಗಿಯೇ ಉಳಿದಿದೆ

• ಉದಯವಾಹಿನಿ ಮಂಡ್ಯ

ಮೂಲ ಸೌಲಭ್ಯಗಳಿಂದ ವಂಚಿತವಾಗಿರುವ ಕೆರೆಯಂಗಳ ಬಡಾವಣೆ ಕುರುಚಲು ಕಾಡಿನಂತಾಗಿದೆ. ಬಡಾವಣೆಯುದ್ದಕ್ಕೂ ಗಿಡಗಂಟಿ, ಮುಳ್ಳು ಬೆಳೆದು ನಿಂತಿದ್ದು ನಿವಾಸಿಗಳು ಅಪಾಯದ ನಡುವೆ ಜೀವನ ನಡೆಸುತ್ತಿದ್ದಾರೆ. ವಿವೇಕಾನಂದ ನಗರ, ಕೆಹೆಚ್‌ಬಿ ಕಾಲೋನಿ, ಬಿಇಡಿ ಕಾಲೇಜು ಕಾಲೋನಿ, ಮಹಾರಾಜ ನಗರ ಸೇರಿದಂತೆ ಕೆರೆಯಂಗಳ ಬಡಾವಣೆ ರೂಪಗೊಂಡಿದೆ.

**ಅಭಿವೃದ್ಧಿಯ ಮಾತು ಮರೀಚಿಕೆ**

ಮಂಡ್ಯ ಕೆರೆಯನ್ನು ಮುಚ್ಚಿದ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಗೃಹಮಂಡಳಿ, ನಗರಸಭೆಯು ಬಡಾವಣೆಯನ್ನು ಸಮರ್ಪಕವಾಗಿ ಅಭಿವೃದ್ಧಿಪಡಿಸಿಲ್ಲ, ಸ್ವಂತ ಸೂರಿನ ಕನಸಿನೊಂದಿಗೆ ಸಾಲ ಸೂಲ ಮಾಡಿ ನಿವೇಶನ ಖರೀದಿಸಿದ ನಿವಾಸಿಗಳು ಬಡಾವಣೆ ಅಭಿವೃದ್ಧಿಯ ನಿರೀಕ್ಷೆಯಲ್ಲೇ ಇದ್ದಾರೆ. ದಶಕಗಳು ಉರುಳಿ ಹೋಗುತ್ತಿದ್ದರೂ ಇಲ್ಲಿಯವರೆಗೆ ಬಡಾವಣೆ ಅಭಿವೃದ್ಧಿಯ ಮಾತು ಮರೀಚಿಕೆಯಾಗಿಯೇ ಉಳಿದಿದೆ. ಬಡಾವಣೆ ಅಭಿವೃದ್ಧಿಗೊಳಿಸದಿದ್ದರೂ ನಿವಾಸಿಗಳು ನಿವೇಶನ ಖರೀದಿ ಮಾಡಿ ಮನೆ ಕಟ್ಟಿದ್ದಾರೆ. ಕೊಳವೆ ನೀರು ಹರಿದು ಹೋಗಲು ಸಮರ್ಪಕವಾದ ಚರಂಡಿ ಸೌಲಭ್ಯವಿಲ್ಲ, ರಸ್ತೆ ದುರಸ್ತಿಯೂ ಆಗದ ಕಾರಣ ಮಳೆ ಬಂದರೆ ಇಡೀ ಬಡಾವಣೆ ಕೆಸರುಮಯವಾಗುತ್ತದೆ. ಜಾಗವನ್ನು ಎತ್ತರಿಸದೆ ಕೆರೆಯಂಗಳನ್ನೇ ನಿವೇಶನವಾಗಿ ಹಂಚಿಕೆ ಮಾಡಲಾಗಿದ್ದು ಈಗಲೂ ಕೆರೆಯಂತೆಯೇ ನೀರು ಸಂಗ್ರಹವಾಗುತ್ತದೆ.

ಸದ್ಯ ಈಗ ಮಳೆ ಬರುತ್ತಿದ್ದು ಎಲ್ಲೆಂದರಲ್ಲಿ ನೀರು ನಿಂತಿದೆ. ತೇವಾಂಶ ವಾತಾವರಣದಿಂದಾಗಿ ಹಾವುಗಳು ಕಾಣಿಸಿಕೊಳ್ಳುತ್ತಿದ್ದು ಜನರು ಭಯಭೀತರಾಗಿದ್ದಾರೆ. ಬಿಇಡಿ ಕಾಲೇಜು ಕಾಲೋನಿಯಲ್ಲಿ ಕೊಳಚೆ ಗುಂಡಿಯಂತಾಗಿದ್ದು ಜನರು ರೋಗಭೀತಿ ಅನುಭವಿಸುತ್ತಿದ್ದಾರೆ.

ನಿವೇಶನ ಮತ್ತು ಕಟ್ಟಿರುವ ಮನೆಗಳಿಗೆ ಕಂದಾಯ ಕಟ್ಟುತ್ತೇವೆ, ವಿದ್ಯುತ್ ವ್ಯವಸ್ಥೆಯನ್ನು ಸರಿಯಾಗಿ ನಿರ್ವಹಣೆ ಮಾಡುತ್ತಿಲ್ಲ, ಕತ್ತಲು ಆವರಿಸಿಕೊಳ್ಳುತ್ತಿದ್ದು ರಾತ್ರಿ ಸಂಚರಿಸಲು ಭಯ ಪಡುವ ಸ್ಥಿತಿಯಿದೆ.


ಉದಯವಾಹಿನಿ ಚಿತ್ರ

> ಕೆರೆಯಂಗಳ ಬಡಾವಣೆಯನ್ನು ಪರಿಶೀಲಿಸಿ ಮೂಲ ಸೌಲಭ್ಯ ಒದಗಿಸಲು ಕ್ರಮ ವಹಿಸಲಾಗುವುದು. ಈ ಬಗ್ಗೆ ನಗರಸಭೆ, ನಗರಾಭಿವೃದ್ಧಿ ಪ್ರಾಧಿಕಾರ, ಗೃಹಮಂಡಳಿ ಅಧಿಕಾರಿಗಳ ಸಭೆ ನಡೆಸಲಾಗುವುದು
> -ಕುಮಾರ, ಜಿಲ್ಲಾಧಿಕಾರಿ

ಅಧಿಕಾರಿಗಳು ಇತ್ತಕಡೆ ಗಮನ ಹರಿಸಿಬೇಕು' ಎಂದು ನಿವಾಸಿಗಳಾದ ವೆಂಕಟೇಶ್, ಆನಂದ್, ವಿಶ್ವನಾಥ್ ಒತ್ತಾಯಿಸಿದರು.

ರಾತ್ರಿಯಾದರೆ ಸಾಕು ಮದ್ಯಪ್ರಿಯರಿಗೆ ಕೆರೆಯಂಗಳ ಸ್ವರ್ಗವಾಗಿದೆ. ಕಾಡಿನಂತೆ ಗಿಡಗಂಟಿ ಬೆಳೆದು ನಿಂತಿರುವುದರಿಂದ ಅಲ್ಲಲ್ಲಿ ಮದ್ಯಪಾನ ಮಾಡುತ್ತಾರೆ. ಕುಡಿದ ನಂತರ ಬಾಟಲ್‌ಗಳನ್ನು ಬಿಸಾಡಿ ಹೋಗುತ್ತಾರೆ. ಹೀಗಾದರೆ ನಾವು ಇಲ್ಲಿ ವಾಸಿಸುವುದಾದರೂ ಹೇಗೆ? ವಿದ್ಯುತ್ ಕಂಬಗಳಿಗೆ ಸುರಳಿ ಆಕಾರದ ಗಿಡಗಳು ಸುತ್ತಿಕೊಂಡು ಅಪಾಯದ ಸ್ಥಿತಿ ಇದೆ' ಎಂದು ನಿವಾಸಿಗಳಾದ ಹರೀಶ್, ಅಜಯ್, ಪ್ರವೀಣ್ ಹೇಳಿದರು.

ನಗರಸಭೆಯಿಂದ ಎಲ್ಲಾ ಸೌಲಭ್ಯ ಸಿಗುತ್ತದೆ ಎಂಬುವ ನಿರೀಕ್ಷೆ ಇತ್ತು. ಆದರೆ ನಗರಸಭೆ ಅಧಿಕಾರಿಗಳು ಯಾವುದೇ ಜವಾಬ್ದಾರಿ ವಹಿಸಿಕೊಳ್ಳುತ್ತಿಲ್ಲ. ಮಂಡ್ಯ ನಗರದ ಹೃದಯ ಭಾಗದಲ್ಲಿದ್ದರೂ ಇಡೀ ಬಡಾವಣೆ ಪಾಳು ಕೊಂಪೆಯಂತಿದೆ ಎಂದು ನಿವಾಸಿಗಳು ಆರೋಪಿಸುತ್ತಾರೆ.

### ಅನೈತಿಕ ಚಟುವಟಿಕೆಗಳ ತಾಣ

ಗಿಡಗಂಟಿಗಳ ಬಳಿ ಮದ್ಯಪಾನ ಮಾಡುವ ಜೊತೆಗೆ ಹಲವರು ಅನೈತಿಕ ಚಟುವಟಿಕೆಗಳನ್ನೂ ನಡೆಸುತ್ತಾರೆ. ರಾತ್ರಿಯ ವೇಳೆ ಪೊಲೀಸ್ ಬೀಟ್ ವ್ಯವಸ್ಥೆಯೂ ಸಮರ್ಪಕವಾಗಿ ಇಲ್ಲದ ಕಾರಣ ಕಿಡಿಗೇಡಿಗಳು ಬಡಾವಣೆಯನ್ನು ಅನೈತಿಕ ಚಟುವಟಿಕೆಗಳ ತಾಣ ಮಾಡಿಕೊಂಡಿದ್ದಾರೆ. ಮುಂದಾದರೂ ಪೊಲೀಸರು ಬಡಾವಣೆಯಲ್ಲಿ ಸರಿಯಾಗಿ ಬೀಟ್ ವ್ಯವಸ್ಥೆ ಜಾರಿಗೊಳಿಸಬೇಕು ಎಂದು ಒತ್ತಾಯಿಸುತ್ತಾರೆ.

### ಕಳ್ಳತನ ಪ್ರಕರಣಗಳು ಕಡಿಮೆಯಾಗಿಲ್ಲ

ಕೇಂದ್ರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕೆರೆಯಂಗಳ ಬಡಾವಣೆ ಇದೆ. ಇಡೀ ಬಡಾವಣೆಯಲ್ಲಿ ಸಂಜೆಯಾದರೆ ಸಾಕು ಕಳ್ಳಕಾಕರ ಭಯ ಸಾರ್ವಜನಿಕರನ್ನು ಕಾಡುತ್ತದೆ. ಮಹಿಳೆಯರ ಸರಗಳ್ಳತನದ ಜೊತೆಗೆ ಮನೆಯಲ್ಲೂ ಕಳ್ಳತನ ನಡೆಯುವ ಪ್ರಕರಣಗಳು ಆಗಾಗ ವರದಿಯಾಗುತ್ತವೆ. ಈ ಬಗ್ಗೆ ಪೊಲೀಸರಿಗೆ ದೂರು ಕೊಟ್ಟರೂ ಕಳ್ಳತನ ಪ್ರಕರಣಗಳು ಕಡಿಮೆಯಾಗಿಲ್ಲ ಎಂದು ನಿವಾಸಿಗಳು ಆರೋಪಿಸುತ್ತಾರೆ.

## ಗಂಗೆಯನ್ನು ಭೂಮಿಗೆ ತಂದ ಭಗೀರಥರು ಮಹಾನ್ ಋಷಿಗಳು

• ಉದಯವಾಹಿನಿ ರಾಮನಗರ


ಉದಯವಾಹಿನಿ ಚಿತ್ರ

ಭಗೀರಥರ ಪೂರ್ವಜರಿಗೆ ಶಾಪವಿಮೋಚನೆ ಮಾಡಲು ತಪಸ್ಸು ಮಾಡಿ ಗಂಗೆಯನ್ನು ಭೂಮಿಗೆ ತಂದವರು ಭಗೀರಥ ಋಷಿಗಳು ಎಂದು ಉಪ್ಪಾರ ಸಮುದಾಯದ ಮುಖಂಡರಾದ ವೆಂಕಟೇಶ್ ಮೂರ್ತಿ ಅವರು ತಿಳಿಸಿದರು.

**ಶ್ರೀ ಭಗೀರಥ ಜಯಂತಿ ಕಾರ್ಯಕ್ರಮ**

ಅವರು ಇಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಶ್ರೀ ಭಗೀರಥ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಭಗೀರಥರು ಸೂರ್ಯವಂಶಕ್ಕೆ ಸೇರಿದವರು ಮತ್ತು ರಾಮನ ಪೂರ್ವಜರಾಗಿದ್ದು ಅವರ ಮೌಲ್ಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಭಗೀರಥರ 60 ಸಾವಿರ ಚಿಕ್ಕಪ್ಪಂದಿರು ಶಾಪದಿಂದ ಬಿಡುಗಡೆ ಮಾಡಲು ಸಾವಿರ ವರ್ಷಗಳ ಕಾಲ ತಪಸ್ಸು ಮಾಡಿದರು. ಗಂಗೆಯು ನೇರವಾಗಿ ಭೂಮಿಗೆ ಇಳಿದರೆ ತನ್ನ ಬಲವು ಭೂಮಿಯನ್ನು ನಾಶಪಡಿಸುತ್ತದೆ ಎಂದು ಗಂಗಾ ಭಗೀರಥನಿಗೆ ಹೇಳಿದಳು ನಂತರ ಭಗೀರಥನು ಶಿವನನ್ನು ಕುರಿತು ತೀವ್ರ ತಪಸ್ಸು ಮಾಡಿ ಗಂಗೆಯನ್ನು ಭೂಮಿಗೆ ಇಳಿಸುವಂತೆ ಕೇಳಿದನು. ಶಿವನು ಅವನಿಗೆ ವರವನ್ನು ನೀಡಿದನು. ಗಂಗಾ ದೇವಿಯು ಗಂಗಾ ನದಿಯ ರೂಪದಲ್ಲಿ ಭೂಮಿಗೆ ಇಳಿಯಲು ಕಾರಣವಾಯಿತು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಮೇಶ್ ಬಾಬು, ಉಪ್ಪಾರ ಸಮುದಾಯದ ಮುಖಂಡರಾದ ಕೆ. ಟಿ. ಆಂಜನಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

## ಪಂಚಾಯಿತ್ತಿ ಸಿಬ್ಬಂದಿ ಸಲ್ಲಾಪ: ಸದಸ್ಯರ ಪ್ರತಿಭಟನೆ

• ಉದಯವಾಹಿನಿ ಕೆಜಿಎಫ್


ಉದಯವಾಹಿನಿ ಚಿತ್ರ

**ಖಾಸಗಿ ಕ್ಷಣಗಳ ಫೋಟೊ ಬಹಿರಂಗ**

'ರಾಮಸಾಗರ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಸಿಬ್ಬಂದಿ ಖಾಸಗಿ ಕ್ಷಣಗಳ ಫೋಟೊ ಬಹಿರಂಗವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ' ಎಂದು ಆರೋಪಿಸಿ ಗ್ರಾಮ ಪಂಚಾಯಿತಿ ಸದಸ್ಯರು ಮತ್ತು ಗ್ರಾಮಸ್ಥರು ಸೋಮವಾರ ಪಂಚಾಯಿತಿಯಲ್ಲಿ ಪ್ರತಿಭಟನೆ ನಡೆಸಿದರು.

ಕಚೇರಿಯ ಬಿಲ್ ಕಲೆಕ್ಟರ್ ಮತ್ತು ಮಹಿಳಾ ಉದ್ಯೋಗಿ ಕಚೇರಿಯಲ್ಲಿಯೇ ಸರಸ ಸಲ್ಲಾಪದಲ್ಲಿ ತೊಡಗಿದ್ದಾರೆ. ಖಾಸಗಿ ಕ್ಷಣಗಳ ಅಶ್ಲೀಲ ಚಿತ್ರ ತೆಗೆಸಿಕೊಂಡಿದ್ದಾರೆ. ಕೆಲಸ ಮಾಡುತ್ತಿದ್ದ ಕೊಠಡಿಯ ಸಿಸಿಟಿವಿ ಕ್ಯಾಮೆರಾದ ವೈರ್ ಕತ್ತರಿಸಲಾಗಿದೆ' ಎಂದು ಪ್ರತಿಭಟನಕಾರರು ಆರೋಪ ಮಾಡಿದ್ದಾರೆ.

ಗ್ರಾಮಸ್ಥರು ನಾಚಿಕೆಯಿಂದ ತಲೆತಗ್ಗಿಸುವ ಘಟನೆ ನಡೆದಿವೆ. ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಮತ್ತು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಈ ಮಾಹಿತಿ ತಿಳಿಸಿದ್ದರೂ ಕ್ರಮ ಕೈಗೊಳ್ಳದೆ ಆರೋಪಿಗಳನ್ನು ರಕ್ಷಿಸುತ್ತಿದ್ದಾರೆ. ಮಹಿಳೆಯರು ಪಂಚಾಯಿತಿ ಕಚೇರಿಗೆ ಬರಲು ಹಿಂದೇಟು ಹಾಕುತ್ತಿದ್ದಾರೆ. ಕೂಡಲೇ ಪಂಚಾಯಿತಿ ಸಭೆ ಕರೆದು ನಿರ್ಣಯ ಅಂಗೀಕರಿಸಬೇಕು' ಎಂದು 14 ಸದಸ್ಯರು ಮನವಿ ಸಲ್ಲಿಸಿದರು.

### ಅಧಿಕಾರಿಗಳ ವಿರುದ್ಧ ಆಕ್ರೋಶ

ಚುನಾವಣೆ ನೀತಿ ಸಂಹಿತೆ ಇರುವ ಕಾರಣ ಸಭೆ ನಡೆಸಲು ಬರುವುದಿಲ್ಲ. ಸಂಬಂಧಪಟ್ಟ ನೌಕರರ ವಿರುದ್ಧ ಕೂಡ ಕ್ರಮ ಕೈಗೊಳ್ಳಲು ಚುನಾವಣಾಧಿಕಾರಿಯ ಅನುಮತಿ ಪಡೆಯಬೇಕು ಎಂದು ಪಂಚಾಯಿತಿ ಅಧಿಕಾರಿಗಳು ಸುಳ್ಳು ಹೇಳುತ್ತಿದ್ದಾರೆ' ಎಂದು ಪ್ರತಿಭಟನಕಾರರು ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

## 625ಕ್ಕೆ 625 ಅಂಕ: ಅಂಕಿತಾ, ನವನೀತ್‌ಗೆ ಮಹದೇವಪ್ಪ ಸನ್ಮಾನ


ಉದಯವಾಹಿನಿ ಚಿತ್ರ


• ಉದಯವಾಹಿನಿ ಮೈಸೂರು

ಈ ಬಾರಿಯ ಎಸ್‌ಎಸ್‌ಎಲ್‌ಸಿ ವಾರ್ಷಿಕ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳನ್ನು ಗಳಿಸಿ ರಾಜ್ಯಕ್ಕೆ ಪ್ರಥಮ ಸ್ಥಾನಗಳಿಸಿದ ಬಾಗಲಕೋಟೆಯ ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿನಿ ಅಂಕಿತಾ ಕೊಣ್ಣೂರ, ತೃತೀಯ ಸ್ಥಾನ ಪಡೆದ ಮಂಡ್ಯದ ತುಂಬಕೆರೆ ಮೊರಾರ್ಜಿ ವಸತಿ ಶಾಲೆಯ ವಿದ್ಯಾರ್ಥಿ ನವನೀತ್ ಅವರನ್ನು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ ಸನ್ಮಾನಿಸಿದರು.

ಅವರ ಉನ್ನತ ವ್ಯಾಸಂಗಕ್ಕಾಗಿ ಸರ್ಕಾರದಿಂದ ಎಲ್ಲಾ ರೀತಿಯ ನೆರವನ್ನೂ ನೀಡುವುದಾಗಿ ತಿಳಿಸಿದರು. ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ಅಧಿಕಾರಿ ಪ್ರವೀಣ್ ಬಾಗೇವಾಡಿ, ಜಂಟಿ ನಿರ್ದೇಶಕ ನಾಗೇಶ್, ಸಹಾಯ ನಿರ್ದೇಶಕ ಸಿ.ಎಂ. ಹೊನ್ನರಾಜು ಹಾಗೂ ವಿದ್ಯಾರ್ಥಿಗಳ ಪೋಷಕರು ಉಪಸ್ಥಿತರಿದ್ದರು.

## ಎಕ್ಸ್‌ಪ್ರೆಸ್ ಕೆನಾಲ್: ಸಂಘಟನೆ ಬೆಂಬಲ

• ಉದಯವಾಹಿನಿ ತುಮಕೂರು


ಉದಯವಾಹಿನಿ ಚಿತ್ರ

ಹೇಮಾವತಿ ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ (ಕುಣಿಗಲ್–ಮಾಗಡಿ ಮಾರ್ಗ) ಕಾಮಗಾರಿ ನಿಲ್ಲಿಸುವಂತೆ ಹೇಮಾವತಿ ಹೋರಾಟ ಸಮಿತಿ ಕೈಗೊಂಡಿರುವ ಹೋರಾಟಕ್ಕೆ ಕನ್ನಡಪರ ಸಂಘಟನೆಗಳು, ವಿವಿಧ ಸಂಘ–ಸಂಸ್ಥೆಗಳ ಪ್ರಮುಖರು ಬೆಂಬಲ ವ್ಯಕ್ತಪಡಿಸಿದ್ದಾರೆ. ವಿವಿಧ ಸಂಘಟನೆಗಳ ಮುಖಂಡರು ಸಭೆ ಸೇರಿ ತಮ್ಮ ತೀರ್ಮಾನ ಪ್ರಕಟಿಸಿದರು.

ಎಕ್ಸ್‌ಪ್ರೆಸ್ ಲಿಂಕ್ ಕೆನಾಲ್ ಕಾಮಗಾರಿಗೆ ವಿರೋಧ ವ್ಯಕ್ತಪಡಿಸಿದರು. ಕಾಮಗಾರಿ ನಿಲ್ಲಿಸುವ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾಗುವುದು ಎಂದು ತಿಳಿಸಿದರು. ಜಿಲ್ಲೆಗೆ ನಿಗದಿಯಾಗಿರುವಷ್ಟು ಹೇಮಾವತಿ ನೀರನ್ನು ಈವರೆಗೂ ಹರಿದಿಲ್ಲ. ಈಗ ನಾಲೆಯ ಮಧ್ಯಭಾಗದಿಂದ ಪೈಪ್ ಲೈನ್ ಮೂಲಕ ನಮ್ಮ ಜಿಲ್ಲೆಯ ನೀರನ್ನು ಬೇರೆ ಜಿಲ್ಲೆಗೆ ತೆಗೆದುಕೊಂಡು ಹೋಗಲು ಮುಂದಾಗಿರುವುದು ಖಂಡನೀಯ' ಎಂದು ಕನ್ನಡ ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಧನಿಯಕುಮಾರ್ ಅಸಮಾಧಾನ ವ್ಯಕ್ತಪಡಿಸಿದರು.

### ಮೇ 16ರಂದು ಪ್ರತಿಭಟನೆ

ಈ ಹೋರಾಟದಲ್ಲಿ ಭಾಗಿಯಾಗುವಂತೆ ಹೊಟೇಲ್, ಬಸ್, ಟ್ಯಾಕ್ಸಿ, ಆಟೊ ಮಾಲೀಕರು ಮತ್ತು ಚಾಲಕರ ಸಂಘ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳಲ್ಲಿ ಮನವಿ ಮಾಡಲಾಗಿದೆ. ಮೇ 16ರಂದು ನಡೆಯುವ ಪ್ರತಿಭಟನೆಯಲ್ಲಿ ಸುಮಾರು 20 ಸಾವಿರ ಜನರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

## ತೀವ್ರ ಬರ: ಅಡಿಕೆ ತೋಟ ನಾಶ ಮಾಡಿದ ರೈತ

• ಉದಯವಾಹಿನಿ ಮಾಯಕೊಂಡ


ಉದಯವಾಹಿನಿ ಚಿತ್ರ

ತೀವ್ರ ಬರದಿಂದ ಅಡಿಕೆ ತೋಟ ಒಣಗಿರುವ ಕಾರಣ ಕಂಗಾಲಾಗಿರುವ ಸಮೀಪದ ಹೊನ್ನನಾಯ್ಕನಹಳ್ಳಿಯ ರೈತ ಬಸವರಾಜಪ್ಪ ತಮ್ಮ 2 ಎಕರೆ ಅಡಿಕೆ ತೋಟವನ್ನು ನಾಶಪಡಿಸಿದ್ದಾರೆ.

ತೋಟ ಉಳಿಸಿಕೊಳ್ಳಲು ಒಂದೇ ವರ್ಷದಲ್ಲಿ 800, 900 ಅಡಿ ಆಳದ 4 ಕೊಳವೆಬಾವಿ ಸೇರಿ ಒಟ್ಟು 9 ಕೊಳವೆಬಾವಿ ಕೊರೆಯಿಸಿದ್ದರು.

ಆದರೂ ಒಂದಿಂಚು ನೀರು ಸಿಗಲಿಲ್ಲ. ಬರದಿಂದ ಅಂತರ್ಜಲ ಪಾತಾಳ ತಲುಪಿದ್ದರಿಂದ ನೀರಿಲ್ಲದೆ ಅಡಿಕೆ ಸಸಿಗಳು ಒಣಗಿದ್ದವು. ಇದರಿಂದ ನೊಂದು 2 ಎಕರೆ 18 ಗುಂಟೆ ಜಮೀನಿನಲ್ಲಿದ್ದ 1400 ಅಡಿಕೆ ಸಸಿಗಳನ್ನು ನಾಶಪಡಿಸಿದ್ದಾರೆ. ನಮ್ಮ ಊರಾಗೆ ಎಲ್ಲರೂ ಅಡಿಕೆ ಬೆಳೆದು ಆರ್ಥಿಕವಾಗಿ ಚೆನ್ನಾಗಿರುವುದನ್ನ ಕಂಡು ನಾನೂ ತೋಟ ಮಾಡಿದೆ. ಐದು ವರ್ಷಗಳ ಹಿಂದೆ ಚೆನ್ನಾಗಿ ನಡೆಯುತ್ತಿದ್ದ ಕುರಿ ಸಾಕಣೆ ಕೈಬಿಟ್ಟು, ಕೊಳವೆಬಾವಿ ಹಾಕಿಸಿ ಅಡಿಕೆ ಸಸಿ ನಾಟಿ ಮಾಡಿದ್ದೆ. ಅದಕ್ಕೆ ಹನಿ ನೀರಾವರಿ ಅಳವಡಿಸಿದ್ದೆ. ಹಿಂದಿನ ವರ್ಷ ಮಳೆ ಆಗಲಿಲ್ಲ. ಈ ವರ್ಷ ಒಂದಿಂಚೂ ನೀರೂ ಸಿಗದೆ ತೋಟ ಒಣಗಿದೆ. ಫಲಕ್ಕೆ ಬಂದ ಸಸಿಗಳು ಒಣಗಿವೆ' ಎಂದು ಬಸವರಾಜಪ್ಪ ಅಳಲು ತೋಡಿಕೊಂಡರು.

ಸಾಲ ಮಾಡಿದ್ದು, ಬೆಳೆ ಇಲ್ಲದೇ ದಿಕ್ಕು ತೋಚದಂತಾಗಿದೆ' ಎಂದು ಅವರು ನೊಂದು ನುಡಿದರು.

## ಸಾಲ ತೀರಿಸಲು ಮಗುವನ್ನೇ ಮಾರಿದ ತಂದೆ

• ಉದಯವಾಹಿನಿ ಕೋಲಾರ

ತಾನು ಮಾಡಿದ್ದ ಸಾಲವನ್ನು ತೀರಿಸಲು ಆಗಲೇ ಮೂರು ತಿಂಗಳ ಹೆತ್ತ ಕಂದಮ್ಮನನ್ನೇ ಮಾರಾಟ ಮಾಡಿರುವ ಅಮಾನವೀಯ ಘಟನೆ ಕೋಲಾರ ಜಿಲ್ಲೆಯಲ್ಲಿ ನಡೆದಿದೆ.

ಹೌದು ಕೋಲಾರ ಜಿಲ್ಲೆಯ ಬಂಗಾರಪೇಟೆ ನಗರದ ನಿವಾಸಿಗಳಾದ ಮುನಿರಾಜು ಹಾಗೂ ಪವಿತ್ರ ಎನ್ನುವ ದಂಪತಿಗಳ ಮೂರು ತಿಂಗಳ ಮಗು ವನ್ನು ತಂದೆ ಮುನಿರಾಜು ಹಣಕ್ಕಾಗಿ ಮಾರಾಟ ಮಾಡಿದ್ದಾನೆ ಎಂದು ಪತ್ನಿ ಪವಿತ್ರ ಗಂಡನ ವಿರುದ್ಧ ಬಂಗಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ್ದಾಳೆ. ತಂದೆಯದಂತ ಮುನಿರಾಜು ತನ್ನ ಮೂರು ತಿಂಗಳ ಹೆತ್ತ ಕಂದಮ್ಮನನ್ನು ಬಂಗಾರಪೇಟೆಯ ಕೆರೆಕೋಡಿ ನಿವಾಸಿಯಾದ ವಲ್ಲಿ ಎನ್ನುವ ಮಹಿಳೆ ಮೂಲಕ ಮುನಿರಾಜು, ಮಗು ಮಾರಾಟ ಮಾಡಿರುವ ಆರೋಪ ಕೇಳಿಬಂದಿದೆ. ತನಗೆ ಮಗು ಬೇಕೆಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಿಳಾ ಆಯೋಗಕ್ಕೆ ದೂರು ನೀಡಿದ್ದಾಳೆ. ಮಗು ಅಪಹರಣ ಮಾಡಿದ್ದಾರೆಂದು ಪತಿ ಮುನಿರಾಜು ಹಾಗೂ ವಲ್ಲಿ ವಿರುದ್ಧ ದೂರು ನೀಡಿರುವ ಪವಿತ್ರಾ, ಮಗುವನ್ನ ವಾಪಾಸ್ ಕೊಡಿಸುವಂತೆ ದೂರಿನಲ್ಲಿ ಮನವಿ ಮಾಡಿಕೊಂಡಿದ್ದಾರೆ.

## ಮೋಜು ಮಸ್ತಿ ತಾಣವಾದ ಎಪಿಎಂಸಿ ಆವರಣ

• ಉದಯವಾಹಿನಿ ಸಂತೇಮರಹಳ್ಳಿ


ಉದಯವಾಹಿನಿ ಚಿತ್ರ

**ಮರಗಳ ಕೆಳಗೆ ಕುಳಿತು ಮದ್ಯಪಾನ**

ಇಲ್ಲಿನ ಕೃಷಿ ಉಪ ಉತ್ಪನ್ನ ಮಾರುಕಟ್ಟೆ ಆವರಣ ಮದ್ಯ ವ್ಯಸನಿಗಳಿಗೆ ಮೋಜು ಮಸ್ತಿ ಮಾಡುವ ತಾಣವಾಗಿದೆ. ಚಾಮರಾಜನಗರ ರಸ್ತೆಯಲ್ಲಿರುವ ಕೃಷಿ ಉಪ ಉತ್ಪನ್ನ ಮಾರುಕಟ್ಟೆ ಪ್ರಾಂಗಣ 25 ಎಕರೆಗೂ ಹೆಚ್ಚು ವಿಸ್ತೀರ್ಣವಿದೆ. ಗಿಡ ಮರಗಳಿಂದ ಕೂಡಿದ ಈ ಜಾಗದಲ್ಲಿ ಸ್ಥಳೀಯರು ಮುಂಜಾನೆ ಮತ್ತು ಸಂಜೆ ವಾಯು ವಿಹಾರ ಮಾಡುತ್ತಾರೆ.

ಮುಸ್ಸಂಜೆಯಾಗುತ್ತಿದ್ದಂತೆ ಆವರಣದ ಒಳಗಡೆ ಇರುವ ಮರಗಳ ಕೆಳಗೆ ಕುಳಿತು ಮದ್ಯಪಾನ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಮದ್ಯ ಬಾಟಲಿಗಳು, ಪೌಚ್‌ಗಳು ಹಾಗೂ ಕಾಲಿ ಪ್ಲಾಸ್ಟಿಕ್ ಬಾಟಲಿಗಳನ್ನು ಎಲ್ಲೆಂದರಲ್ಲಿ ಎಸೆದು ಹೋಗುತ್ತಿದ್ದಾರೆ. ಇದರಿಂದಾಗಿ ಸಂತೆಯ ದಿನ ವ್ಯಾಪಾರಸ್ಥರು ಹಾಗೂ ಗ್ರಾಹಕರು ಕಿರಿಕಿರಿ ಅನುಭವಿಸುತ್ತಿದ್ದಾರೆ. ಮಾರುಕಟ್ಟೆ ಪ್ರಾಂಗಣದಲ್ಲಿ ಪ್ರತಿ ಮಂಗಳವಾರ ದೊಡ್ಡ ಮಟ್ಟದಲ್ಲಿ ಸಂತೆ ನಡೆಯುತ್ತದೆ. ತರಕಾರಿ, ಹಣ್ಣು, ದಿನಸಿಗಳು ಹಾಗೂ ಆಡು ಕುರಿಗಳ ಮಾರಾಟ ನಡೆಯುತ್ತದೆ. ಹಿಂದಿನ ರಾತ್ರಿ, ಸೋಮವಾರವೇ ಹೆಚ್ಚು ವ್ಯಾಪಾರಸ್ಥರು ಇಲ್ಲಿಗೆ ಬರುತ್ತಾರೆ. ಇವರು ಬಂದು ತಂಗುವ ವ್ಯವಸ್ಥೆ ಇಲ್ಲ. ಮೈಸೂರು, ಮಂಡ್ಯ ಜಿಲ್ಲೆಗಳಿಂದ ಬರುವ ವಾಪಾರಸ್ಥರು ಬಯಲಿನಲ್ಲಿ ಮಲಗಿ ಹಾವು ಚೇಳಿನ ಸಮಸ್ಯೆಯ ಜತೆಯಲ್ಲಿಯೇ ಕುಡುಕರ ಹಾವಳಿ ಎದುರಿಸಬೇಕಾಗಿದೆ.

## ಬೇಸಿಗೆ ಬೆಳೆ ಸಮೀಕ್ಷೆ: ಶೇ 97ರಷ್ಟು ಪೂರ್ಣ

• ಉದಯವಾಹಿನಿ ಚಿಕ್ಕಬಳ್ಳಾಪುರ

ಜಿಲ್ಲೆಯಲ್ಲಿ ಕೃಷಿ ಇಲಾಖೆಯು ಬೇಸಿಗೆ ಬೆಳೆ ಸಮೀಕ್ಷೆ ನಡೆಸಿದೆ. ಇಲ್ಲಿಯವರೆಗೆ ಶೇ 97.31ರಷ್ಟು ಬೆಳೆ ಸಮೀಕ್ಷೆ ಪೂರ್ಣವಾಗಿದೆ. ಉಳಿದ ತಾಕುಗಳ ಬೆಳೆ ಸಮೀಕ್ಷೆಯು ಮೂರು ದಿನಗಳಲ್ಲಿ ಪೂರ್ಣಗೊಳ್ಳಲಿದೆ ಎಂದು ಕೃಷಿ ಇಲಾಖೆ ತಿಳಿಸಿದೆ. ಬೇಸಿಗೆ ಬೆಳೆ ಸಮೀಕ್ಷೆಯು ಈಗಾಗಲೇ ಪೂರ್ಣಗೊಳ್ಳಬೇಕಾಗಿತ್ತು. ಆದರೆ ಚುನಾವಣೆಯ ಕಾರಣದಿಂದ ಕಾರ್ಯವು ಸ್ವಲ್ಪ ಮಟ್ಟಿಗೆ ತಡವಾಗಿದೆ. ಪ್ರತಿ ಬಾರಿಯೂ ಬೆಳೆ ಸಮೀಕ್ಷೆಯ ವಿಚಾರವಾಗಿ ಚಿಕ್ಕಬಳ್ಳಾಪುರವು ರಾಜ್ಯದಲ್ಲಿ ಅಗ್ರಪಟ್ಟಿಯ ಜಿಲ್ಲೆಗಳಲ್ಲಿ ಸ್ಥಾನ ಪಡೆಯುತ್ತದೆ. ಈ ಬಾರಿಯೂ ಉತ್ತಮವಾಗಿ ಬೆಳೆ ಸಮೀಕ್ಷೆ ನಡೆಸಿದ ಜಿಲ್ಲೆಗಳ ಸಾಲಿನಲ್ಲಿ ಇದೆ.

ಬೆಳೆ ಸಮೀಕ್ಷೆಯ ದತ್ತಾಂಶವು ಕೃಷಿ, ತೋಟಗಾರಿಕೆ, ರೇಷ್ಮೆ ಬೆಳೆಗಳ ವಿಸ್ತೀರ್ಣ ಲೆಕ್ಕ ಹಾಕುವ ಜೊತೆಗೆ ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಬೆಳೆ ಹಾನಿ ಕುರಿತು ಫಲಾನುಭವಿಗಳ ಪಟ್ಟಿ ತಯಾರಿಸಲು, ವಿಮಾ ಯೋಜನೆ, ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಫಲಾನುಭವಿಗಳನ್ನು ಗುರುತಿಸಲು, ಬೆಳೆ ಮಾನದಂಡಗಳಿಗೆ ಅನುಗುಣವಾಗಿ ಕೃಷಿ, ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆಗಳ ಫಲಾನುಭವಿ ಆಧಾರಿತ ಯೋಜನೆ ಅನುಷ್ಠಾನಕ್ಕೆ ಹಾಗೂ ಪಹಣಿಗಳಲ್ಲಿ ಬೆಳೆ ವಿವರ ದಾಖಲಿಸಲು ಸಹಾಯವಾಗುತ್ತದೆ.

ರೈತರು ತಮ್ಮ ಜಮೀನಿನಲ್ಲಿರುವ ಬೆಳೆಗಳ ವಿವರವನ್ನು ದಾಖಲಿಸಬೇಕು. ಇಲ್ಲದಿದ್ದರೆ ಸರ್ಕಾರದ ಯೋಜನೆಗಳಿಂದ ವಂಚಿತರಾಗುವ ಸಾಧ್ಯತೆಯೂ ಇರುತ್ತದೆ. ಬೇಸಿಗೆ ಮತ್ತು ಮುಂಗಾರು ಅವಧಿಯಲ್ಲಿ ಕೃಷಿ ಇಲಾಖೆಯು ಬೆಳೆ ಸಮೀಕ್ಷೆ ನಡೆಸುತ್ತದೆ.

# ಮಳೆ ಆರಂಭ: ಹೋಟೆಲ್, ರೆಸಾರ್ಟ್‌ಗಳಿಗೆ ಮಹತ್ವದ ಸೂಚನೆ

## ಕೊಡಗು ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆ ಆರಂಭ, ನೈಋತ್ಯ ಮುಂಗಾರು ಮಳೆ ಆರಂಭಕ್ಕೆ ಕೆಲವೇ ದಿನಗಳು ಬಾಕಿ

• ಉದಯವಾಹಿನಿ ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆ ಆರಂಭವಾಗಿದೆ. ನೈಋತ್ಯ ಮುಂಗಾರು ಮಳೆ ಆರಂಭಕ್ಕೆ ಕೆಲವೇ ದಿನಗಳು ಬಾಕಿ ಇದೆ. ಬೇಸಿಗೆಯಲ್ಲಿ ಬರದ ಛಾಯೆ ಎದುರಿಸಿದ್ದ ಪ್ರಸಿದ್ಧ ಪ್ರವಾಸಿ ತಾಣ ಕೊಡಗಿಗೆ ಮಳೆಗಾಲದಲ್ಲಿ ಹಲವಾರು ಪ್ರವಾಸಿಗರು ಭೇಟಿ ನೀಡುತ್ತಾರೆ.


ಕೊಡಗು ಜಿಲ್ಲೆಯಲ್ಲಿ ಇದೀಗ ಪೂರ್ವ ಮುಂಗಾರು ಮಳೆ ಪ್ರಾರಂಭವಾದ ಹಿನ್ನೆಲೆಯಲ್ಲಿ ಕಲುಷಿತ ಕುಡಿಯುವ ನೀರಿನ ಸೇವನೆಯಿಂದ ಕಾಲರ, ಶೀತ–ಜ್ವರ, ಕೆಮ್ಮು, ವಾಂತಿ, ಬೇದಿ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಎಚ್ಚರಿಸಲಾಗಿದೆ.

ಆದ್ದರಿಂದ ಜಿಲ್ಲೆಯ ಎಲ್ಲಾ ರಸ್ತೆ ಬದಿ ವ್ಯಾಪಾರಿಗಳು, ಡಾಬಾ, ಸ್ವೀಟ್ ಸ್ಟಾಲ್, ಬೇಕರಿ, ಚಾಟ್ಸ್, ಮೆಸ್, ಕ್ಯಾಂಟೀನ್, ಕ್ಯಾಟರಿಂಗ್, ಸಮುದಾಯ ಭವನ, ಕಲ್ಯಾಣ ಮಂಟಪ, ಪೇಯಿಂಗ್‌ಗೆಸ್ಟ್, ಹೋಮ್–ಸ್ಟೇ, ಹೋಟೆಲ್, ಬಾರ್ ಅಂಡ್ ರೆಸ್ಟೋರೆಂಟ್, ರೆಸಾರ್ಟ್, ಅಂಗನವಾಡಿ, ಮಧ್ಯಾಹ್ನದ ಬಿಸಿಯೂಟ ಕಾರ್ಯಕ್ರಮ, ಸರ್ಕಾರಿ ಮತ್ತು ಸರ್ಕಾರೇತರ ವಸತಿ ನಿಲಯ ಮತ್ತು ಎಲ್ಲಾ ಆಹಾರ ತಯಾರಿಕಾದಾರರು ಸಾರ್ವಜನಿಕರ/ ಮಕ್ಕಳ ಆರೋಗ್ಯದ ದೃಷ್ಟಿಯಿಂದ ಕಡ್ಡಾಯವಾಗಿ ಗ್ರಾಹಕರಿಗೆ ಕುದಿಸಿದ ಶುದ್ಧವಾದ ನೀರು ನೀಡುವಂತೆ ಸೂಚಲಾಗಿದೆ.

ಸೊಳ್ಳೆಗಳನ್ನು ಸಂಪೂರ್ಣವಾಗಿ ನಿಯಂತ್ರಿಸುವಂತೆ, ತ್ಯಾಜ್ಯ ವಸ್ತುಗಳನ್ನು ಸಮರ್ಪಕವಾಗಿ ವಿಲೇವಾರಿ ಮಾಡುವುದು ಮತ್ತು ತಯಾರಿಸಿರುವ ಎಲ್ಲಾ ಆಹಾರ ಪದಾರ್ಥಗಳನ್ನು ಸೂಕ್ತ ರಿತಿಯಲ್ಲಿ ಮುಚ್ಚಿಟ್ಟು ಸ್ವಚ್ಚವಾದ ವಿಧಾನದ ಮೂಲಕ ತಯಾರಿಕೆ ಮತ್ತು ವಿತರಣೆ ಮಾಡುವಂತೆ ತಿಳಿಸಿದೆ.

**ಆಹಾರದ ಬಗ್ಗೆಯೂ ನಿಗಾ:** ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ಪರಿವೀಕ್ಷಣೆ ಸಂದರ್ಭದಲ್ಲಿ ಕೆಲವು ಕಲ್ಯಾಣ ಮಂಟಪಗಳ ಕುಡಿಯುವ ನೀರಿನ ಆಹಾರ ಮಾದರಿಗಳನ್ನು ಕಾಯ್ದೆಯಡಿ ನೋಂದಾಯಿತವಾಗಿರುವ ಪ್ರಯೋಗಾಲಯಗಳಿಗೆ ಸೂಕ್ಷ್ಮಾಣು ವಿಶ್ಲೇಷಣೆ ಕಳುಹಿಸಲಾಗಿದೆ. ಕೆಲವು ಕಲ್ಯಾಣ ಮಂಟಪಗಳ ನೀರು ಕುಡಿಯಲು ಯೋಗ್ಯವಿಲ್ಲವೆಂಬುದಾಗಿ ವರದಿ ಸ್ವೀಕೃತವಾಗಿದೆ ಎಂದು ಹೇಳಿದೆ. ಆದ್ದರಿಂದ ಎಲ್ಲಾ ಆಹಾರ ತಯಾರಿಕಾದಾರರು, ಆಹಾರ ತಯಾರಿಕೆಯ ಎಲ್ಲಾ ಹಂತಗಳಲ್ಲಿ ಸಾರ್ವಜನಿಕ ಆರೋಗ್ಯವನ್ನು ಗಮನದಲ್ಲಿಟ್ಟುಕೊಂಡು ಆಹಾರ ತಯಾರಿಕೆಗೆ ಬಳಸುವ ನೀರನ್ನು ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯಡಿ ನೋಂದಾಯಿತವಾಗಿರುವ ಪ್ರಯೋಗಾಲಯಗಳಿಗೆ ಪ್ರತಿ ಆರು ತಿಂಗಳಿಗೆ ಒಮ್ಮೆ ಖುದ್ದು ವಿಶ್ಲೇಷಣೆಗಾಗಿ ಕಳುಹಿಸಲು ಸೂಚನೆ ನೀಡಲಾಗಿದೆ. ಅಲ್ಲದೇ ನೀರನ್ನು ಮಿತವಾಗಿ ಬಳಸಿ. ಅನುಪ ಯುಕ್ತವಾಗಿ ಬಳಸದೆ ಕಾರು, ಸ್ಕೂಟರ್ ಇತ್ಯಾದಿ ವಾಹನಗಳನ್ನು ಕುಡಿಯುವ ನೀರಿನಿಂದ ಶುಚಿಗೊಳಿಸದೇ ಅಲ್ಲದೆ ಮನೆಯ ಹೂ ತೋಟ ಮತ್ತು ಹೂ ಕುಂಡಗಳಿಗೆ ಉಪಯೋಗಿಸದೇ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸುವಂತೆಯೂ ಮನವಿ ಮಾಡಲಾಗಿತ್ತು.

ಒಂದು ವೇಳೆ ಕುಡಿಯುವ ನೀರನ್ನು ಅನುಪಯುಕ್ತವಾಗಿ ಬಳಕೆ ಮಾಡುವುದು ಕಂಡು ಬಂದಲ್ಲಿ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿತ್ತು.


ಉದಯವಾಹಿನಿ ಚಿತ್ರ

> ಹಾಗೆಯೇ ಎಲ್ಲಾ ವರ್ಗದವರು ಕಡ್ಡಾಯವಾಗಿ ಆಹಾರ ನೋಂದಣಿ/ ಪರವಾನಗಿಯನ್ನು ಪಡೆಯುವುದು, ತಪ್ಪಿದಲ್ಲಿ ಕಾಯ್ದೆಯಡಿ ನೋಟೀಸ್ ಮತ್ತು ದಂಡ ವಿಧಿಸಲಾಗುವುದು
> -ಡಾ. ಇ. ಅನಿಲ್ ಧಾವನ್, ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಇಲಾಖೆಯ ಅಂಕಿತ ಅಧಿಕಾರಿ

### ದಿನ ಬಿಟ್ಟು ದಿನ ಕುಡಿಯುವ ನೀರು ಸರಬರಾಜು

ಈಗ ನೀರಿನ ಬವಣೆ ಇರುವುದರಿಂದ ಮುಂದೆ ಮಳೆ ಬಂದು ನೀರಿನ ಹರಿವು ಹೆಚ್ಚಾಗಿ ನೀರು ಶೇಖರಣೆ ಆಗುವವರೆಗೆ ಎಲ್ಲಾ ಮಡಿಕೇರಿ ನಗರಸಭೆಯ 23 ವಾರ್ಡ್‌ಗಳಿಗೆ ಏಕಕಾಲದಲ್ಲಿ ಕುಡಿಯುವ ನೀರು ಸರಬರಾಜು ಮಾಡುವುದು ಕಷ್ಟ. ಆದ್ದರಿಂದ ದಿನ ಬಿಟ್ಟು ದಿನ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತದೆ ಎಂದು ತಿಳಿಸಲಾಗಿತ್ತು.

### ಈ ಬಾರಿ ಕುಡಿಯುವ ನೀರಿನ ಕೊರತೆ ಎದುರಾಗಿದೆ

ಕೊಡಗು ಜಿಲ್ಲೆಯಲ್ಲಿಯೂ ಈ ಬಾರಿ ಕುಡಿಯುವ ನೀರಿನ ಕೊರತೆ ಎದುರಾಗಿದೆ. ಮಡಿಕೇರಿ ನಗರಕ್ಕೆ ಕುಡಿಯುವ ನೀರು ಸರಬರಾಜು ಮಾಡುವ ಕೂಟುಹೊಳೆಯಲ್ಲಿ ಬೇಸಿಗೆಯಲ್ಲಿ ನೀರಿನ ಮಟ್ಟ ಕುಸಿದು, ಬತ್ತಿ ಹೋಗಿತ್ತು. ಕುಂಡಾಮೇಸ್ತ್ರಿಯಿಂದ ನೀರು ಸರಬರಾಜು ಮಾಡಲಾಗುತ್ತಿದೆ.

# ಮಿನಿ ನ್ಯೂಸ್

## ಮನೆಗೋಡೆ ಬಿದ್ದು ವ್ಯಕ್ತಿ ಸಾವು

• ಉದಯವಾಹಿನಿ ಕನಕಪುರ

ಹಳೆ ಮನೆಯೊಂದರ ಗೋಡೆ ಉರುಳಿ ಬಿದ್ದು ವ್ಯಕ್ತಿಯೊಬ್ಬರು ಸಾವನ್ನಪ್ಪಿರುವುದು ಶನಿವಾರ ರಾತ್ರಿ ನಡೆದಿದೆ.ನಾಯಕನಹಳ್ಳಿ ಸುರೇಶ್ (40) ಮೃತರು. ಗಾರೆ ಕೆಲಸಗಾರ ಮಾಡುತ್ತಿದ್ದ ಅವರು, ಶನಿವಾರ ಕೆಲಸ ಮುಗಿಸಿ ವಾಪಸ್ ಮನೆಗೆ ಹೋಗುವಾಗ ಈ ಘಟನೆ ನಡೆದಿದೆ.

ತೀವ್ರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗ ಮಧ್ಯದಲ್ಲಿ ಸಾವನ್ನಪ್ಪಿದ್ದಾರೆ. ಸಾತನೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ತಂತ್ರಜ್ಞಾನದೊಂದಿಗೆ ಕೌಶಲ ಅಗತ್ಯ


ಉದಯವಾಹಿನಿ ಚಿತ್ರ

• ಉದಯವಾಹಿನಿ ತಿಪಟೂರು

ಯುವಜನತೆ ತಂತ್ರಜ್ಞಾನದೊಂದಿಗೆ ಕೌಶಲ ನವೀಕರಿಸಬೇಕು. ತಮ್ಮ ಗುರಿಯನ್ನು ಕೇವಲ ಹಣಗಳಿಸುವ ಉದ್ಯೋಗಕ್ಕಲ್ಲದೆ ಸದೃಡ ಸಮಾಜ ನಿರ್ಮಾಣಕ್ಕೆ ಅನುಕೂಲವಾಗಿರುವಂತೆ ಕಾರ್ಯ ನಿರ್ವಹಿಸಬೇಕು ಎಂದು ತುಮಕೂರು ವಿಶ್ವವಿದ್ಯಾಲಯದ ಡೀನ್ ಪಿ.ಪರಮಶಿವಯ್ಯ ಹೇಳಿದರು. ಕಲ್ಪತರು ತಾಂತ್ರಿಕ ಮಹಾವಿದ್ಯಾಲಯದ ಎಂಬಿಎ ವಿಭಾಗದಿಂದ ವಿದ್ಯಾರ್ಥಿಗಳಿಗೆ ಗ್ರಾಜುಯೇಷನ್‌ಡೇ ಉದ್ಘಾಟಿಸಿ ಮಾತನಾಡಿದರು. ಪಿ.ವಿ.ನರಸಿಂಹರಾವ್ ಮತ್ತು ಮನಮೋಹನ್ ಸಿಂಗ್ ಪ್ರಧಾನಿಯಾದ ಅವಧಿಯಲ್ಲಿ ಆರ್ಥಿಕ ಉದಾರೀಕರಣಕ್ಕೆ ಮುನ್ನುಡಿ ಬರೆದರು. ವಿದೇಶಿ ಹೂಡಿಕೆಗೆ ತೆರೆದುಕೊಳ್ಳುವಿಕೆ ಬಂಡವಾಳ ಮಾರುಕಟ್ಟೆ ಸುಧಾರಿಸುವುದು ದೇಶೀಯ ವ್ಯಾಪಾರ ನಿಯಂತ್ರಣ ನೀತಿ ಹೊರತಂದರು. ವಿದ್ಯಾರ್ಥಿಗಳು ಹಣವನ್ನು ನೀರಿನಂತೆ ಸಂಗ್ರಹಿಸಬೇಕು, ತೀರ್ಥದಂತೆ ಬಳಸಬೇಕು ಎಂದರು.

ಸಂಸ್ಥೆಯ ಅಧ್ಯಕ್ಷ ಪಿ.ಕೆ.ತಿಪ್ಪೇರುದ್ರಪ್ಪ, ಉಪಾಧ್ಯಕ್ಷ ಬಾಗೇಪಲ್ಲಿ ನಟರಾಜು, ಎಂ.ಆರ್.ಸಂಗಮೇಶ್, ಜಿ.ಪಿ.ದೀಪಕ್, ಜಿ.ಎಸ್. ಉಮಾಶಂಕರ್, ಜಿ.ಡಿ.ಗುರುಮೂರ್ತಿ, ದೀಪ್ತಿ ಅಮಿತ್, ಮಿಟ್ಟ ಶೇಖರಗೌಡ ಇದ್ದರು.

## ಮಹಾರಾಷ್ಟ್ರ ಸಿಎಂಗೆ ತಿರುಗೇಟು ಕೊಟ್ಟ ಸಿಎಂ ಸಿದ್ದರಾಮಯ್ಯ

• ಉದಯವಾಹಿನಿ ಮೈಸೂರು



ನಮ್ಮಲ್ಲಿ ಒಳಜಗಳ ಇಲ್ಲ, ಹಾಗಿದ್ದಿದ್ದರೆ ಲೋಕಸಭಾ ಚುನಾವಣೆಯಲ್ಲಿ ಒಗ್ಗಟ್ಟಿನಿಂದ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನ ವಿಮಾನ ನಿಲ್ದಾಣದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಜಗಳವಾಗಿ ಸರ್ಕಾರ ಪತನವಾಗಲಿದೆ ಎಂದು ಪಬಿಜೆಪಿ ನಾಯಕರು ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯೆ ನೀಡಿ ಅವರು ರಾಜಕೀಯವಾಗಿ ಹೇಳಿಕೆ ನೀಡುತ್ತಿದ್ದಾರೆ ಎಂದರು. ಪರಿಷತ್ ಚುನಾವಣೆಯ ವಾತಾವರಣ ಉತ್ತಮವಾಗಿದ್ದು, ಈ ಬಾರಿ ಕಾಂಗ್ರೆಸ್ ಪಕ್ಷ ಚುನಾವಣೆಯನ್ನು ಗಂಭೀರವಾಗಿ ಪರಿಗಣಿಸಿದೆ. ಅದಕ್ಕಾಗಿ ಅಭ್ಯರ್ಥಿಗಳನ್ನು ಆರು ತಿಂಗಳು ಮುಂಚಿತವಾಗಿಯೇ ಆಯ್ಕೆ ಮಾಡಲಾಗಿತ್ತು. ಅಭ್ಯರ್ಥಿಗಳಿಗೆ ಸಮಯ ಸಿಕ್ಕು, ಮತದಾರರನ್ನು ಭೇಟಿಯಾಗಲು ಅವಕಾಶ ದೊರೆಯಿತು ಎಂದರು. ಮೈತ್ರಿ ಪರಿಣಾಮ ಚುನಾವಣೆಯ ಮೇಲೆ ಆಗಲಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿ ಲೋಕಸಭೆ ಚುನಾವಣೆಯಲ್ಲಿಯೂ ಕೆಡಿಎಸ್ ಬಿಜೆಪಿ ಮೈತ್ರಿ ಮಾಡಿಕೊಂಡಿದ್ದು, ಯಾವುದೇ ಪರಿಣಾಮ ಬೀರುವುದಿಲ್ಲ ಎಂದರು. ಸಾಧನೆಗಳ ತುಲನೆ ಮಾಡುವ ಶಕ್ತಿ ಮತದಾರರಿಗಿದೆ

## ರಸ್ತೆ ಬದಿಗಳಲ್ಲಿ ಗುಲ್‌ಮೊಹರ್ ರಂಗು

• ಉದಯವಾಹಿನಿ ಮಡಿಕೇರಿ


ಉದಯವಾಹಿನಿ ಚಿತ್ರ

ಪ್ರಕೃತಿ ಸೌಂದರ್ಯಕ್ಕೆ ಹೆಸರುವಾಸಿಯಾಗಿರುವ ಕೊಡಗಿನಲ್ಲಿ ಇದೀಗ ಗುಲ್‌ಮೊಹರ್ ತನ್ನ ಸೌಂದರ್ಯದ ಮೊಹರನ್ನೊತ್ತಿದೆ. ಮರದ ತುಂಬೆಲ್ಲ ಕೆಂಪು ಹೂಗಳನ್ನರಳಿಸಿಕೊಂಡು ನೋಡುಗರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಉತ್ತರ ಕೊಡಗಿನಲ್ಲೇ ಹೆಚ್ಚಾಗಿ ಕಾಣಸಿಗುವ ಈ ಮರಗಳು ಬಿರುಬೇಸಿಗೆಯಲ್ಲೂ ಹೂವರಳಿಸಿಕೊಂಡು ಬಿಸಿಲಿಗೆ ಸೆಡ್ಡು ಹೊಡೆದಿವೆ. ಮಾತ್ರವಲ್ಲ, ಈಚೆಗೆ ಬೀಸಿದ ಬಿರುಗಾಳಿ ಮಳೆಗೂ ಜಗ್ಗದೇ, ಅಳುಕದೇ ಎಲ್ಲರ ಕಣ್ಮನಗಳನ್ನು ತನ್ನತ್ತ ಆಕರ್ಷಿಸುತ್ತಿವೆ.

ಕುಶಾಲನಗರದ ವ್ಯಾಪ್ತಿಯಲ್ಲಿ ಹೆಚ್ಚಿರುವ ಈ ಮರಗಳು ಕುಶಾಲನಗರದಿಂದ ಮಡಿಕೇರಿಗೆ ಬರುವ ಹಾದಿಗುಂಟ ಅಲ್ಲಲ್ಲಿ ತನ್ನ ರಂಗನ್ನು ಚೆಲ್ಲಿವೆ. ಈ ಹೂಮರಗಳು ಪ್ರವಾಸಿಗರಿಗೆ ರಂಗಿನ ಸ್ವಾಗತ ಕೋರುತ್ತಿವೆ. ಪ್ರಕೃತಿ ಸೌಂದರ್ಯಕ್ಕೆ ಕಿರೀಟವಿಟ್ಟಂತಿರುವ ಇವುಗಳ ಸೌಂದರ್ಯಕ್ಕೆ ಎಣೆ ಇಲ್ಲದಂತಿದೆ. ಕವಿ ನಿಸಾರ್ ಅಹಮ್ಮದ್ ಅವರು ಗುಲ್‌ಮೊಹರಿನ ಈ ಹೂಗಳ ಅಂದವನ್ನು ತಮ್ಮ 2 ಕವನಗಳಲ್ಲಿ ವರ್ಣಿಸಿದ್ದಾರೆ. 'ಗುಲ್ ಮೊಹರ್ ಗೀತ' ಎಂಬ ತಮ್ಮ ಒಂದು ಪದ್ಯದಲ್ಲಿ ಅವರು 'ಬಿಸಿಲೆಣ್ಣೆಗೆ ಹೊತ್ತಿವೆ ಕೊಂಬೆಯ ಬತ್ತಿ ಝಗಝುಗಿಸಿದೆ ತಣ್ಣಗೆ ನೆತ್ತಿ...' ಎಂಬ ಸಾಲಿನಲ್ಲಿ ಚೆಂದವಾಗಿ ಹಿಡಿದಿಟ್ಟಿದ್ದಾರೆ. ಜೊತೆಗೆ, 'ಹೂ ಮೊಗ್ಗಿಗೆ ಎದೆ ಕದಿಯುವ ಹಿಗ್ಗಿದೆ ಮರಕಿದೆ ಸ್ವಂತದ ಮೊಹರು...' ಎಂಬ ಸಾಲುಗಳಲ್ಲಿ ಈ ಹೂವಿನ ಸೆಳೆಯುವಿಕೆಯ ಗಮ್ಮತ್ತನ್ನು ಹೇಳಿದ್ದಾರೆ.

## ಕಾಡಾನೆ ವಿರುದ್ಧ ಮಹತ್ವದ ಕಾರ್ಯಾಚರಣೆ

• ಉದಯವಾಹಿನಿ ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ಹಲವು ದಿನಗಳ ನಂತರ ಕಾಡಾನೆಗಳ ವಿರುದ್ಧ ಮಹತ್ವದ ಕಾರ್ಯಾಚರಣೆಗೆ ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ. ಮೇ 14ರಿಂದ ಕಾರ್ಯಾಚರಣೆ ಆರಂಭವಾಗಲಿದ್ದು, 1 ಕಾಡಾನೆ ಸೆರೆ ಹಿಡಿಯಲು ಹಾಗೂ 2 ಕಾಡಾನೆಗಳಿಗೆ ರೇಡಿಯೊ ಕಾಲರಿಂಗ್ ಅಳವಡಿಸಲು ಸಿದ್ಧತೆಗಳು ನಡೆದಿವೆ. ಸಿದ್ದಾಪುರ ಭಾಗದಲ್ಲಿ ಈ ಕಾರ್ಯಾಚರಣೆ ನಡೆಯಲಿದೆ. ಒಂಟಿ ಸಲಗವೊಂದು ಪದೇ ಪದೇ ದಾಳಿ ನಡೆಸುತ್ತಿದೆ. ಇನ್ನೆರಡು ಆನೆ ಹಿಂಡುಗಳು ರೈತರನ್ನು ಇನ್ನಿಲ್ಲದಂತೆ ಕಾಡುತ್ತಿವೆ. ಹಾಗಾಗಿ, ಒಂಟಿ ಸಲಗವನ್ನು ಸೆರೆ ಹಿಡಿಯಲು ಹಾಗೂ 2 ಕಾಡಾನೆ ಹಿಂಡಿನ ಮುಖ್ಯ ಆನೆಗಳಿಗೆ ರೇಡಿಯೊ ಕಾಲರಿಂಗ್ ಅಳವಡಿಸಲಾಗುತ್ತದೆ. ಈಗಾಗಲೇ ಕೊಡಗು ಜಿಲ್ಲೆಯಲ್ಲಿ 12 ಆನೆಗಳಿಗೆ ರೇಡಿಯೊ ಕಾಲರಿಂಗ್ ಅಳವಡಿಸಲಾಗಿದ್ದು, ಯಶಸ್ವಿಯಾಗಿದೆ. ಇದರಿಂದ ರೈತರ ಜಮೀನುಗಳು, ಜನವಸತಿ ಪ್ರದೇಶಗಳ ಮೇಲಿನ ಆನೆಗಳ ದಾಳಿಯನ್ನು ಸುಲಭವಾಗಿ ಪತ್ತೆ ಹಚ್ಚಬಹುದಾಗಿದೆ ಎಂದು ಅರಣ್ಯ ಇಲಾಖೆಯ ಅಧಿಕಾರಿಗಳು ಹೇಳುತ್ತಾರೆ.

## ಅಂತರಾಳದಿಂದ.. EDITORIAL

# ದಾಭೋಲ್ಕರ್: ಕೊಂದವರಿಗೆ ಶಿಕ್ಷೆ ಪ್ರಕರಣದಲ್ಲಿ ನ್ಯಾಯ ದೊರೆಯಿತೇ?

ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರ ಹತ್ಯೆ ನಡೆದ 11 ವರ್ಷಗಳ ನಂತರ, ಹತ್ಯೆಯ ಆರೋಪಿಗಳಿಗೆ ಶಿಕ್ಷೆ ಆಗಿದೆ. ಆದರೆ, ನ್ಯಾಯದಾನ ವಿಳಂಬವಾದ ಪರಿಣಾಮವಾಗಿ ನ್ಯಾಯದ ನಿರಾಕರಣೆಯೂ ಆಗಿದೆ. ಈ ಹತ್ಯೆಗೆ ಸಂಬಂಧಿಸಿದ ಎಲ್ಲರಿಗೂ ಶಿಕ್ಷೆ ಕೊಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ. ದಾಭೋಲ್ಕರ್ ಅವರನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ ಇಬ್ಬರನ್ನು ಪುಣೆಯ ವಿಶೇಷ ನ್ಯಾಯಾಲಯವೊಂದು ಶಿಕ್ಷೆಗೆ ಗುರಿಪಡಿಸಿದೆ. ಆದರೆ ಈ ಹತ್ಯೆ ಪ್ರಕರಣದ ಹಿಂದಿನ ಪಿತೂರಿಯಲ್ಲಿ ಭಾಗಿಯಾಗಿದ್ದ ಆರೋಪ ಹೊತ್ತಿದ್ದ ಇತರ ಮೂವರನ್ನು ಖುಲಾಸೆಗೊಳಿಸಿದೆ. ಹೀಗೆ ಖುಲಾಸೆಗೊಂಡವರಲ್ಲಿ ವೀರೇಂದ್ರ ಸಿಂಗ್ ತಾವಡೆ ಅವರೂ ಸೇರಿದ್ದಾರೆ. ಈ ವ್ಯಕ್ತಿಯೇ ಮುಖ್ಯ ಸಂಚುಗಾರ ಎಂದು ಪ್ರಕರಣದ ತನಿಖೆ ನಡೆಸಿದ ಸಿಬಿಐ ಆರೋಪಿಸಿತ್ತು. ಐದೂ ಮಂದಿ ಆರೋಪಿಗಳು ಹಿಂದುತ್ವವಾದಿ ಸಂಘಟನೆಯಾದ ಸನಾತನ ಸಂಸ್ಥೆ ಜೊತೆ ನಂಟು ಹೊಂದಿದ್ದರು ಎಂದು ಸಿಬಿಐ ಹೇಳಿತ್ತು, ಆದರೆ, ಐದೂ ಮಂದಿಯ ಪೈಕಿ ಮೂವರ ವಿರುದ್ಧದ ಆರೋಪಗಳನ್ನು ಸಾಬೀತು ಮಾಡುವಲ್ಲಿ ತನಿಖಾ ಸಂಸ್ಥೆಯು ವಿಫಲವಾಗಿದೆ. ನ್ಯಾಯಾಲಯವು ಸಿಬಿಐ ಕುರಿತು ಕೆಲವು ಕಟುವಾದ ಮಾತುಗಳನ್ನು ಆಡಿದೆ. ಮೂವರನ್ನು ಖುಲಾಸೆಗೊಳಿಸುತ್ತಿರುವುದು ಅವರು ಹತ್ಯೆಯಲ್ಲಿ ಯಾವುದೇ ಪಾತ್ರ ವಹಿಸಿಲ್ಲ ಎಂಬ ಕಾರಣಕ್ಕಾಗಿ ಅಲ್ಲ; ಬದಲಿಗೆ, ಪ್ರಕರಣದ ತನಿಖೆಯನ್ನು ನಡೆಸಿದ ಮಹಾರಾಷ್ಟ್ರ ಪೊಲೀಸರು ಮತ್ತು ಸಿಬಿಐ ಅಧಿಕಾರಿಗಳು ತಮ್ಮ ಪಾಲಿನ ಕೆಲಸವನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಕ್ಕಾಗಿ ಎಂದು ಕೋರ್ಟ್ ಹೇಳಿದೆ. ಕೊಂದವರಿಗೆ ಶಿಕ್ಷೆ ಪ್ರಕರಣದಲ್ಲಿ ನ್ಯಾಯ ದೊರೆಯಿತೇ?

ವಿಚಾರವಾದಿ ನರೇಂದ್ರ ದಾಭೋಲ್ಕರ್ ಅವರ ಹತ್ಯೆ ನಡೆದ 11 ವರ್ಷಗಳ ನಂತರ, ಹತ್ಯೆಯ ಆರೋಪಿಗಳಿಗೆ ಶಿಕ್ಷೆ ಆಗಿದೆ. ಆದರೆ, ನ್ಯಾಯದಾನ ವಿಳಂಬವಾದ ಪರಿಣಾಮವಾಗಿ ನ್ಯಾಯದ ನಿರಾಕರಣೆಯೂ ಆಗಿದೆ. ಈ ಹತ್ಯೆಗೆ ಸಂಬಂಧಿಸಿದ ಎಲ್ಲರಿಗೂ ಶಿಕ್ಷೆ ಕೊಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ. ದಾಭೋಲ್ಕರ್ ಅವರನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ ಇಬ್ಬರನ್ನು ಪುಣೆಯ ವಿಶೇಷ ನ್ಯಾಯಾಲಯವೊಂದು ಶಿಕ್ಷೆಗೆ ಗುರಿಪಡಿಸಿದೆ. ಆದರೆ ಈ ಹತ್ಯೆ ಪ್ರಕರಣದ ಹಿಂದಿನ ಪಿತೂರಿಯಲ್ಲಿ ಭಾಗಿಯಾಗಿದ್ದ ಆರೋಪ ಹೊತ್ತಿದ್ದ ಇತರ ಮೂವರನ್ನು ಖುಲಾಸೆಗೊಳಿಸಿದೆ. ಹೀಗೆ ಖುಲಾಸೆಗೊಂಡವರಲ್ಲಿ ವೀರೇಂದ್ರ ಸಿಂಗ್ ತಾವಡೆ ಅವರೂ ಸೇರಿದ್ದಾರೆ.

**ಈ ವ್ಯಕ್ತಿಯೇ ಮುಖ್ಯ ಸಂಚುಗಾರ ಎಂದು ಪ್ರಕರಣದ ತನಿಖೆ ನಡೆಸಿದ ಸಿಬಿಐ ಆರೋಪಿಸಿತ್ತು. ಐದೂ ಮಂದಿ ಆರೋಪಿಗಳು ಹಿಂದುತ್ವವಾದಿ ಸಂಘಟನೆಯಾದ ಸನಾತನ ಸಂಸ್ಥೆ ಜೊತೆ ನಂಟು ಹೊಂದಿದ್ದರು ಎಂದು ಸಿಬಿಐ ಹೇಳಿತ್ತು, ಆದರೆ, ಐದೂ ಮಂದಿಯ ಪೈಕಿ ಮೂವರ ವಿರುದ್ಧದ ಆರೋಪಗಳನ್ನು ಸಾಬೀತು ಮಾಡುವಲ್ಲಿ ತನಿಖಾ ಸಂಸ್ಥೆಯು ವಿಫಲವಾಗಿದೆ. ನ್ಯಾಯಾಲಯವು ಸಿಬಿಐ ಕುರಿತು ಕೆಲವು ಕಟುವಾದ ಮಾತುಗಳನ್ನು ಆಡಿದೆ.**

ಮೂವರನ್ನು ಖುಲಾಸೆಗೊಳಿಸುತ್ತಿರುವುದು ಅವರು ಹತ್ಯೆಯಲ್ಲಿ ಯಾವುದೇ ಪಾತ್ರ ವಹಿಸಿಲ್ಲ ಎಂಬ ಕಾರಣಕ್ಕಾಗಿ ಅಲ್ಲ; ಬದಲಿಗೆ, ಪ್ರಕರಣದ ತನಿಖೆಯನ್ನು ನಡೆಸಿದ ಮಹಾರಾಷ್ಟ್ರ ಪೊಲೀಸರು ಮತ್ತು ಸಿಬಿಐ ಅಧಿಕಾರಿಗಳು ತಮ್ಮ ಪಾಲಿನ ಕೆಲಸವನ್ನು ನಿರ್ವಹಿಸುವಲ್ಲಿ ವಿಫಲರಾಗಿದ್ದಕ್ಕಾಗಿ ಎಂದು ಕೋರ್ಟ್ ಹೇಳಿದೆ.ಕೋರ್ಟ್‌ನ ಟೀಕೆಗಳು ಹಾಗೂ ಅದು ಹೇಳಿರುವ ಮಾತುಗಳು ಬಹಳ ಗಂಭೀರವಾದುವು. ರಾಷ್ಟ್ರ ಮಟ್ಟದಲ್ಲಿ ಸುದ್ದಿಮಾಡಿದ ಪ್ರಕರಣವೊಂದನ್ನು ಸರಿಯಾಗಿ ನಿಭಾಯಿಸದೇ ಇದ್ದುದನ್ನು ಆ ಮಾತುಗಳು ತೋರಿಸುತ್ತವೆ. ಹತ್ಯೆಯ ಹಿಂದೆ ಪಿತೂರಿ ಇತ್ತು, ನಿರ್ದಿಷ್ಟ ವ್ಯಕ್ತಿಗಳ ವಿರುದ್ಧ ಪಿತೂರಿಯ ಆರೋಪ ಇತ್ತು ಎಂಬುದು ಕೋರ್ಟ್‌ಗೆ ಮನವರಿಕೆ ಆಗಿದೆ. ತಾವಡೆ ಅವರು ಹತ್ಯೆ ಮಾಡುವ ಉದ್ದೇಶ ಹೊಂದಿದ್ದರು ಎಂಬುದಕ್ಕೆ ಆಧಾರ ಇದೆ ಎಂದು ಕೋರ್ಟ್ ಹೇಳಿದೆ. ಅಲ್ಲದೆ, ಖುಲಾಸೆಗೊಂಡ ಇತರ ಇಬ್ಬರಾದ ಸಂಜೀವ್ ಪುನಾಲೇಕರ್ ಮತ್ತು ವಿಕ್ರಂ ಭವೆ// ವಿರುದ್ಧ ಸಕಾರಣಗಳ ಅನುಮಾನ ಇದೆ ಎಂದೂ ಅದು ಹೇಳಿದೆ. ಆದರೆ ಇವರಿಬ್ಬರ ಮೇಲಿನ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಕೂಡ ಪ್ರಾಸಿಕ್ಯೂಷನ್ ವಿಫಲವಾಯಿತು. ಆರೋಪಿಗಳ ಪರ ವಕೀಲರ ನಡೆಯ ಬಗ್ಗೆ ಕೋರ್ಟ್ ಮಹತ್ವದ ಕೆಲವು ಮಾತುಗಳನ್ನು ಹೇಳಿದೆ. ಆ ವಕೀಲರು 'ದಾಭೋಲ್ಕರ್ ಅವರನ್ನು ಹಿಂದೂ ವಿರೋಧಿ ಎಂದು ಚಿತ್ರಿಸಿ, ಅವರ ಹತ್ಯೆಯನ್ನು ಸಮರ್ಥಿಸುವಂತೆ ನಡೆದುಕೊಂಡಿದ್ದರು ಎಂದು ಹೇಳಿದೆ. ದಾಭೋಲ್ಕರ್ ಅವರ ಹತ್ಯೆಯು ಅವರು ಪಾಲಿಸುತ್ತಿದ್ದ ಸಿದ್ಧಾಂತವನ್ನು ಅಂತ್ಯಗೊಳಿಸುವ ಒಂದು ಯತ್ನವಾಗಿತ್ತು ಎಂದು ನ್ಯಾಯಾಲಯ ಹೇಳಿದೆ. ಈ ಕಾರಣಕ್ಕಾಗಿಯೇ ಇಡೀ ಪ್ರಕರಣವನ್ನು ಹಾಗೂ ಪ್ರಕರಣವನ್ನು ನಿಭಾಯಿಸಿದ ಬಗೆಯನ್ನು ವಿಸ್ತೃತ ನೆಲೆಯಲ್ಲಿ ನೋಡಬೇಕಾದ ಅಗತ್ಯ ಇದೆ. ದಾಭೋಲ್ಕರ್ ಅವರು ವೈಜ್ಞಾನಿಕ ಮನೋಭಾವವನ್ನು ಪ್ರತಿಪಾದಿಸುತ್ತಿದ್ದರು. 2005ರಲ್ಲಿ ಮಹಾರಾಷ್ಟ್ರದಲ್ಲಿ ರೂಪುಗೊಂಡ ಅಂಧಶ್ರದ್ಧೆ ವಿರೋಧಿ ಮಸೂದೆಯ ಹಿಂದಿನ ಚಾಲಕ ಶಕ್ತಿಯೂ ಅವರಾಗಿದ್ದರು. ಈ ಮಸೂದೆಗೆ ಹಲವು ಬಲಪಂಥೀಯ ಸಂಘಟನೆಗಳು ವಿರೋಧ ದಾಖಲಿಸಿದ್ದವು. ದಾಭೋಲ್ಕರ್ ಹತ್ಯೆಯ ನಂತರದಲ್ಲಿ ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಹಲವರ ಹತ್ಯೆಗಳು ನಡೆದವು. ಎಡಪಂಥೀಯ ಚಿಂತಕರಾದ ಗೋವಿಂದ ಪಾನ್ಸರೆ, ಸಂಶೋಧಕ ಎಂ.ಎಂ. ಕಲಬುರ್ಗಿ, ಪತ್ರಕರ್ತೆ ಗೌರಿ ಲಂಕೇಶ್ ಅವರ ಹತ್ಯೆಗಳು ಇಲ್ಲಿ ಪ್ರಮುಖವಾದುವು. ಈ ಎಲ್ಲಾ ಹತ್ಯೆಗಳಿಗೆ ಒಂದು ಸಂಬಂಧ ಇದೆ ಎಂಬುದು ನಂತರದಲ್ಲಿ ಹೆಚ್ಚೆಚ್ಚು ಸ್ಪಷ್ಟವಾಯಿತು. ಅಷ್ಟೇ ಅಲ್ಲ. ಈ ಪ್ರಕರಣಗಳ ತನಿಖೆಯ ಮೇಲೆ ರಾಜಕೀಯವು ಪ್ರಭಾವ ಬೀರಿತು ಎಂಬುದು ಕೂಡ ಸ್ಪಷ್ಟವಾಯಿತು. ದಾಭೋಲ್ಕರ್ ಅವರ ಹತ್ಯೆ ಆಗಿದ್ದು 2013ರಲ್ಲಿ, ಅವರ ಹತ್ಯೆಯ ಆರೋಪಿಗಳ ಬಂಧನ ಆಗಿದ್ದು 2018ರಲ್ಲಿ ತನಿಖೆಯು ವೇಗವಾಗಿ ನಡೆಯುತ್ತಿಲ್ಲ. ತನಿಖೆಯು ಸಮರ್ಪಕವಾಗಿ ಆಗುತ್ತಿಲ್ಲ ಎಂಬ ಸೂಚನೆಗಳು ಆರಂಭದಿಂದಲೂ ಇದ್ದವು. ದಾಭೋಲ್ಕರ್ ಅವರ ಹತ್ಯೆಯ ನಂತರದಲ್ಲಿ ಇದ್ದ ರಾಜಕೀಯ ವಾತಾವರಣ ಕೂಡ ಹತ್ಯೆಯ ತನಿಖೆಯ ಮೇಲೆ, ಪ್ರಾಸಿಕ್ಯೂಷನ್ ಮೇಲೆ ಪ್ರಭಾವ ಉಂಟುಮಾಡಿರಬಹುದು. ಹತ್ಯೆಗಳ ಹಿಂದಿನ ಪಿತೂರಿಯು ಸಂಪೂರ್ಣವಾಗಿ ಬಹಿರಂಗವಾದ ನಂತರದಲ್ಲಿ, ಹತ್ಯೆಯಲ್ಲಿ ಭಾಗಿಯಾದ ಎಲ್ಲರಿಗೂ ಶಿಕ್ಷೆಯಾದ ನಂತರದಲ್ಲಿ ಮಾತ್ರವೇ ನ್ಯಾಯದಾನ ಸಂಪೂರ್ಣವಾಗಿ ಆಗಿದೆ ಎಂದು ಹೇಳಬಹುದು.



# ಮಹಾಭಾರತ
## ದ್ರೋಣಪರ್ವ


• ಹಿಂದಿನ ಸಂಚಿಕೆಯಿಂದ

ಭಗದತ್ತನು ಆನೆಯ ಮೇಲಿನಿಂದಲೇ ಅರ್ಜುನನ ಮೇಲೆ ಬಾಣಗಳ ಮಳೆಗರೆದನು. ಆನೆಯು ಅರ್ಜುನನ ರಥವನ್ನು ಘಾತಿಸಲು ಪ್ರಯತ್ನಿಸಿದಾಗಲೆಲ್ಲ ಕೃಷ್ಣನು ಕುಶಲತೆಯಿಂದ ರಥವನ್ನು ನಡೆಸಿ ಆದರಿಂದ ತಪ್ಪಿಸಿಕೊಳ್ಳುತ್ತಿದ್ದುದು ಒಂದು ಮಂತ್ರಜಾಲದಂತೆ ತೋರುತ್ತಿದ್ದಿತು. ಅರ್ಜುನನು ಭಗದತ್ತನ ಬಿಲ್ಲುಗಳನ್ನೆಲ್ಲ ಒಂದಾದ ಮೇಲೊಂದರಂತೆ ಕತ್ತರಿಸಲು, ಅವನು ಭಲ್ಲೆಗಳನ್ನು ಪ್ರಯೋಗಿಸಲಾರಂಭಿಸಿದನು. ಅರ್ಜುನನು ಅವುಗಳನ್ನೂ ಮಾರ್ಗಮಧ್ಯದಲ್ಲಿಯೇ ಕತ್ತರಿಸಿ ಹಾಕಿದನು. ಭಗದತ್ತನು ಎಸೆದ ಮೂರು ಶಕ್ತ್ಯಾಯುಧಗಳನ್ನೂ ಅರ್ಜುನನು ಕುಶಲತೆಯಿಂದ ತಡೆದನು. ಅತ್ಯಂತ ಕೋಪಾವಿಷ್ಟನಾದ ಭಗದತ್ತನು ಮೈಮರೆತು ಕೈಯಲ್ಲಿದ್ದ ಆನೆಯ ಅಂಕುಶದಲ್ಲಿಯೇ ವೈಷ್ಣವಾಸ್ತ್ರವನ್ನು ಅಭಿಮಂತ್ರಿಸಿ ಅರ್ಜುನನು ಮೇಲೆ ಪ್ರಯೋಗಿಸಿದನು.

ತಕ್ಷಣ ಕೃಷ್ಣನು ಎದ್ದುನಿಂತು ಅದನ್ನು ಸೋಕಿದೊಡನೆಯೇ ಆ ವೈಷ್ಣವಾಸ್ತ್ರವು ಒಂದು ಪುಷ್ಪಮಾಲೆಯಾಗಿ ಪರಿವರ್ತಿತವಾಯಿತು. ಇದನ್ನು ನೋಡಿ ಎಲ್ಲರೂ ಸ್ತಂಭೀಭೂತರಾದರು. ಕೃಷ್ಣಾರ್ಜುನರಿಬ್ಬರೂ ಕ್ಷೇಮವಾಗಿರುವುದನ್ನು ನೋಡಿ ಭೀಮನು ಆನಂದದಿಂದ ಯುಧಿಷ್ಠಿರನನ್ನು ಆಲಂಗಿಸಿಕೊಂಡನು. ಕೃಷ್ಣನು ಹೀಗೆ ಮಾಡಿದುದನ್ನು ಕಂಡು ಅರ್ಜುನನು, ಕೃಷ್ಣ, ಹೀಗೇಕೆ ಮಾಡಿದೆ? ನನ್ನ ಮೇಲೆಸೆದ ಅಸ್ತ್ರವನ್ನು ನೀನು ಎದುರಿಸಿದೆಯಲ್ಲ? ಯುದ್ಧದಲ್ಲಿ ಭಾಗಹಿಸುವುದಿಲ್ಲವೆಂಬ ನಿನ್ನ ಪ್ರತಿಜ್ಞೆಯನ್ನು ಮರೆತೆಯಾ ಎನ್ನಲು ಕೃಷ್ಣನು ನಕ್ಕು ''ಅರ್ಜುನ, ಅದು ನನಗೆ ಸೇರಿದ್ದಾದ್ದರಿಂದ ಅದನ್ನು ನಾನು ತೆಗೆದುಕೊಂಡೆ. ಒಂದು ಸಲ ಯಾವುದೋ ಕೆಟ್ಟ ಘಳಿಗೆಯಲ್ಲಿ ನಾನು ಈ ಅಸ್ತ್ರವನ್ನು ನರಕಾಸುರನ ತಾಯಿಯಾದ ಪೃಥ್ವಿಗೆ ಕೊಟ್ಟೆ. ಯಾವ ಆಯುಧದಿಂದಲೂ ಮಗನಿಗೆ ಸಾವು ಸಂಭವಿಸಬಾರದೆಂದು ಅವಳು ಅದನ್ನು ಅವನಿಗೆ ಕೊಟ್ಟಳು. ನರಕಾಸುರನು ಅದನ್ನು ಭಗದತ್ತನಿಗೆ ಕೊಟ್ಟನು. ಅದು ಯಾರ ಮೇಲೆ ಪ್ರಯೋಗವಾಗುತ್ತಿದೆಯೋ ಅವರನ್ನು ಕೊಲ್ಲದೆ ಬಿಡದು. ನನಗೆ ನಿನ್ನನ್ನು ಕಳೆದುಕೊಳ್ಳಲು ಇಷ್ಟವಿಲ್ಲ. ಮಧ್ಯೆ ಬಂದುದಕ್ಕೆ ಕ್ಷಮಿಸು. ಈಗ ವೈಷ್ಣವಾಸ್ತ್ರವು ಇಲ್ಲದ ಭಗದತ್ತನಾಗಲಿ ಅವನ ಆನೆಯಾಗಲಿ ಅಜೇಯರೇನಲ್ಲ. ಅವರನ್ನು ಕೊಲ್ಲುವುದು ಸುಲಭ. ತ್ವರೆಮಾಡು, ಅರ್ಜುನ! ಎಂದನು. ಅರ್ಜುನನು ತಕ್ಷಣವೇ ಚೂಪಾದ ಬಾಣವೊಂದರಿಂದ ಸುಪ್ರತೀಕದ ತಲೆಯನ್ನು ಸೀಳಿದನು. ಅರ್ಧಚಂದ್ರಾಕಾರದ ತಲೆಯುಳ್ಳ ಬಾಣವೊಂದರಿಂದ ಗುರಿಯಿಟ್ಟು ಭಗದತ್ತನ ಎದೆಗೆ ಹೊಡೆದನು. ಭಗದತ್ತನೂ ಆತನ ಆನೆಯೂ ಸತ್ತು ನೆಲಕ್ಕೊರಗಿದರು. ಅವರಿಬ್ಬರಿಗೂ ಸಮಾನರು ಇನ್ನು ಯಾರೂ ಇರಲಿಲ್ಲ. ಅರ್ಜುನನು ರಥದಿಂದಿಳಿದು ತನ್ನ ತಂದೆಯ ಮಿತ್ರನಾದ ಭಗದತ್ತನ ಸುತ್ತಲೂ ಪ್ರದಕ್ಷಿಣೆ ಮಾಡಿ, ಗತಿಸಿದ ಮಹಾವೀರನಿಗೆ ಗೌರವಪೂರ್ವಕವಾಗಿ ಪ್ರಣಾಮ ಸಲ್ಲಿಸಿದನು. ಅರ್ಜುನನ ಈ ಸನ್ನಡತೆಯನ್ನು ಎರಡು ಕಡೆಯ ವೀರರೂ ಶ್ಲಾಘಿಸಿದರು.

★ ★ ★

ಮುಂದುವರಿಯುವುದು...



**ಸಾಮಾಜಿಕ ಕಳಕಳಿ**

**ಹೆಚ್.ಎಸ್. ಪ್ರತಿಮಾ**
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ

• ಉದಯವಾಹಿನಿ, ವಿಶೇಷ



# ಹುಷಾರ್ ಹೆಣ್ಣು ಮಕ್ಕಳ ಬಗ್ಗೆ ಮಾತನಾಡಿದರೆ...

ಕದನವದು ನಡೆದಿಹುದು ಅವರವರ ಮಾತಿನಲಿ
ಮದದಲ್ಲಿ ಪ್ರೀತಿಯನು ತೋರುತಿರಲು
ಸದನದಲಿ ಮಾತುಗಳ ಚಟಪಟವು ನಡೆಯುತಿರೆ
ಪದಗಳಲಿ ಗಮನವಿರೆ ಲಕ್ಷ್ಮಿ ದೇವಿ.....

ನಮಸ್ಕಾರ. ನಾನು ಶಿಕ್ಷಕಿ, ಸಾಮಾಜಿಕ ಚಿಂತಕಿ, ಪತ್ರಕರ್ತೆ, ಯಾವ ರಾಜಕೀಯ ಪಕ್ಷದಲ್ಲಿಯೂ ಇಲ್ಲ. ಅಹಿತಕರವಾದ ಘಟನೆಗಳು ನಡೆಯುತ್ತಿರುವುದು ಮನಸ್ಸಿಗೆ ನೋವುಂಟು ಮಾಡುತ್ತದೆ . ಇಂತಹ ಹಲವಾರು ಘಟನೆಗಳನ್ನು ಅಂತರ್ಜಾಲಗಳಲ್ಲಿ ಕಾಣುತ್ತಿದ್ದೇವೆ. ಎಲ್ಲಡೆಯೂ ಕೆಲವರು ಕಿಡಿಗೇಡಿಗಳು ಬೇಕೆಂದು ಕಾನೂನಿನ ಹೋರಾಟದ ವಿಚಾರದ ಘಟನೆಗಳನ್ನು ಹಾಸನದ ಹೆಸರಿಗೆ ಮಸೀ ಬಳೆಯಬೇಕೆಂದು ಮಾಡಿದ್ದಾರೆ. ಅದು ಇಂದು ನಮ್ಮ ಎಲ್ಲಾ ಹೆಣ್ಣು ಮಕ್ಕಳಿಗೆ ತೊಂದರೆಯಾಗುತ್ತಿದೆ. ಇಂದು ಸರ್ವೇಸಾಮಾನ್ಯವಾಗಿ ಹೆಣ್ಣು ಮಕ್ಕಳು ತಮ್ಮ ಪಾಡಿಗೆ ತಾವಿದ್ದರೂ ಸಹ ಅಂತಹ ಹೆಣ್ಣು ಮಕ್ಕಳಿಗೂ ಸಹ ಕಿಡಿಗೇಡಿಗಳು ಅಣಕಿಸುತ್ತಿರುವುದು ಸರಿಯಲ್ಲ. ಬಹಳಷ್ಟು ಹೆಣ್ಣು ಮಕ್ಕಳು ನಮಗೆ ಕಾಲ್ ಮಾಡಿ ಹೇಳುವುದು ಒಂದೇ ಮೇಡಂ ನೋಡಿ ಪೆನ್ ಡ್ರೈವ್ ಪ್ರಕರಣಗಳು ಬಂದ ನಂತರ ನಮ್ಮನ್ನು ಹಲವಾರು ಪುರುಷರು ಮಾತನಾಡಿಸುವ ದಾಟಿಯೇ ಬೇರೆಯಾಗಿದೆ. ಬೇಕು ಬೇಕೆಂದೆ ಅಣಕಿಸುತ್ತಾರೆ. ಅದನ್ನು ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಕೇಳಿಕೊಳ್ಳುತ್ತಿದ್ದರು. ದಯಮಾಡಿ ನಮ್ಮ ಕಾನೂನು ಹೆಣ್ಣು ಮಕ್ಕಳ ಬಗ್ಗೆ ಸ್ವಲ್ಪ ಕಾಳಜಿಯನ್ನು ವಹಿಸುವ ಮತ್ತು ಜಾಲತಾಣಗಳಲ್ಲಿ ನಡೆಯುತ್ತಿರುವ ವೈರಲ್ ಆಗುತ್ತಿರುವಂತಹ ವಿಡಿಯೋಗಳನ್ನು ನಿಲ್ಲಿಸಬೇಕು. ಕಾನೂನು ಕ್ರಮ ಕೈಗೊಳ್ಳಬೇಕು ಅಂಥವರ ಮೇಲೆ ಸರಿಯಾದ ಕಠಿಣ ಕ್ರಮ ಕೈ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ. ಮಹಿಳಾ ಕುಲಕ್ಕೆ ಮುಜುಗರದ ಪರಿಸ್ಥಿತಿ ತರುತ್ತಿದ್ದಾರೆ. ದಯಾ ಮಾಡಿ ಇದನ್ನು ನಿಲ್ಲಿಸುವಂತ ಕಾರ್ಯ ಕಾನೂನಿನ್ನಿಂದ ಆಗಬೇಕಿದೆ. ಅಹಿತಕರ ಘಟನೆಗಳು ನಡೆಯುವುದರ ಮುಂಚೆ ಎಚ್ಚರವಹಿಸಬೇಕಿದೆ. ಅಷ್ಟೇ ಅಲ್ಲದೆ ಹಾಸನ ಜಿಲ್ಲೆಗೆ ಕಳಂಕ ತರವ ಕೆಲಸ ಬಹಳ ಜನ ಮಾಡಿದ್ದಾರೆ. ಅದನ್ನು ತಡೆಯುವಂತ ಕೆಲಸವಾಗಬೇಕಿದೆ. ಹಾಸನದ ಹೆಸರಿಗೆ ಅದರದೇ ಆದ ಘನತೆ ಇದೆ . ಏಕೆಂದರೆ ಹಾಸನವು ಹಾಸನಾಂಬೆ ನೆಲೆಸಿರುವ ಪುಣ್ಯವಾದ ಜಾಗವಾಗಿದೆ. ಇಂತಹ ಹಾಸನ ಜಿಲ್ಲೆಯನ್ನು ಮನಸ್ಸಿಗೆ ಬಂದ ರೀತಿಯಲ್ಲಿ ಅಣಕಿಸುವುದು ಸರಿಯಲ್ಲ. ಯಾರೋ ರಹಸ್ಯವಾಗಿ ಮಾಡಿದ ಕೃತ್ಯಕ್ಕೆ ಇಡೀ ಹಾಸನದವರನ್ನು ಬಯ್ಯುವುದು ಸರಿಯೇ?. ಎಷ್ಟರ ಮಟ್ಟಿಗೆ ಸರಿ ಹೇಳಿ. ಹಾಸನವೆಂದರೆ ದೇಶಾದ್ಯಂತ ಹೆಸರುವಾಸಿಯಾದಂತಹ ಜಿಲ್ಲೆ. ನನಗೆ ಅರಿವಾದಂತೆ ಮಹಾರಾಷ್ಟ್ರದಲ್ಲಿ ಕೆಲವು ವರ್ಷ ವಾಸವಿದ್ದಾಗ ನಿಮ್ಮದು ಯಾವ ಊರು ಎಂದು ಕೇಳಿದಾಗ ಹಾಸನ ಎಂದರೇ ಮಾಜಿ ಪ್ರಧಾನಿಯ ಊರೇನು ಎಂದು ಕೇಳುತ್ತಿದ್ದರು . ಅಪ್ ಗೌಡ ಕಿ ಗಾವ್ ಸೆಹೇ ಕ್ಯಾ ಎಂದು ಕೇಳಿ ನಮ್ಮ ಮಾಜಿ ಪ್ರಧಾನಿಯನ್ನು ಗೌರವಯುತವಾಗಿ ಸಂಬೋಧಿಸುತ್ತಿದ್ದಂತಹ ದಿನವದು. ನಾನು ಸಂತಸದಿಂದಲೇ ಹೌದು ಎಂದು ನಕ್ಕು. ಮನೆಯಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡಿದ್ದೆ. ಎಲ್ಲಿ ಹೋದರೂ ಕೆಲವರ ಹೆಸರನ್ನು ಎಷ್ಟು ಗೌರವಯುತವಾಗಿ ಬಳಸುತ್ತಾರೆ ಎಂದು. ಹೌದು ಇದರಲ್ಲಿ ಯಾವುದೇ ಅನುಮಾನವಿಲ್ಲ ಕೆಲವರು ಹಾಸನ ಜಿಲ್ಲೆಗಾಗಿ ಮಾಡಿದಂತಹ ಕೆಲಸವೂ ಯಾರು ಮಾಡಲು ಸಾಧ್ಯವಿಲ್ಲ. ಯಾರೋ ಒಬ್ಬರು ಮಾಡಿದ ಕೆಲಸಕ್ಕೆ ಇಡೀ ಹಾಸನವನ್ನು ದೂಷಿಸುವುದು ಎಷ್ಟರ ಮಟ್ಟಿಗೆ ಸರಿ ನೀವೇ ಹೇಳಿ. ಬಹಳಷ್ಟು ವರ್ಷದಿಂದ ಇದ್ದ ಘಟನೆಗೆ ದಕ್ಕೆ ತರಬಾರದು. ಸುಖ ಸುಮ್ಮನೆ ಇನ್ನೊಬ್ಬರನ್ನು ದೂಷಿಸಬಾರದು. ಯಾರೋ ಮಾಡಿದ ವೈರಲ್ ಘಟನೆಗಳಿಂದ ಅವರಿಗಿದ್ದ ದ್ವೇಷ ತೀರಿಸಿಕೊಳ್ಳಲು ಮಾಡಿದ ಕೆಟ್ಟ ಚಟಗಳ ಕೆಲಸದಿಂದ ಇಡೀ ಹಾಸನದ ಹೆಸರನ್ನು ಹೊಲಸು ಮಾಡಲು ಹೊರಟಿದ್ದಾರೆ. ಅದನ್ನು ವೈರಲ್ ಮಾಡುವ ಬದಲು ಅದಕ್ಕೆ ನ್ಯಾಯ ಒದಗಿಸುವ ಕಾನೂನು ಕ್ರಮ ಏಕೆ ತೆಗೆದುಕೊಳಲ್ಲಿಲ್ಲ. ಕಂಡೂ ಕೇಳರಿಯದ ಕಥೆ ಇದಾಗಿರಬಹುದು ಆದರೆ ತಾಳ್ಮೆ,ಸಹನೆಯ,ಕಾರ್ಯವು ಇದಕ್ಕೆ ಮುಖ್ಯವಾಗಿದೆ . ಅವರ ದ್ವೇಷ ತೀರಿಸಿಕೊಳ್ಳಲು ಹೋದ ವ್ಯಕ್ತಿಗಳು ಎಷ್ಟು ಹೆಣ್ಣು ಮಕ್ಕಳ ಮರ್ಯಾದೆಯೊಂದಿಗೆ ಚೆಲ್ಲಾಟವಾಡಿರುವ ವ್ಯಕ್ತಿಗಳು. ಅವರಿಗೆ ನ್ಯಾಯ ಒದಗಿಸಲು ಸಾಧ್ಯವಾಗುತ್ತದೆ ಏನು? ಅಡಿಕೆಗೆ ಹೋದ ಮಾನ ಆನೆ ಕೊಟ್ಟರು ಬಾರದು ಎಂಬ ಗಾದೆಯಂತೆ ಮತ್ತೆ ಹೆಣ್ಣು ಮಕ್ಕಳ ಸಂಸಾರವನ್ನು ಸರಿಪಡಿಸಲು ಸಾಧ್ಯ ವಾಗುವುದೇನು? ಅವರದೇ ಹೆಣ್ಣು ಮಕ್ಕಳು ಅಲ್ಲಿದ್ದರೆ ಇಂತಹ ಕೃತ್ಯಗಳನ್ನು ಮಾಡುತ್ತಿದ್ದರೇನು ಯೋಚಿಸಿ ನೋಡಿ ನಾನೇ ಕೇಳಿದಂತೆ ಹಾಸನದ ಹೆಣ್ಣು ಮಕ್ಕಳೆಲ್ಲ ಹಾಗೆ ಎಂದು ಹೇಳುತ್ತಾರಲ್ಲ. ವೈರಲ್ಲಾದ ವಿಡಿಯೋಗಳಲ್ಲಿ ಇರುವಂತಹ ಹೆಣ್ಣು ಮಕ್ಕಳು ಎಲ್ಲಾ ಹಾಸನದ ಹೆಣ್ಣು ಮಕ್ಕಳೇನು ಸುಖ ಸುಮ್ಮನೆ ಹಾಸನಾಂಬೆಯ ಸ್ಥಳವಿರುವ ಈ ಹಾಸನವನ್ನು ಯಾವ ರೀತಿಯಲ್ಲೂ ಹೆಸರು ಕೆಡಿಸಲು ಸಾಧ್ಯವಿಲ್ಲ. ಪಾಪಿಕಾರ್ಯವನ್ನು ಮಾಡುತ್ತಿರುವ ಜನರ ಪಾಪದ ಕೊಡ ತುಂಬಿದಾಗ ಆ ಪಾಪಿಗಳಿಗೆ ಶಿಕ್ಷೆಯಾಗಲೇಬೇಕು. ಅದು ವೈರಲ್ ಮಾಡಿರುವಂತಹ ಪಿಶಾಚಿಗಳಾಗಿರಬಹುದು. ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಮಾಡಿರುವ ಕ್ರೂರಿ ಆಗಿರಬಹುದು. ಅದು ಸಾಬೀತಾದರೆ ಯಾವ ಶಿಕ್ಷೆಗಾದರೂ ಒಳಪಡಿಸಿ. ಹಾಗೆಂದು ಹಾಸನವನ್ನು ಕೆಟ್ಟದಾಗಿ ಮಾತನಾಡಿದರೆ ಹುಷಾರ್ ರೊಚ್ಚಿಗೆದ್ದ ಜನತೆ ಏನು ಬೇಕಾದರೂ ಮಾಡಿ ಯಾರು. ಗಣ್ಯರ ಕಾರ್ಯ ಅಗಣ್ಯ. ಅಂತಹ ಕೃತ್ಯಗಳನ್ನು ಎಸಗಿದವರಿಗೆ ವಿರುದ್ಧವಾಗಿ ನಿಲ್ಲುತ್ತಾರೆ ಹೊರತು. ಅದಕ್ಕೆ ಸಹಕಾರವನ್ನು ನೀಡಲು ನಿಲ್ಲುವುದಿಲ್ಲ. ಇನ್ನ ನಮ್ಮ ಕೆಲವು ಶಾಸಕರ ಬಗ್ಗೆ ಹೇಳುವುದಾದರೆ, ಅವರ ಬಗ್ಗೆ ಮಾತನಾಡುತ್ತಿರಲ್ಲ. ದೊಡ್ಡ ದೊಡ್ಡ ಭಾಷಣಗಳನ್ನು ಮಾಡುವ ಜನರಲ್ಲಿ ಯಾರು ತಪ್ಪು ಮಾಡದವರು ಇದ್ದರೇನು ನನಗೆ ತೋರಿಸಿ. ಚಿಕ್ಕ ಪುಟ್ಟ ತಪ್ಪುಗಳನ್ನೇ ದೊಡ್ಡದಾಗಿ ವೈರಲ್ ಮಾಡಿ ತೋರಿಸುವ ಮೀಡಿಯಾಗಳಲ್ಲಿ ಅವರಿಗಿರುವ ಘನತೆಯನ್ನು ಚಿಕ್ಕದಾಗಿ ತೋರಿಸುವುದು ಎಷ್ಟರಮಟ್ಟಿಗೆ ಸರಿ ಹೇಳಿ. ಮಾಡಿರುವ ತಪ್ಪಿಗೆ ಶಿಕ್ಷೆಯನ್ನು ಅವರೇ ಅನುಭವಿಸುತ್ತಾರೆ ಎನ್ನುವ ನಮ್ಮ ಶಾಸಕರು ಏತಕೆ ಅವರು ರಾಜಕೀಯವನ್ನು ತೊರೆದು ಹೋಗಬೇಕು. ಪ್ರತಿಯೊಂದು ವಿಚಾರವನ್ನು ತಿಳಿದು ಮಾತನಾಡಿ. ಯಾರು ಸರಿ ಇದ್ದಾರೆ ಎಂದು ತಿಳಿಸಿ. ಎಲ್ಲರಲ್ಲೂ ತಪ್ಪುಗಳು ಸಹಜವಾಗಿ ನಡೆದಿರುತ್ತದೆ. ಮನುಜ ಎಂದ ಮೇಲೆ ಅದು ಸಹಜ ರಾಜಕೀಯದ ಆಟದಲ್ಲಿ ಚುನಾವಣೆಯ ಹತ್ತಿರದಲ್ಲೇ ಏಕೆ ಹೀಗೆ ಮಾಡಬೇಕಿತ್ತು. ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಕೊಡಿಸುವುದಕ್ಕಿಂತಲೂ ಸಹ ಅವರ ಮಾನ ಮರ್ಯಾದೆಯೊಂದಿಗೆ ಆಟವಾಡುವ ಆಸೆ ಇದ್ದದ್ದೇ ಎದ್ದು ಕಾಣುತ್ತಿದೆ.

ಯಾವ ಹೆಣ್ಣು ಮಕ್ಕಳಿಗೂ ಆಗಬಾರದ ಅವಮಾನಗಳನ್ನು ಮಾಡಿಬಿಟ್ಟರಲ್ಲ. ಅವರು ಮಾಡಿದ್ದು ತಪ್ಪೋ,ಒಪ್ಪೋ ಅದು ಬೇಡ ಅವರ ಜೀವನದೊಂದಿಗೆ ಆಟವಾಡಿಬಿಟ್ಟರೆಲ್ಲ. ಅವರ ಮಾನ ಮರ್ಯಾದೆಯನ್ನು ಹಿಂದಿರುಗಿಸಿ ಕೊಡಿ ನೋಡುವ. ಆಗದು ಅಲ್ಲದೆ ದಯಮಾಡಿ ಕೆಟ್ಟದಾಗಿ ನೋಡುವಂತಹ ಜನರೇ ಹೆಣ್ಣು ತಾಯಿಯ ರೂಪದಲ್ಲಿ ಇರುತ್ತಾಳೆ. ತಿಳಿದೋ ತಿಳಿಯದೆಯೋ ಆಗಿರುವ ತಪ್ಪಿಗೆ ಕಾನೂನು ಹೋರಾಟ ಮಾಡಿ ಅದು ಬಿಟ್ಟು ಸುಖಸುಮ್ಮನೆ ಆಟವಾಡುವುದನ್ನು ಬಿಟ್ಟು, ದೇಶದ ಅಭಿವೃದ್ಧಿಗೆ ಗಮನಕೊಟ್ಟು

**ಜೈ ಹಿಂದ್ ಜೈ ಭಾರತ ಮಾತೆ.**

**ಜಾಲತಾಣ ವಿಡಿಯೋಗಳನ್ನು ನಿಲ್ಲಿಸಬೇಕು**

**ಆಗಿರುವ ಅನ್ಯಾಯಕ್ಕೆ ನ್ಯಾಯ ಕೊಡಿಸಿ**

**ನಾವು ನೋಡಿದ, ಕೇಳಿದ ಘಟನೆಗಳಲ್ಲಿ ಯಾವುದು ಸತ್ಯ ಯಾವುದು ಸುಳ್ಳು ಎಂಬುದರ ಚರ್ಚೆಯಲ್ಲೇ ಇದ್ದಾರೆ ಜನರು. ದಯಮಾಡಿ ಯಾವುದೇ ವಿಚಾರಕ್ಕೂ ಹಾಸನಾಂಬೆಯ ಸ್ಥಾನವಾದಂತಹ ಹಾಸನ ಜಿಲ್ಲೆಯನ್ನು ಹಾಸ್ಯ ಪ್ರಧಾನವಾಗಿ ನೋಡದಿರಿ. ಏಕೆಂದರೆ ಯಾವುದೇ ವಿಚಾರಕ್ಕೂ ಇಲ್ಲಿ ದೇವತೆಯರು ನೆಲೆಸಿರುವಂತಹ ಪವಿತ್ರವಾದ ಸ್ಥಳವಾಗಿದೆ. ಅರಿತು ಅರೆಯದೆಯೋ ಇಂತಹ ಕೆಟ್ಟ ಕೆಲಸಗಳು ನಡೆದಿ ರಬಹುದು ಅದನ್ನು ಗಣನೆಗೆ ತೆಗೆದುಕೊಂಡು ಹಾಸನವೆಂದರೆ ಪೆನ್ ಡ್ರೈವ್ ಹಾಸನಎಂದು ಹೆಸರಿಟ್ಟಿರುವ ಕೆಲ ಜನರು ಯೋಚಿಸಿ ಮಾತನಾಡುವುದನ್ನು ಕಲಿಯಿರಿ. ಆಳಕ್ಕೆ ಬಿದ್ದ ವ್ಯಕ್ತಿಯ ಪರಿಸ್ಥಿತಿ ಹಾಸನದಾಗಿದೆ. ಹಾಗೆಂದು ಆಳಿಗೆ ಒಂದು ಕಲ್ಲು ಎಂಬಂತೆ ಒಡೆದರೆ ನಾಳೆ ನೀವೇ ಯೋಚಿಸಬೇಕಾದಂತಹ ಪರಿಸ್ಥಿತಿ ಬರಬಹುದು. ನಮ್ಮದು ಸಾಂಸ್ಕೃತಿಕವಾದಂತಹ, ಸಂಸ್ಕೃತಿಯ ಬಿಡು . ಇಂತಹ ಹಾಸನವನ್ನು ದಯಮಾಡಿ ಯಾವುದೇ ಕಾರಣಕ್ಕೂ ದೂಷಿಸದಿರಿ. ಹುಷಾರ್ ಹಾಸನದ ಬಗ್ಗೆ ಮಾತನಾಡಿದರೆ ಏನೇ ಆದರೂ ಘಟನೆಗಳ ಬಗ್ಗೆ ಮಾತನಾಡಿ ಅದು ಬಿಟ್ಟು ಹಾಸನದ ಹೆಸರನ್ನು ಕೆಡಿಸಲು ಹೋದರೆ ರೊಚ್ಚಿಗೆದ್ದ ಹಾಸನದ ಜನತೆಯ ರೂಪವನ್ನು ಕಾಣಬೇಕಾಗುತ್ತದೆ. ನಮ್ಮ ಹಾಸನ ನಮಗೆ ಹೆಚ್ಚು ಎಂಬುದು ಯಾರು ಮರೆಯಬೇಡಿ. ನಮ್ಮ ಹಾಸನ ನಮಗೆ ಹೆಮ್ಮೆ ಎಂಬ ನಡೆಯಲಿ ಸಾಗುತ್ತೇವೆ. ಪ್ರತಿಯೊಂದು ಹೆಣ್ಣು ಮಕ್ಕಳಿಗೂ ಗೌರವವಾಗಿ ನೋಡಿ ಎಂದು ಕೇಳಿಕೊಳ್ಳುತ್ತೇನೆ.ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಆಗಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.**

# ಹೆಬ್ಬಾಳ ಫ್ಲೈ ಓವರ್ ಕಾಮಗಾರಿ
## ವಾಹನ ಸವಾರರಿಗೆ ಪ್ರಮುಖ ಮಾಹಿತಿ

ಉದಯವಾಹಿನಿ ಚಿತ್ರ



• ಉದಯವಾಹಿನಿ, ಬೆಂಗಳೂರು

ನಗರದ ಸಂಚಾರ ವ್ಯವಸ್ಥೆಯ ನಿರ್ವಹಣೆ ಹೊಣೆ ಹೊತ್ತಿರುವ ಸಂಚಾರಿ ಪೊಲೀಸರು ಹೆಬ್ಬಾಳ ಫ್ಲೈ ಓವರ್ ಕಡೆ ಸಾಗುವ ವಾಹನ ಸವಾರರಿಗೆ ಮಾಹಿತಿಯೊಂದನ್ನು ನೀಡಿದ್ದಾರೆ. ಜನರು ಸಹಕಾರ ನೀಡಬೇಕು ಎಂದು ಮನವಿ ಮಾಡಿದ್ದಾರೆ.ಹೆಬ್ಬಾಳ ಮೇಲುಸೇತುವೆಗೆ ಎರಡು ಹೊಸ ಟ್ರ್ಯಾಕ್‌ಗಳನ್ನು ಸೇರಿಸಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾಮಗಾರಿಯನ್ನು ಆರಂಭಿಸಿರುವುದರಿಂದ ಈಗಾಗಲೇ ದಿನಾಂಕ 17/04/2024ರಿಂದ ಕೆ.ಆರ್. ಪುರ ಲೂಪ್ ಸೇರುವ ಟ್ರ್ಯಾಕ್‌ನಲ್ಲಿ ದ್ವಿಚಕ್ರ ವಾಹನಗಳನ್ನು ಹೊರತುಪಡಿಸಿ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ನಿಷೇಧಿಸಲಾಗಿತ್ತು ಎಂದು ಹೇಳಿದ್ದಾರೆ.

ದಿನಾಂಕ 14/05/2024ರಿಂದ ಕೆ. ಆರ್. ಪುರಂ ಕಡೆಯಿಂದ ಬರುವ ಲೂಪ್ ಹೆಬ್ಬಾಳ ಫ್ಲೈ ಓವರ್‌ನ ಮುಖ್ಯ ಟ್ರ್ಯಾಕ್‌ಗೆ ಸೇರಿಸುವ ಎರಡು ಲಿಂಕ್ ಸ್ಪ್ಯಾನ್ ಗಳನ್ನು ತೆಗೆದುಹಾಕಲಾಗುತ್ತಿರುವುದರಿಂದ ಮತ್ತು ಮುಖ್ಯ ಟ್ರ್ಯಾಕ್‌ಗೆ ಸಂಪರ್ಕ ಇಲ್ಲದಾಗುವುದರಿಂದ ಯಾವುದೇ ರೀತಿಯ ವಾಹನ ಸಂಚಾರವು ಸಾಧ್ಯವಿರದ ಹಿನ್ನಲೆಯಲ್ಲಿ, ಕಾಮಗಾರಿ ಮುಕ್ತಾಯವಾಗುವವರೆಗೆ ಸಾರ್ವಜನಿಕರ ಸುಗಮ ಸಂಚಾರಕ್ಕಾಗಿ ಸಂಚಾರ ವಿಭಾಗದಿಂದ ಈ ಮಾರ್ಪಾಡುಗಳನ್ನು ಮಾಡಲಾಗಿದೆ ಎಂದು ತಿಳಿಸಿದೆ. ಸಂಚಾರ ನಿರ್ಬಂಧ, ದಿನಾಂಕ 14/05/2024ರಿಂದ ಹೆಬ್ಬಾಳ ಫ್ಲೈಓವರ್‌ನ ಕೆ. ಆರ್. ಪುರಂ ಅನ್ನು ಮುಚ್ಚಲಾಗುತ್ತಿರುವುದರಿಂದ ನಾಗವಾರ ಕಡೆಯಿಂದ ಹೆಬ್ಬಾಳ ಮೇಲುಸೇತುವೆ ಕಡೆಗೆ ಬರುವ ಎಲ್ಲಾ ಮಾದರಿಯ ವಾಹನಗಳ ಸಂಚಾರವನ್ನು ಫ್ಲೈ ಓವರ್ ಮೇಲೆ ನಿರ್ಬಂಧಿಸಲಾಗಿದೆ. ನಿರ್ಬಂಧಿಸಲಾದ ವಾಹನಗಳು ನಾಗವಾರ (ಔಟರ್‌ರಿಂಗ್ ರಸ್ತೆ) ಕಡೆಯಿಂದ ನಗರದ ಒಳಗೆ ಮೇಖ್ರಿ ಸರ್ಕಲ್ ಮುಖಾಂತರ ಸಂಚರಿಸುವ ವಾಹನಗಳು ಹೆಬ್ಬಾಳ ಸರ್ಕಲ್‌ನಲ್ಲಿ ಫೈ ಓವರ್ ಕೆಳಗಿನಿಂದ ಬಲ ತಿರುವು ಪಡೆದು ಕೊಡಿಗೇಹಳ್ಳಿ ಜಂಕ್ಷನ್ ಬಳಿ ಯೂಟರ್ನ್ ಪಡೆದು ಸರ್ವೀಸ್ ರಸ್ತೆಯಿಂದ ಹೆಬ್ಬಾಳ ಫೈಓವರ್‌ನ ಮುಖೇನ ನಗರದ ಕಡೆಗೆ ಚಲಿಸಬಹುದಾಗಿರುತ್ತದೆ. ಕೆ. ಆರ್. ಪುರಂ, ನಾಗವಾರ ಕಡೆಯಿಂದ ನಗರದ ಕಡೆಗೆ ಬರುವ ವಾಹನಗಳು ಐ.ಓ.ಸಿ.-ಮುಕುಂದ ಥಿಯೇಟರ್ ರಸ್ತೆ, ಲಿಂಗರಾಜಪುರ ಮೇಲುಸೇತುವೆ ಮಾರ್ಗ, ನಾಗವಾರ ಟ್ಯಾನರಿ ರಸ್ತೆ ಮಾರ್ಗವಾಗಿ ಸಂಚಾರ ನಡೆಸಬಹುದು. ಹೆಗಡೆ ನಗರ-ಥಣಿಸಂದ್ರ ಕಡೆಯಿಂದ ಬರುವ ವಾಹನಗಳು ಜಿಕೆವಿಕೆ-ಜಕ್ಕೂರು ರಸ್ತೆ ಮೂಲಕ ನಗರ ಪ್ರವೇಶಿಸಬಹುದಾಗಿದೆ. ಕೆ. ಆರ್. ಪುರಂ ಕಡೆಯಿಂದ ಹೆಬ್ಬಾಳ ಮಾರ್ಗವಾಗಿ ಯಶವಂತಪುರ ಕಡೆಗೆ ಚಲಿಸುವ ವಾಹನಗಳು ಹೆಬ್ಬಾಳ ಫ್ಲೈ ಓವರ್ ಕೆಳಗಡೆ ನೇರವಾಗಿ ಬಿ.ಇ.ಎಲ್. ಸರ್ಕಲ್ ತಲುಪಿ ಎಡತಿರುವು ಪಡೆದು ಸದಾಶಿವನಗರ ಜಂಕ್ಷನ್‌ನಲ್ಲಿ ಬಲತಿರುವು ಪಡೆದು ಐ.ಐ.ಎಸ್.ಸಿ. ಮುಖಾಂತರ ಚಲಿಸಬಹುದಾಗಿದೆ.

# ಜವಾಬ್ದಾರಿ ನಿರ್ವಹಿಸಬೇಕು ಅದೇ ನಿಸ್ವಾರ್ಥ ಸೇವೆ





**ಕಲಾ ಸಾಹಿತ್ಯ**

**ಕೃಷ್ಣಪ್ಪ**
ಲೇಖಕರು
ಪ್ರಗತಿ ಪರ ಚಿಂತಕ ಹಾಗೂ
ವಿಮರ್ಶಕರು

• ಉದಯವಾಹಿನಿ, ವಿಶೇಷ

ಇದರ ಅರ್ಥ ಮಗು ಅತ್ತಾಗ ಮಾತ್ರ ತಾಯಿ ಹಾಲು ಕುಡಿಸುವುದಲ್ಲ. ಮಗುವಿನ ಪೂರ್ಣ ಜವಾಬ್ದಾರಿ ತಾಯಿಗೆ ಇರಬೇಕು.

ಯಾವ್ಯಾವ ಸಮಯದಲ್ಲಿ ಮಗುವಿಗೆ ಲಾಲನೆ, ಪಾಲನೆ,ಪೋಷಣೆ, ಆಹಾರ, ನೀರು, ಎದೆಹಾಲು ಕೊಡಬೇಕು ಎಂಬ ಪೂರ್ಣ ಜವಾಬ್ದಾರಿ ತಾಯಿಗೆ ಇರಬೇಕು ಇಲ್ಲ ಅಂದರೆ ತಾವುಗಳು ಮಗುವನ್ನು ಹಡೆಯುವ ಅಗತ್ಯವಿಲ್ಲ ಅಂದರೆ ಜವಾಬ್ದಾರಿ ತೆಗೆದುಕೊಳ್ಳುವವರು ಮಾತ್ರ ಮಕ್ಕಳನ್ನು ಹಡೆಯಲಿ ಅದಕ್ಕೆ ಯಾರೂ ಕೂಡ ಅಡ್ಡಿ ಮಾಡುವುದಿಲ್ಲ ಅಥವಾ ಬೇಡ ಅನ್ನುವುದಿಲ್ಲ. ಅಂದರೆ ಸಾರ್ವಜನಿಕರಾದ ನಾವು ನಮ್ಮ- ನಮ್ಮ ದಿನನಿತ್ಯದ ಕೆಲಸದಲ್ಲಿ ತೊಡಗಿಸಿಕೊಂಡು ಸ್ವಶಕ್ತಿಯಿಂದ ನಮ್ಮ ಜೀವನದ ಬದುಕನ್ನು ಸಾಗಿಸಬೇಕಷ್ಟೇ !

ಹಾಗೂ ಪ್ರತಿವರ್ಷ ನಮ್ಮ ನಮ್ಮಗಳ ಆದಾಯದಲ್ಲಿ ಸಾರ್ವಜನಿಕರಾದ ನಾವುಗಳು ಪ್ರಮಾಣಿಕವಾಗಿ ಯಾರಿಂದಲೂ ಹೇಳಿಸಿಕೊಳ್ಳದೇ ಹಾಗೂ ಆತ್ಮವಂಚನೆ ಮಾಡದೇ ಆತ್ಮಸಾಕ್ಷಿಯಾಗಿ ತಪ್ಪದೇ ತೆರಿಗೆಗಳನ್ನು ಸರ್ಕಾರಕ್ಕೆ ಚಾಚುತಪ್ಪದೇ ಕಟ್ಟಬೇಕು. ಈ ಜವಾಬ್ದಾರಿ ಪ್ರತಿಯೊಬ್ಬರೂ ಕೂಡ ತೆಗೆದುಕೊಳ್ಳಬೇಕು. ಜವಾಬ್ದಾರಿಗಳನ್ನು ಅರಿತು ಜವಾಬ್ದಾರಿ ತೆಗೆದುಕೊಂಡು ಆಯಾಯ ಕ್ಷೇತ್ರದ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿದುಕೊಂಡು ಸ್ವಾರ್ಥ ಮರೆತು ನಿಸ್ವಾರ್ಥ ಸೇವೆ ಮಾಡುವವರು ಮಾತ್ರ ಜನಪ್ರತಿನಿಧಿಗಳಾಗಿ ಆಯ್ಕೆಯಾಗಬೇಕು. ಜವಾಬ್ದಾರಿಗಳನ್ನು ಆಯಾ ಕ್ಷೇತ್ರದ ರಾಜಕೀಯ ಜನಪ್ರತಿನಿಧಿಗಳು ಹಾಗೂ ಆಯಾಯ ವಿಭಾಗದ ಆಡಳಿತಾಧಿಕಾರಿಗಳು ಪೂರ್ಣ ಪ್ರಮಾಣವಾಗಿ ಜವಾಬ್ದಾರಿಗಳನ್ನು ತೆಗೆದುಕೊಂಡು,

**ಉದಾಹರಣೆಗೆ:** ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳಲ್ಲಿ ನ್ಯೂನತೆಗಳು ಹಾಗೂ ಸಮಸ್ಯೆಗಳು ಕಂಡಾಗ ಅವುಗಳನ್ನು ಪರಿಶೀಲಿಸಿ ನ್ಯೂನತೆಗಳನ್ನು ಸರಿಪಡಿಸುವುದು ಅವರೆಲ್ಲರ ಜವಾಬ್ದಾರಿ, ಹೊಣೆಗಾರಿಕೆ ಮತ್ತು ಕರ್ತವ್ಯ ಆಗಬೇಕು. ಕಾರಣ ಅವರೆಲ್ಲರಿಗೂ ನಾವು ಕಟ್ಟುವ ತೆರಿಗೆ ಹಣದಲ್ಲಿ ಎಲ್ಲಾ ಸವಲತ್ತುಗಳನ್ನು ಉಪಯೋಗಿಸಿಕೊಂಡು ವೇತನವನ್ನು ಪಡೆಯುತ್ತಾರೆ ಇದು ಎಲ್ಲರಿಗೂ ತಿಳಿದಿರಲಿ ಹಾಗೂ ಗೊತ್ತಿರುವ ವಿಚಾರ. ಸಾರ್ವಜನಿಕರಾದ ನಾವು ಯಾವುದೇ ಕಾರಣಕ್ಕೂ ನಮ್ಮ ಕ್ಷೇತ್ರದಲ್ಲಿ ಸಮಸ್ಯೆಗಳು, ಕುಂದುಕೊರತೆಗಳು ಇರುವ ಬಗ್ಗೆ ಯಾವುದೇ ಅಹವಾಲುಗಳನ್ನು ಸರ್ಕಾರದ ಗಮನಕ್ಕೆ ಆಗಲೀ,ಜನಪ್ರತಿನಿಧಿಗಳ ಗಮನಕ್ಕೆ ಆಗಲೀ ತರುವುದು ಅಕ್ಷಮ್ಯ ಅಪರಾಧ.(ಕೆಲವೊಂದು ಹೊರತುಪಡಿಸಿ) ಕಾರಣ ಆ ಕೆಲಸ ಅವರದ್ದು,ಅದು ನಮ್ಮ ಕೆಲಸವಲ್ಲ.

ಅದಕ್ಕೋಸ್ಕರವಾಗಿ ಎಲ್ಲಾ 72 ಇಲಾಖೆಗಳನ್ನು ಸರ್ಕಾರ ಸೃಷ್ಟಿ ಮಾಡಿ ಸಾರ್ವಜನಿಕರ ಹಿತದೃಷ್ಟಿಯಿಂದ ಸಿಬ್ಬಂದಿಗಳನ್ನು ನೇಮಕ ಮಾಡಿ ಅವರುಗಳಿಗೆ ವೇತನ ನೀಡಿ ಎಲ್ಲಾ ಸವಲತ್ತುಗಳನ್ನು ನೀಡಿದೆ.

ಪ್ರಜಾಪ್ರಭುತ್ವದಲ್ಲಿ ಜನರಿಂದ ಆಯ್ಕೆಯಾದ ಜನಪ್ರತಿನಿಧಿಗಳು ಆಯಾಯ ಕ್ಷೇತ್ರದ ಸಮಸ್ಯೆಗಳು ಮತ್ತು ಕೊರತೆಗಳನ್ನು ದಿನನಿತ್ಯ ಎಲ್ಲಾ ವಿಭಾಗದ ಆಡಳಿತ ವರ್ಗದವರಿಗೆ ಜವಾಬ್ದಾರಿ ನೀಡಿ ಸಮಸ್ಯೆಗಳನ್ನು ಪಟ್ಟಿ ಮಾಡಿ ಸಾರ್ವಜನಿಕರಿಗೆ ಗೊತ್ತಿಲ್ಲದೇ ಸಮಸ್ಯೆಗೆ ಪರಿಹಾರವನ್ನು ಕಂಡುಕೊಂಡು ಆ ಕೆಲಸವನ್ನು ಪೂರ್ಣಗೊಳಿಸಿ, ಸಾರ್ವಜನಿಕರು ಶಾಂತಿ, ನೆಮ್ಮದಿಯಿಂದ ಜೀವನ ನಡೆಸಲು ಅನುಕೂಲ ಮಾಡಿಕೊಡಬೇಕು. ಅಂದರೆ ಅರ್ಥ ಆ ಮಗು ಅತ್ತರೆ ಹಾಲು ಕುಡಿಸುವುದು ಅಲ್ಲ. ಮಗುವಿಗೆ ಯಾವ ಯಾವ ಸಮಯದಲ್ಲಿ ಹಾಲು ಕುಡಿಸಬೇಕು ಎಂಬ ಪೂರ್ಣ ಜವಾಬ್ದಾರಿ ತಾಯಿಗಿರಬೇಕು.ಅದೇ ರೀತಿ ಜನಪ್ರತಿನಿಧಿಗಳು ಹಾಗೂ ಎಲ್ಲಾ ಇಲಾಖಾ ವಿಭಾಗದ ಸರ್ಕಾರದ ಆಡಳಿತ ವರ್ಗದವರ ಜವಾಬ್ದಾರಿ ಹೆಚ್ಚಿನದು.

**ಉದಾಹರಣೆಗೆ:** ಸಾರ್ವಜನಿಕರಾದ ನಾವು ಕೇಳುವುದಿಷ್ಟೇ,ಸಾರಿಗೆ ವ್ಯವಸ್ಥೆ,ಕುಡಿಯುವ ನೀರು, ವಿದ್ಯುಚ್ಛಕ್ತಿ,ರಸ್ತೆ, ಒಳಚರಂಡಿ, ಸ್ವಚ್ಛತೆ, ಬೀದಿ ಬೆಳಕು, ಕಸ ವಿಲೇವಾರಿ,ನೈರ್ಮಲ್ಯ, ರಕ್ಷಣೆ,ಹಣ್ಣು ತರಕಾರಿ ಮಾರುಕಟ್ಟೆ,ಮಕ್ಕಳಿಗೆ ಶಿಕ್ಷಣ ವ್ಯವಸ್ಥೆ, ಆರೋಗ್ಯ ಕೇಂದ್ರಗಳು, ಉದ್ಯೋಗಾವಕಾಶಗಳು, ಬಡವರಿಗೆ ಶೌಚಾಲಯಗಳು, ವಸತಿ ನಿಲಯಗಳು, ಅಂಗನವಾಡಿಗಳು, ಗ್ರಂಥಾಲಯಗಳು, ಸಮುದಾಯಗಳು, ಬಡವರಿಗೆ ನ್ಯಾಯಬೆಲೆ ಅಂಗಡಿಗಳು, ಆಟದ ಮೈದಾನಗಳು, ಸುಸಜ್ಜಿತ ಉದ್ಯಾನವನಗಳು ಇನ್ನೂ ಅನೇಕ ಅನುಕೂಲಗಳನ್ನು ಮಾಡಿಕೊಡಬೇಕು. ಹಾಗೂ ಸರ್ಕಾರದಿಂದ ದೊರೆಯುವ ಮಿಕ್ಕ ಎಲ್ಲಾ ಅನುಕೂಲಗಳು ಇದೆಲ್ಲಾ ಸರ್ಕಾರದ ಕೆಲಸ. ಸಾರ್ವಜನಿಕರಿಂದ ಯಾವುದೇ ಅಹವಾಲನ್ನು ಸ್ವೀಕರಿಸದೇ ಹಾಗೂ ಸಾರ್ವಜನಿಕರಿಗೆ ಗೊತ್ತಿಲ್ಲದೇ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಮಾಡಿಕೊಡಬೇಕು. ಒಟ್ಟಾರೆ ಜವಾಬ್ದಾರಿ ಅರಿತು ಜವಾಬ್ದಾರಿ ನಿರ್ವಹಿಸಬೇಕು ಅದೇ ನಿಸ್ವಾರ್ಥ ಸೇವೆ. ಮಗು ಅಳುವವರೆವಿಗೂ ತಾಯಂದಿರರು ಕಾಯ ಬಾರದು.ಅದೇ ರೀತಿ ಸರ್ಕಾರ ಮತ್ತು ಜನಪ್ರತಿಧಿಗಳು ಸಾರ್ವಜನಿಕರಿಂದ ಪ್ರತಿಕೂಲ ಬರುವವರೆಗೂ ಕಾಯಬಾರದು ಅದೆಲ್ಲಾ ತಮ್ಮಗಳ ಪೂರ್ಣಪ್ರಮಾಣದ ಜವಾಬ್ದಾರಿ, ಹೊಣೆಗಾರಿಕೆ, ಕರ್ತವ್ಯ ಇರುವುದನ್ನು ಮರೆಯಬಾರದು. ಸಾರ್ವಜನಿಕರ ಆಶೀರ್ವಾದವೇ ಶ್ರೀರಕ್ಷೆ.

# ಮುತ್ಯಾಲಮ್ಮ ದೇವಿ ದೇವಸ್ಥಾನದಲ್ಲಿ ಹಮ್ಮಿಕೊಂಡ ವಿಶೇಷ ಪೂಜೆ

• ಉದಯವಾಹಿನಿ, ಕೃಷ್ಣರಾಜಪುರ

ಮಹಾರುದ್ರನಿಗೆ ರುದ್ರಯಾಗ ಹಾಗೂ ಸುಮಂಗಲಿಯರಿಗೆ ಅರಿಶಿನ ಕುಂಕುಮ ವಿತರಣೆ ಹಾಗೂ ಕೈಂಕಾರ್ಯಗಳನ್ನು ಮಹರ್ಷಿ ಶ್ರೀ ಶ್ರೀ ಶ್ರೀ ಆನಂದ್ ಗುರೂಜೀ ಮಾರ್ಗ ದರ್ಶನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಮಾಜಸೇವಕ ಆರ್.ಕೆ ಶ್ರೀಧರ್ ಕೃಷ್ಣಪ್ಪ ತಿಳಿಸಿದರು.

ನಗರದ ಸಿ.ವಿ.ರಾಮನ್ ನಗರ ಕ್ಷೇತ್ರದಲ್ಲಿನ ನಾಗ ವಾರಪಾಳ್ಯದ ಮುತ್ಯಾಲಮ್ಮ ದೇವಿ ದೇವಸ್ಥಾನದಲ್ಲಿ ಹಮ್ಮಿಕೊಂಡಿದ ವಿಶೇಷ ಪೂಜೆ ಹಾಗೂ ಯಾಗದಲ್ಲಿ ಭಾಗಿಯಾಗಿ ಮಾತನಾಡಿದರು. ಮಹರ್ಷಿಗಳನ್ನು ಹೂವಿನ

ಉದಯವಾಹಿನಿ ಚಿತ್ರ



ಪಲ್ಲಕ್ಕಿಯಲ್ಲಿ ಕಲಾತಂಡ ಗಳೊಂದಿಗೆ ಮೆರವಣಿಗೆ ಮೂಲಕ ಭಾರಮಾಡಿಕೊಂಡರು, ಹೆಣ್ಣುಮಕ್ಕಳು ತಲೆಯ ಮೇಲೆ ಕಳಸ ಹೊತ್ತು ಸ್ವಾಗತ ಕೋರಿದರು. ಗುರುಜೀ ಅವರ ಆಶೀರ್ವಾಚನ ಕೇಳಿ ಭಕ್ತರು ಪುನೀತರಾದರು. ಇದೇವೇಳೆ ಭಕ್ತರಿಗೆ, ಪುಟ್ಟ ಮಕ್ಕಳಿಗೆ ಮತ್ತು ಕುಮಾರಿಯರಿಗೆ ವಸ್ತ್ರದಾನ, ಅನ್ನದಾಸೋಹ ಹಾಗೂ ದಂಪತಿ ಪೂಜೆ, ಗುರು-ಹಿರಿಯರ ಅಜ್ಞೆಯಂತೆ ರಾಜ್ಯದ ಹಿತಕ್ಕಾಗಿ ಈ ಭಾಗದ ಪ್ರತಿಯೊಬ್ಬರ ಸಮಸ್ಯೆಗಳ ಪರಿಹಾರಕ್ಕಾಗಿ, ಮಹಾರುದ್ರಯಾಗದಿಂದ ಒಳ್ಳೆಯದಲ್ಲಿದೆ ಎಂದು ನುಡಿದರು. ಈ ಸಂದರ್ಭದಲ್ಲಿ ಶ್ರೀನಿವಾಸ್ ಗುರುಜೀ, ಹಿರಿಯ ಮುಖಂಡ ಹೂಡಿ ವಿಜಯ್ ಕುಮಾರ್, ಎಸ್. ಆನಂದ್ ಕುಮಾರ್, ವಕೀಲರಾದ ಜಿ.ನಾರಾಯಣ ಸ್ವಾಮಿ, ಗಜೇಂದ್ರ (ಗಜ್ಜಿ) ಸೇರಿದಂತೆ ಸಾವಿರಾರು ಭಕ್ತರು ಆಗಮಿಸಿದರು.

**ರಾಜ್ಯದಲ್ಲಿ ಉತ್ತಮ ಮಳೆಯಾಗಿ, ನಾಡಿನಲ್ಲಿ ಸುಭಿಕ್ಷೆ ಕಾಣಲೆಂದು, ಬೇಡಿದ ವರಗಳನ್ನು ಶೀಘ್ರವಾಗಿ ದಯಪಾಲಿಸುವಂತಹ ಕಲಿಯುಗದ ಕಲ್ಪವಲ್ಲಿ ತಾಯಿ ಮುತ್ಯಾಲಮ್ಮನ ಸಾನಿಧ್ಯದಲ್ಲಿ, ಮಹಾರುದ್ರನಿಗೆ ರುದ್ರಯಾಗ ಹಾಗೂ ಸುಮಂಗಲಿಯರಿಗೆ ಅರಿಶಿನ ಕುಂಕುಮ ವಿತರಣೆಯನ್ನು ಅಭಿಜಿನ್ ಮುಹೂರ್ತದಲ್ಲಿ ಮಹರ್ಷಿಗಳ ಮಾರ್ಗದರ್ಶನದಲ್ಲಿ ಮಾಡಲಾಗಿದೆ ಎಂದರು.**

# ಪಿಒಕೆ ಉಳಿಸಿಕೊಳ್ಳಲು ಪಾಕಿಸ್ತಾನದಿಂದ ಸರ್ಕಸ್

## ಭಾರತಕ್ಕೆ ಸೇರ್ತೀವಿ ಎಂದ ತಕ್ಷಣ 2,300 ಕೋಟಿ ರೂ. ಪ್ಯಾಕೇಜ್ ಘೋಷಣೆ, ಆಹಾರ ಉತ್ಪನ್ನಗಳ ದರ, ವಿದ್ಯುತ್ ದರ ಇಳಿಸಿದ ಪಾಕ್ ಸರ್ಕಾರ

**ಇಸ್ಲಾಮಾಬಾದ್:** ಬೆಲೆ ಏರಿಕೆ, ವಿವಿಧ ಸೌಲಭ್ಯಗಳಿಂದ ವಂಚಿತರಾಗಿದ್ದ ಪಾಕ್ ಆಕ್ರಮಿತ ಕಾಶ್ಮೀರದ ಜನರು ಭಾರತಕ್ಕೆ ಸೇರುತ್ತೇವೆ ಎಂದು ನಡೆಸುತ್ತಿದ್ದ ಪ್ರತಿಭಟನೆಗೆ ಪಾಕಿಸ್ತಾನದ ಸರ್ಕಾರ ಮಣಿದಿದೆ. ಭಾರೀ ಪ್ರತಿಭಟನೆ ಬೆನ್ನಲ್ಲಿಯೇ ಪಾಕ್ ಆಕ್ರಮಿತ ಕಾಶ್ಮೀರದ ಜನರ ಬೇಡಿಕೆಗಳನ್ನು ಈಡೇರಿಸಲು ಪಾಕಿಸ್ತಾನದ ಪ್ರಧಾನಿ ಶಹಬಾಜ್ ಷರೀಫ್ 2300 ಕೋಟಿ ರೂ. ಮೊತ್ತದ ಪ್ಯಾಕೇಜ್ ಅನ್ನು ಘೋಷಿಸಿದ್ದಾರೆ.

ಜನಾಕ್ರೋಶದಿಂದ ಬೆಂದು ಹೋಗಿರುವ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಪ್ರತಿಭಟನೆ ನಡೆದಿತ್ತು. ಮುಜ ಫ್ಫರಾಬಾದ್, ಮೀರ್‌ಪುರ, ರಾವಲ್ ಕೋಟ್, ಪೂಂಛ ಸೇರಿ ಅನೇಕ ಕಡೆ ಬಂದ್ ವಾತಾವರಣ ನಿರ್ಮಾಣ ಆಗಿತ್ತು.

ಅಲ್ಲಲ್ಲಿ ಹಿಂಸಾಚಾರ, ಸಂಘರ್ಷಗಳು ವರದಿಯಾಗಿದ್ದವು. ಭಾನುವಾರ ಸಂಭವಿಸಿದ ಭದ್ರತಾಪಡೆ, ಪ್ರತಿಭಟನಾಕಾರರ ನಡುವಿನ ಘರ್ಷಣೆಯಲ್ಲಿ ಇಬ್ಬರು ಪೊಲೀಸ್ ಅಧಿಕಾರಿ ಸಾವನ್ನಪ್ಪಿದ್ದರೆ, 100 ಮಂದಿ




ಗಾಯಗೊಂಡಿದ್ದರು. ಅದಲ್ಲದೇ ಪಿಒಕೆಯ ಮುಜಫರಾಬಾದ್‌ನಲ್ಲಿ ಪಾಕಿಸ್ತಾನದ ಅರೆಸೇನಾ ಪಡೆಗಳು, ಕಾಶ್ಮೀರಿ ಪ್ರತಿಭಟನಾಕಾರರ ಪ್ರತಿಭಟನೆಯನ್ನು ನಿಯಂತ್ರಿಸಲು ಗೋಲಿಬಾರ್ ನಡೆಸಿವೆ.

ಹೀಗಾಗಿ 4 ಕಾಶ್ಮೀರಿಗಳು ಮೃತರಾಗಿದ್ದಾರೆ ಎಂದು ವರದಿ ಗಳು ಹೇಳಿವೆ. ಆದರೆ, ಪ್ರತಿಭಟನಾಕಾರರು ಶಾಂತ ಪ್ರತಿಭಟನೆ ನಡೆಸುತ್ತಿರುವ ವೇಳೆ ಅರೆ ಸೇನಾ ಯೋಧರು ಮನಬಂದಂತೆ ಗುಂಡು ಹಾರಿಸಿದ್ದಾರೆ ಎಂದು ಹೇಳಲಾಗಿದೆ. ಸೌದಿ ದೊರೆ ಮಹಮದ್ ಬಿನ್ ಸಲ್ಮಾನ್ ಈ ತಿಂಗಳಲ್ಲಿ ಪಾಕಿಸ್ತಾನಕ್ಕೆ ಭೇಟಿ ನೀಡಬೇಕಿತ್ತು. ಆದರೆ, ತಮ್ಮ ಭೇಟಿಯನ್ನು ಅವ'ರ'೨ ವ'೨೨೦ದಕ್ಕೆ ಪಾಕಿಸ್ತಾನದ ಪ್ರಧಾನಿ ಷಹಬಾಜ್ ಷರೀಫ್ ಈಗಾಗಲೇ ಒತ್ತಡದಲ್ಲಿದ್ದಾರೆ.

**ಭಾರತಕ್ಕೆ ಸೇರುತ್ತೇವೆ**

**ತನ್ನ ಹಿಡಿತದಿಂದ ಕೈತಪ್ಪುತ್ತಿರುವ ಪಾಕ್ ಆಕ್ರಮಿತ ಕಾಶ್ಮೀರವನ್ನು ಉಳಿಸಿಕೊಳ್ಳಲು ಪಾಕಿಸ್ತಾನ ಸರ್ಕಸ್ ಮಾಡುತ್ತಿದೆ. ಬೆಲೆ ಏರಿಕೆ, ವಿವಿಧ ಸೌಲಭ್ಯಗಳಿಂದ ವಂಚಿತರಾಗಿ, ಭಾರತಕ್ಕೆ ಸೇರುತ್ತೇವೆ ಎಂದು ಪಾಕ್ ಆಕ್ರಮಿತ ಕಾಶ್ಮೀರದ ಜನರು ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಪ್ರತಿಭಟನೆಗೆ ಪಾಕಿಸ್ತಾನ ಸರ್ಕಾರ ಮಣಿದಿದ್ದು, 2300 ಕೋಟಿ ರೂ. ಪ್ಯಾಕೇಜ್ ಅನ್ನು ಘೋಷಿಸಿದೆ. ಆಹಾರ ಉತ್ಪನ್ನಗಳ ದರ, ವಿದ್ಯುತ್ ದರವನ್ನು ಕೂಡ ಪಾಕಿಸ್ತಾನ ಉಳಿಸಿದೆ.**

### ಬಹುತೇಕ ಕಡೆ ಪ್ರತಿಭಟನೆ

**ಈ ಬಗ್ಗೆ ಪ್ರತಿಕ್ರಿಯಿಸಿರುವ ಪಾಕಿಸ್ತಾನ ಪ್ರಧಾನಿ ಶ ಹಬಾಜ್ ಷರೀಫ್ ಪಿಒಕೆಯಲ್ಲಿ ಉಂಟಾಗಿರುವ ಪರಿಸ್ಥಿತಿ ಬಗ್ಗೆ ತುಂಬಾ ಕಳವಳಗೊಂಡಿದ್ದೇನೆ. ಆದರೆ, ಕಾನೂನನ್ನು ಕೈಗೆ ತ್ತಿಕೊಂಡರೆ ಸುಮ್ಮನಿರುವುದಿಲ್ಲ ಎಂದಿದ್ದಾರೆ. ಪಿಒಕೆಯಲ್ಲಿ ಜಮ್ಮು ಕಾಶ್ಮೀರ ಜಂಟಿ ಅವಾಮಿ ಕ್ರಿಯಾ ಸಮಿತಿಯು ಪ್ರತಿಭಟನೆಯ ನೇತೃತ್ವವನ್ನು ವಹಿಸಿಕೊಂಡಿದ್ದು, ಪಿಒಕೆಯ ಬಹುತೇಕ ಕಡೆ ಪ್ರತಿಭಟನೆಯನ್ನು ನಡೆಸುತ್ತಿದೆ.**

ಇದರ ನಡುವೆ ಪಿಒಕೆಯಲ್ಲಿ ಪರಿಸ್ಥಿತಿ ಕೈಮೀರುತ್ತಿದ್ದರಿಂದ ಇಸ್ಲಾಮಾಬಾದ್‌ನಲ್ಲಿ ದಿಢೀರ್ ಸಭೆ ನಡೆಸಿದ ಪಾಕ್ ಪ್ರಧಾನಿ ಷರೀಫ್ 23 ಬಿಲಿಯನ್ ಡಾಲರ್ ಪ್ಯಾಕೇಜ್ ಅನ್ನು ಘೋಷಿಸಿದ್ದಾರೆ. ಈ ಸಭೆಯಲ್ಲಿ ಪಿಒಕೆಯ ಪ್ರಧಾನಿ ಚೌಧರಿ ಅನ್ವರುಲ್ ಹಕ್ ಕೂಡ ಭಾಗವಹಿಸಿದ್ದರು.

ಸಭೆ ಬಳಿಕ ಪಿಒಕೆ ಪ್ರಧಾನಿ ಹಕ್ ಆಹಾರ ಉತ್ಪನ್ನಗಳ, ವಿದ್ಯುತ್‌ನ ಬೆಲೆ ಇಳಿಕೆ ಮಾಡಿರುವ ಬಗ್ಗೆ ಪ್ರಕಟಿಸಿದರು. ಇನ್ನು, ಪಿಒಕೆಯ ಬಹುತೇಕ ಪ್ರದೇಶದಲ್ಲಿ ಮೊಬೈಲ್, ಇಂಟರ್‌ನೆಟ್ ಸೇವೆಯನ್ನು ಸ್ಥಗಿತಗೊಳಿಸಲಾಗಿದೆ. ಜೊತೆಯಲ್ಲಿ ಸರ್ಕಾರಿ ಕಚೇರಿಗಳು, ಮಾರುಕಟ್ಟೆಗಳು, ಅಂಗಡಿ - ಮುಂಗಟ್ಟುಗಳು, ಶಿಕ್ಷಣ ಸಂಸ್ಥೆಗಳು ಬಂದ್ ಆಗಿದ್ದವು. ಮೊದಲಿನಿಂದಲೂ ಇಸ್ಲಾಮಾಬಾದ್‌ನಿಂದ ಅಂತರ ಕಾಯ್ದುಕೊಂಡಿರುವ ಪಿಒಕೆಗೆ ಪಾಕಿಸ್ತಾನ ಸರ್ಕಾರ ತಾರತಮ್ಯ ಮಾಡುತ್ತಿರುವುದು ಕಂಡುಬರುತ್ತಿದೆ. ಬಹಳ ದಿನದಿಂದ ಇಲ್ಲಿನ ಜನರು ಭಾರತಕ್ಕೆ ಸೇರಲು ಬಯಸುತ್ತಿದ್ದು, ಹಲವು ಸಲ ಪ್ರತಿಭಟನೆಯನ್ನು ನಡೆಸಿದ್ದಾರೆ. ಶುಕ್ರವಾರದಿಂದ ಈ ಬಾರಿಯ ಪ್ರತಿ ಭಟನೆ ಶುರುವಾಗಿದ್ದು, ಪಾಕಿಸ್ತಾನದ ಸರ್ಕಾರ ಸಂಕಷ್ಟದಲ್ಲಿ ಸಿಲುಕಿದೆ.

# ಗಾಜಾದಲ್ಲಿ ಇಸ್ರೇಲ್ ನಡೆಸಿದ ದಾಳಿಯಲ್ಲಿ ವಿಶ್ವಸಂಸ್ಥೆಯ ಭಾರತೀಯ ಅಧಿಕಾರಿ ಬಲಿ

**ವಿಶ್ವಸಂಸ್ಥೆ:** ಇಸ್ರೇಲ್-ಹಮಾಸ್ ಸಂಘರ್ಷಕ್ಕೆ ವಿಶ್ವಸಂಸ್ಥೆಯಲ್ಲಿ ಕೆಲಸ ಮಾಡುವ ಭಾರತೀಯ ಅಧಿಕಾರಿಯೊಬ್ಬರು ಬಲಿಯಾಗಿದ್ದಾರೆ ಎಂದು ವರದಿಯಾಗಿದೆ. ಅವರು ಪ್ರಯಾಣಿಸುತ್ತಿದ್ದ ವಾಹನದ ಮೇಲೆ ದಾಳಿ ನಡೆಸಿದಾಗ ಗಾಜಾದಲ್ಲಿ ವಿಶ್ವಸಂಸ್ಥೆಯೊಂದಿಗೆ ಕೆಲಸ ಮಾಡುವ ಭಾರತೀಯ ಸಿಬ್ಬಂದಿಯೊಬ್ಬರು ಕೊಲ್ಲಲ್ಪಟ್ಟರು ಎಂದು ತಿಳಿದುಬಂದಿದೆ. ಮೃತ ವ್ಯಕ್ತಿ ವಿಶ್ವಸಂಸ್ಥೆಯ ಸುರಕ್ಷತೆ ಮತ್ತು ಭದ್ರತಾ ವಿಭಾಗದ ಸದಸ್ಯರಾಗಿದ್ದರು. ಮಾತ್ರವಲ್ಲ ಅವರು ಭಾರತೀಯ ಸೇನೆಯ ಮಾಜಿ ಸಿಬ್ಬಂದಿಯಾಗಿದ್ದರು ಎಂದು ತಿಳಿದುಬಂದಿದ್ದರೂ ಅವರ ಗುರುತನ್ನು ಇನ್ನೂ ಬಹಿರಂಗಪಡಿಸಲಾಗಿಲ್ಲ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

ವಿಶ್ವಸಂಸ್ಥೆ ಸಿಬ್ಬಂದಿ ಮೇಲಿನ ಎಲ್ಲಾ ದಾಳಿಗಳನ್ನು ಗುಟೆರಸ್ ಖಂಡಿಸಿದ್ದಾರೆ ಮತ್ತು ಸಂಪೂರ್ಣ ತನಿಖೆಗೆ ಕರೆನೀಡಿದ್ದಾರೆ ಎಂದು ಪ್ರಧಾನ ಕಾರ್ಯದರ್ಶಿಯ ಉಪ ವಕ್ತಾರ ಫರ್ಹಾನ್ ಹಕ್ ಅವರು ಹೇಳಿಕೆ ನೀಡಿದ್ದಾರೆ. ಗಾಜಾದಲ್ಲಿನ ಸಂಘರ್ಷವು ನಾಗರಿಕರ ಮೇಲೆ ಮಾತ್ರವಲ್ಲದೆ ಮಾನವೀಯ ಕೆಲಸಗಾರರ ಮೇಲೂ ಭಾರಿ ನಷ್ಟವನ್ನು ಮುಂದುವರೆಸುತ್ತಿರುವುದರಿಂದ ತಕ್ಷಣವೇ ಮಾನವೀಯ ಕದನ ವಿರಾಮಕ್ಕಾಗಿ ಮತ್ತು ಎಲ್ಲಾ ಒತ್ತೆಯಾಳುಗಳ ಬಿಡುಗಡೆಗಾಗಿ ಪ್ರಧಾನ ಕಾರ್ಯದರ್ಶಿ ತಮ ತುರ್ತು ಮನವಿಯನ್ನು ಪುನರುಚ್ಚರಿಸಿದ್ದಾರೆ ಎಂದು ಹೇಳಿಕೆಯಲ್ಲಿ ಸೇರಿಸಲಾಗಿದೆ.

ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ, ಗುಟೆರೆಸ್ ಅವರುವಿಶ್ವಸಂಸ್ಥೆ ವಾಹನವನ್ನು ಗಾಜಾದಲ್ಲಿ ಹೊಡೆದುರುಳಿಸಲಾಯಿತು, ನಮ ಸಹೋದ್ಯೋಗಿಗಳಲ್ಲಿ ಒಬ್ಬರು ಸಾವನ್ನಪ್ಪಿ ಮತ್ತೊಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ಹೇಳಿದ್ದಾರೆ.

# ಅಮೆರಿಕಾದ ಶ್ವೇತಭವನಕ್ಕೆ ಟ್ರಕ್ ನುಗ್ಗಿಸಿದ್ದು ಭಾರತೀಯ ಪ್ರಜೆ

**ವಾಷಿಂಗ್ಟನ್:** ನಾಜಿ ಸಿದ್ಧಾಂತದಿಂದ ಪ್ರೇರೇಪಣೆಗೊಂಡು ಕಳೆದ ವರ್ಷ ಬಾಡಿಗೆ ಟ್ರಕ್‌ನಿಂದ ಶ್ವೇತಭವನದ ಮೇಲೆ ದಾಳಿ ನಡೆಸಿದ್ದೆ ಎಂದು ಅಮೆರಿಕದಲ್ಲಿ ಖಾಯಂ ಆಗಿ ನೆಲೆಸಿರುವ 20 ವರ್ಷದ ಭಾರತೀಯ ಪ್ರಜೆಯೊಬ್ಬ ತಪ್ಪೊಪ್ಪಿಕೊಂಡಿದ್ದಾರೆ.

ತಪ್ಪೊಪ್ಪಿಕೊಂಡಿರುವ ಭಾರತೀಯ ಮೂಲದ ಆರೋಪಿಯನ್ನು ಸಾಯಿ ವರ್ಷಿತ್ ಕಂದುಲಾ ಎಂದು ಗುರುತಿಸಲಾಗಿದೆ. ಈತ ಮಿಸೌರಿಯ ಸೇಂಟ್ ಲೂಯಿಸ್‌ನಲ್ಲಿ ವಾಸಿಸುತ್ತಿದ್ದು ಕಳೆದ ವರ್ಷ ಮೇ.22ರಂದು ಬಾಡಿಗೆ ಟ್ರಕ್‌ನಿಂದ ಶ್ವೇತಭವನಕ್ಕೆ ಡಿಕ್ಕಿ ಹೊಡೆಸಿದ್ದ ಎಂದು ವರದಿಯಾಗಿದೆ.

ಅಮೆರಿಕ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶರಾದ ಡಾಬ್ನಿ ಔ. ಫ್ರೆಡ್ರಿಕ್ ಅವರು ಸಾಯಿ ವರ್ಷಿತ್ ಶಿಕ್ಷೆಯನ್ನು ಆಗಸ್ಟ್ 23 ಕ್ಕೆ ಪ್ರಕಟಿಸಲಾಗುವುದು ಎಂದು ತಿಳಿಸಿದ್ದಾರೆ. ತನ್ನ ಉದ್ದೇಶವನ್ನು ಸಾಧಿಸಲು ಅಗತ್ಯವಿದ್ದಲ್ಲಿ ಯುಎಸ್ ಅಧ್ಯಕ್ಷ ಮತ್ತು ಇತರರನ್ನು




ಕೊಲ್ಲಲು ತಾನು ವ್ಯವಸ್ಥೆ ಮಾಡಿದ್ದೇನೆ ಎಂದು ಕಂದುಲಾ ತನಿಖಾಧಿಕಾರಿಗಳಿಗೆ ತಿಳಿಸಿದ್ದಾರೆ ಎನ್ನಲಾಗಿದೆ. ಅವರ ಕ್ರಮಗಳು ಬೆದರಿಕೆ ಅಥವಾ ಬಲವಂತದ ಮೂಲಕ ಸರ್ಕಾರದ ನಡವಳಿಕೆಯ ಮೇಲೆ ಪ್ರಭಾವ ಬೀರಲು ಅಥವಾ ಪರಿಣಾಮ ಬೀರಲು ಲೆಕ್ಕ ಹಾಕಲಾಗಿದೆ ಎಂದು ನ್ಯಾಯಾಂಗ ಇಲಾಖೆ ಹೇಳಿದೆ. ನ್ಯಾಯಾಲಯದ ದಾಖಲೆಗಳ ಪ್ರಕಾರ, ಕಂದುಲಾ ಅವರು ಮೇ 22, 2023 ರ ಮಧ್ಯಾಹ್ನ ಸೇಂಟ್ ಲೂಯಿಸ್‌ನಿಂದ ವಾಷಿಂಗ್ಟನ್ ಡಿಸಿಗೆ ವಾಣಿಜ್ಯ ವಿಮಾನದಲ್ಲಿ ಏಕಮುಖ ವಿಮಾನಯಾನ ಟಿಕೆಟ್‌ನಲ್ಲಿ ಪ್ರಯಾಣಿಸಿದ್ದ. ಸಂಜೆ 5.20ರ ಸುಮಾರಿಗೆ ಡಲ್ಲೆಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿದ ಕಂದುಲಾ, ಸಂಜೆ 6.30ಕ್ಕೆ ಟ್ರಕ್ ಅನ್ನು ಬಾಡಿಗೆಗೆ ಪಡೆದಿದ್ದರು. ಅವರು ಆಹಾರ, ಅನಿಲಕ್ಕಾಗಿ ನಿಲ್ಲಿಸಿದರು ಮತ್ತು ನಂತರ ವಾಷಿಂಗ್ಟನ್ ಡಿಸಿಗೆ ಓಡಿಸಿದರು, ಅಲ್ಲಿ ಅವರು ವಾಯುವ್ಯ ಮತ್ತು 16 ನೇ ಬೀದಿಯ ಛೇದಕದಲ್ಲಿ ರಾತ್ರಿ 9.35 ಕ್ಕೆ ವೈಟ್ ಹೌಸ್, ಅಧ್ಯಕ್ಷರ ಉದ್ಯಾನವನವನ್ನು ರಕ್ಷಿಸುವ ತಡೆಗೋಡೆಗಳಿಗೆ ಟ್ರಕ್ ಡಿಕ್ಕಿ ಹೊಡೆಸಿದ್ದರು.

**ಪ್ರಜಾಸತ್ತಾತಕವಾಗಿ ಚುನಾಯಿತ ಸರ್ಕಾರವನ್ನು ನಾಜಿ ಜರ್ಮನಿಯ ಸಿದ್ಧಾಂತದಿಂದ ಉತ್ತೇಜಿತವಾದ ಸರ್ವಾಧಿಕಾರದೊಂದಿಗೆ ಬದಲಿಸಲು ಕಂದುಲಾ ಉದ್ದೇಶಿಸಿದ್ದ**

**-ಅಟಾರ್ನಿ ವ್ಯಾಥ್ಯೂ ಗ್ರೇವ್ಸ್**

# ಪಾಕ್ ಆಕ್ರಮಿತ ಕಾಶೀರದಲ್ಲಿ ಭಾರಿ ಹಿಂಸಾಚಾರ, ಮೂವರು ಬಲಿ

**ಇಸ್ಲಾಮಾಬಾದ್:** ಪಾಕ್ ಆಕ್ರಮಿತ ಕಾಶೀರದ ರಾಜಧಾನಿ ಮುಜಫರಾಬಾದ್‌ನಲ್ಲಿ ವಿದ್ಯುತ್ ಬಿಲ್ ಇಳಿಕೆ ಹಾಗೂ ಗೋಧಿ ಹಿಟ್ಟಿನ ದುಬಾರಿ ಬೆಲೆಯ ವಿರುದ್ಧದ ಪ್ರತಿಭಟನೆಯಿಂದ ತತ್ತರಿಸಿರುವ ಅರೆಸೇನಾಪಡೆಯ ರೇಂಜರ್‌ಗಳೊಂದಿಗಿನ ಘರ್ಷಣೆಯಲ್ಲಿ ಭದ್ರತಾ ಪಡೆಗಳು ಪ್ರತಿಭಟನಾಕಾರರ ಮೇಲೆ ಗುಂಡಿನ ದಾಳಿ ನಡೆಸಿದ್ದು ಕನಿಷ್ಠ ಮೂವರು ಸಾವನ್ನಪ್ಪಿದ್ದಾರೆ, ಆರು ಮಂದಿ ಗಾಯಗೊಂಡಿದ್ದಾರೆ.

ವಿವಾದಿತ ಪ್ರದೇಶದಲ್ಲಿ ಕಾನೂನು, ಸುವ್ಯವಸ್ಥೆ ಕಾಪಾಡಲು ಕರೆಸಲಾಗಿದ್ದ ಅರೆಸೇನಾಪಡೆಯ ರೇಂಜರ್‌ಗಳು ಪ್ರದೇಶದಿಂದ ಹೊರಗೆ ಹೋಗುವಾಗ ದಾಳಿಗೆ ಒಳಗಾದರು ಎಂದು ಡಾನ್ ಪತ್ರಿಕೆ ವರದಿ ಮಾಡಿದೆ. ಖೈಬರ್ ಪಖ್ತುನ್ಖ್ವಾ ಗ್ರಾಮದ ಗಡಿಯಲ್ಲಿರುವ ಬ್ಯಾಕೋಟ್ ಮೂಲಕ ನಿರ್ಗಮಿಸುವ ಬದಲು, ಐದು ಟ್ರಕ್‌ಗಳು ಸೇರಿದಂತೆ 19 ಬೆಂಗಾವಲು ವಾಹನಗಳು ಕೊಹಾಲಾದಿಂದ ಪ್ರದೇಶದಿಂದ ನಿರ್ಗಮಿಸಲು ನಿರ್ಧರಿಸಿದೆ ಎಂದು ಅದು ಹೇಳಿದೆ.

ಪಶ್ಚಿಮ ಬೈಪಾಸ್ ಮೂಲಕ ನಗರವನ್ನು ಪ್ರವೇಶಿಸಿದ ನಂತರ, ರೇಂಜರ್‌ಗಳನ್ನು ಮತ್ತೆ ಬಂಡೆಗಳ ಮೂಲಕ ಸ್ವಾಗತಿಸಲಾಯಿತು, ಅಶ್ರುವಾಯು ಮತ್ತು ಗುಂಡುಗಳನ್ನು ಬಳಸಲು ಅವರನ್ನು ಪ್ರೇರೇಪಿಸಿತು.




ಶೆಲ್ ದಾಳಿಯು ಎಷ್ಟು ತೀವ್ರವಾಗಿತ್ತು ಎಂದರೆ ಇಡೀ ನೆರೆಹೊರೆಯು ಅದರಿಂದ ತತ್ತರಿಸಿತು ಎಂದು ವರದಿ ಹೇಳಿದೆ. ಪ್ರತಿಭಟನಾಕಾರರು ಮತ್ತು ಪ್ರಾದೇಶಿಕ ಸರ್ಕಾರದ ನಡುವಿನ ಮಾತುಕತೆಗಳು ಬಿಕ್ಕಟ್ಟಿನಲ್ಲಿ ಕೊನೆಗೊಂಡ ನಂತರ ಈ ಪ್ರದೇಶಕ್ಕೆ ತಕ್ಷಣದ ಬಿಡುಗಡೆಗಾಗಿ ಪ್ರಧಾನಿ ಶೆಹಬಾಜ್ ಷರೀಫ್ ನಿನ್ನೆ ಪಾಕಿಸ್ತಾನದ 23 ಬಿಲಿಯನ್ ಸಬ್ಸಿಡಿಯನ್ನು ಅನುಮೋದಿಸಿದ್ದರು.

ಆದಾಗ್ಯೂ, ಸಬ್ಸಿಡಿಯನ್ನು ನೀಡುವ ಸರ್ಕಾರದ ನಿರ್ಧಾರವು ಪ್ರದೇಶವನ್ನು ಸಮಾಧಾನಪಡಿಸಲು ವಿಫಲವಾಗಿದೆ ಎಂದು ವರದಿ ಹೇಳಿದೆ.ವಿವಾದಿತ ಪ್ರದೇಶವು ಪೊಲೀಸರು ಮತ್ತು ಹಕ್ಕುಗಳ ಚಳವಳಿಯ ಕಾರ್ಯಕರ್ತರ ನಡುವೆ ಘರ್ಷಣೆಗೆ ಸಾಕ್ಷಿಯಾಯಿತು, ಕನಿಷ್ಠ ಒಬ್ಬ ಪೊಲೀಸ್ ಅಧಿಕಾರಿ ಸಾವನ್ನಪ್ಪಿದರು ಮತ್ತು 100 ಕ್ಕೂ ಹೆಚ್ಚು ಜನರು ಗಾಯಗೊಂಡರು,

**ಬೆಂಗಾವಲು ಪಡೆ ಚಾರ್ಜ್ಡ್ ವಾತಾವರಣ ದಲ್ಲಿ ಮುಜಫರಾಬಾದ್ ತಲುಪುತ್ತಿದ್ದಂತೆ, ನಕ್ಕಾ ಗ್ರಾಮದ ಬಳಿ ಕಲ್ಲು ತೂರಲಾಯಿತು, ಅದಕ್ಕೆ ಅವರು ಅಶ್ರುವಾಯು, ಗುಂಡಿನ ಮೂಲಕ ಪ್ರತಿಕ್ರಿಯಿಸಿದರು ಎಂದು ವರದಿ ತಿಳಿಸಿದೆ.**

ಶುಕ್ರವಾರದಿಂದ ಪಿಒಕೆ ಪ್ರದೇಶದಲ್ಲಿ ಸಂಪೂರ್ಣ ಮುಷ್ಕರವೂ ನಡೆಯುತ್ತಿದ್ದು, ಜನಜೀವನ ಸ್ಥಗಿತಗೊಂಡಿದೆ. ಹಿಂಸಾಚಾರಕ್ಕೆ ಸ್ವಲ್ಪ ಮೊದಲು, ಪ್ರಧಾನಿ ಷರೀಫ್, ವಿವಾದಿತ ಪ್ರದೇಶದ ಪ್ರಧಾನಿ ಅನ್ವರುಲ್ ಹಕ್ ಸಭೆಯ ನಂತರ ಈ ಪ್ರದೇಶಕ್ಕೆ ವಿದ್ಯುತ್ ಮತ್ತು ಗೋಧಿ ಸಬ್ಸಿಡಿಗಳ ಖಾತೆಯಲ್ಲಿ ಪಾಕಿಸ್ತಾನದ 23 ಶತ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲು ಅನುಮೋದಿಸಿದರು. 40 ಕೆಜಿ ಹಿಟ್ಟಿನ ಸಬ್ಸಿಡಿ ದರವು ಪಾಕಿಸ್ತಾನಿ ರೂ 2,000 ಆಗಿದ್ದು, ಪಾಕಿಸ್ತಾನದ ರೂ 3,100 ಕ್ಕಿಂತ ಕಡಿಮೆಯಾಗಿದೆ. ವಿದ್ಯುಚ್ಛಕ್ತಿ ದರವನ್ನು ಅನುಕ್ರಮವಾಗಿ 100, 300 ಮತ್ತು 300 ಕ್ಕೂ ಹೆಚ್ಚು ಯುನಿಟ್‌ಗಳಿಗೆ ಪ್ರತಿ ಯೂನಿಟ್‌ಗೆ 3 ರೂ., 5 ಮತ್ತು 6 ರೂ.ಗೆ ಪಾಕಿಸ್ತಾನಿ ರೂ.ಗೆ ಇಳಿಸಲಾಗಿದೆ ಎಂದು ಡಾನ್ ವರದಿ ಮಾಡಿದೆ.

# ನೋಟಿಸ್ ಆದೇಶ ಕಾಯ್ದಿರಿಸಿದ ಸುಪ್ರೀಂ

**ನವದೆಹಲಿ:** ಯೋಗಗುರು ಬಾಬಾ ರಾಮ್‌ದೇವ್, ವ್ಯವಸ್ಥಾಪಕ ನಿರ್ದೇಶಕ ಬಾಲಕೃಷ್ಣ ಅವರ ಮೇಲೆ ದಾಖಲಾಗಿದ್ದ ನ್ಯಾಯಾಂಗ ನಿಂದನೆ ನೋಟಿಸ್ ಆದೇಶವನ್ನು ಸುಪ್ರೀಂಕೋರ್ಟ್ ಕಾಯ್ದಿರಿಸಿದೆ. ಇದೇ ವೇಳೆ ಬಾಬಾ ರಾಮ್‌ದೇವ್‌ಗೆ ದೇಶದಲ್ಲಿ ಜನರು ನೀಡಿರುವ ನಿಮ ಸ್ಥಾನಮಾನವನ್ನು ಸಕಾರಾತಕವಾಗಿ ಬಳಸಿಕೊಳ್ಳಿ ಎಂದು ನ್ಯಾಯಾಲಯ ಸಲಹೆ ನೀಡಿದೆ. ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ, ಅಹ್ಸಾನುದ್ದೀನ್ ಅಮಾನುಲ್ಲಾ ಅವರ ಪೀಠವು ಪತಂಜಲಿಯ ಉತ್ಪನ್ನಗಳ ಪರವಾನಗಿಯನ್ನು ಅಮಾನತುಗೊಳಿಸಿರುವ ಜಾಹೀರಾತುಗಳನ್ನು ಹಿಂಪಡೆಯಲು ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ಸೂಚಿಸುವ ಅಫಿಡವಿಟ್ ಸಲ್ಲಿಸಲು ಸಂಸ್ಥೆಯ ಪರ ವಕೀಲರು ಸಮಯ ಕೋರಿದ್ದಾರೆ. ಮೂರು ವಾರಗಳಲ್ಲಿ ಅಫಿಡವಿಟ್ ಸಲ್ಲಿಸುವಂತೆ ಪೀಠ ಹೇಳಿದೆ.




ವಿಚಾರಣೆಯ ಸಂದರ್ಭದಲ್ಲಿ ಭಾರತೀಯ ವೈದ್ಯಕೀಯ ಸಂಘ ಅಧ್ಯಕ್ಷ ಆರ್.ವಿ. ಅಶೋಕನ್ ಅವರು, ಪತಂಜಲಿ ಆಯುರ್ವೇದ್‌ನ ತಪ್ಪುದಾರಿಗೆಳೆಯುವ ಜಾಹೀರಾತು ಪ್ರಕರಣದ ಕುರಿತು ಮಾಧ್ಯಮಗಳಿಗೆ ನೀಡಿದ ಸಂದರ್ಶನದಲ್ಲಿ ಸುಪ್ರೀಂಕೋರ್ಟ್‌ನ ವಿರುದ್ಧ ನೀಡಿದ್ದ ಹೇಳಿಕೆಗಳಿಗಾಗಿ ಬೇಷರತ್ ಕ್ಷಮೆಯಾಚಿಸಿದರು. ಇದಕ್ಕೆ ಉತ್ತರಿಸಿದ ನ್ಯಾಯಮೂರ್ತಿ ಕೊಹ್ಲಿ, ಇಂತಹ ಹಾನಿಕಾರಕ ಹೇಳಿಕೆಗಳ ನಂತರ ನಾವು ನಿಮ್ಮ ಹೇಳಿಕೆ ಗಳನ್ನು ಒಪ್ಪಿಕೊಳ್ಳಬೇಕೇ, ಅವರು ನಿಮ್ಮನ್ನು ಅವಹೇಳನ ಮಾಡುತ್ತಿದ್ದಾರೆ ಎಂದು ಇನ್ನೊಂದು ಕಡೆಯನ್ನು ನ್ಯಾಯಾಲಯಕ್ಕೆ ಎಳೆದು ತಂದವರು ನೀವು, ಆದರೆ ನಿಮ್ಮನ್ನು ಪರೀಕ್ಷೆಗೆ ಒಳಪಡಿಸಿದಾಗ ಅವರ ಅಫಿಡವಿಟ್‌ನಿಂದ ಸಂತೋಷವಾಗಿಲ್ಲ ಎಂದು ಪೀಠವು ಹೇಳಿದೆ. ಮೇ 7ರಂದು ಈ ವಿಷಯದ ವಿಚಾರಣೆಯ ಸಂದರ್ಭದಲ್ಲಿ, ಅಶೋಕನ್ ನೀಡಿದ ಹೇಳಿಕೆಗಳನ್ನು ಬಹಳ ತುಂಬಾ ಸ್ವೀಕಾರಾರ್ಹವಲ್ಲ ಎಂದು ಸುಪ್ರೀಂ ಕೋರ್ಟ್ ಬಣ್ಣಿಸಿದೆ. ಐಎಂಎ ಅಧ್ಯಕ್ಷರ ಪರ ಹಾಜರಾದ ಹಿರಿಯ ವಕೀಲ ಪಿ.ಎಸ್. ಪಟ್ವಾಲಿಯಾ ಅವರು ಪರಿಹಾರಕ್ಕಾಗಿ ನ್ಯಾಯಾಲಯವನ್ನು ಒತ್ತಾಯಿಸಿದಾಗ, ನ್ಯಾಯಮೂರ್ತಿ ಕೊಹ್ಲಿ, ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಂತಹ ಆರೋಗ್ಯ ಪರಿಸ್ಥಿತಿಗಳನ್ನು ಗುಣಪಡಿಸುವ ಪತಂಜಲಿಯ ಜಾಹೀರಾತುಗಳ ಕುರಿತು ರಾಮ್‌ದೇವ್, ಬಾಲಕೃಷ್ಣ ಅವರಿಗೆ ನ್ಯಾಯಾಲಯವು ತಾಕೀತು ಮಾಡಿ ಇಬ್ಬರ ಕ್ಷಮಾಪಣೆಯನ್ನೂ ನ್ಯಾಯಾಲಯ ತಿರಸ್ಕರಿಸಿ ಮುಂದಿನ ವಿಚಾರಣೆಯನ್ನು ಜುಲೈ 9ಕ್ಕೆ ಮುಂದೂಡಿದೆ.

# ಐದು ವರ್ಷದ ಬಾಲಕಿ ಮೇಲೆ ಅಪ್ರಾಪ್ತನಿಂದ ಅತ್ಯಾಚಾರ


**ಅಗರ್ ಮಾಲ್ವಾ:** ಮಧ್ಯಪ್ರದೇಶದ ಅಗರ್ ಮಾಲ್ವಾ ಜಿಲ್ಲೆಯಲ್ಲಿ 17 ವರ್ಷದ ಹುಡುಗನೊಬ್ಬ ತನ್ನ ನೆರೆಹೊರೆಯಲ್ಲಿ ವಾಸಿಸುತ್ತಿದ್ದ ಐದು ವರ್ಷದ ಬಾಲಕಿಯ ಮೇಲೆ ಅತ್ಯಾಚಾರವೆಸಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ. ಸೋಯತ್ ಕಾಲಾ ಪೊಲೀಸ್ ಠಾಣೆ ವ್ಯಾಪ್ತಿಯ ಹಳ್ಳಿಯಲ್ಲಿ ಈ ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬಾಲಕಿ ತನ್ನ ಮನೆಯ ಹೊರಗೆ ಆಟವಾಡುತ್ತಿದ್ದಾಗ ಬಾಲಕ ತನ್ನ ಮನೆಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ ಎಂದು ಸೋಯತ್ ಕಾಲಾ ಪೊಲೀಸ್ ಠಾಣೆಯ ಉಸ್ತುವಾರಿ ಯಶವಂತ್ ರಾವ್ ಗಾಯಕ್ವಾಡ್ ತಿಳಿಸಿದ್ದಾರೆ. ನಂತರ ರಾತ್ರಿ ಹೊಟ್ಟೆಯಲ್ಲಿ ನೋವು ಕಾಣಿಸಿಕೊಂಡ ನಂತರ ಬಾಲಕಿ ತನ್ನ ಕುಟುಂಬ ಸದಸ್ಯರಿಗೆ ಘಟನೆಯ ಬಗ್ಗೆ ತಿಳಿಸಿದ್ದು ನಂತರ ಪೊಲೀಸ್ ದೂರು ದಾಖಲಿಸಿದ್ದಾರೆ ಎಂದು ಅವರು ಹೇಳಿದರು. ಘಟನೆಯ ಬಳಿಕ ಆರೋಪಿ ತಲೆಮರೆಸಿಕೊಂಡಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಾಲಕಿಯ ವೈದ್ಯಕೀಯ ಪರೀಕ್ಷೆಯು ಅಪರಾಧವನ್ನು ದಢಪಡಿಸಿದೆ ಎಂದು ಅವರು ಹೇಳಿದರು. ಭಾರತೀಯ ದಂಡ ಸಂಹಿತೆ ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆಯ ಸಂಬಂಧಿತ ನಿಬಂಧನೆಗಳ ಅಡಿಯಲ್ಲಿ ಅಪ್ರಾಪ್ತ ಬಾಲಕನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

# ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನವನ್ನೂ ಗೆಲ್ಲಲ್ಲ: ಮೋದಿ

**ಲಖ್ನೋ:** ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ಒಂದೇ ಒಂದು ಸ್ಥಾನವನ್ನೂ ಗೆಲ್ಲುವುದಿಲ್ಲ ಎಂದು ಪ್ರಧಾನಿ ನರೇಂದ್ರಮೋದಿ ಭವಿಷ್ಯ ನುಡಿ ದಿದ್ದಾರೆ. ಮುಂಬರುವ ಚುನಾವಣೆಯಲ್ಲಿ 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲುವ ಗುರಿಯೊಂದಿಗೆ ನಾವು ಮುನ್ನಡೆಯುತ್ತಿದ್ದೇವೆ. ಕಾಂಗ್ರೆಸ್‌ಗೆ ಗುರುತು ಹಾಕಲೂ ಸಾಧ್ಯವಿಲ್ಲ ಎಂದು ವ್ಯಂಗ್ಯವಾಡಿದ್ದಾರೆ. ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ತನ್ನ ಖಾತೆಯನ್ನು ತೆರೆಯುವುದಿಲ್ಲ. ಕಾಂಗ್ರೆಸ್ 40 ಸ್ಥಾನಗಳನ್ನು ಪಡೆಯುತ್ತದೆ. ಗಾಂಧಿ ಕುಟುಂಬವು ಮಾಧ್ಯಮಗಳಿಗೆ ಮಾತ್ರ ಮುಖ್ಯವಾಗಿದೆ ಎಂದು ವ್ಯಂಗ್ಯವಾಡಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಉಲ್ಲೇಖಿಸಿ, ವಾಗ್ದಾಳಿ ನಡೆಸಿದ ಅವರು, ರಾಹುಲ್ ಗಾಂಧಿ ವಯನಾಡಿನಿಂದ ಪಲಾಯನ ಮಾಡಿದ್ದಾರೆ. ಮುಂಬರುವ ಚುನಾವಣೆಯಲ್ಲಿ ರಾಯ್ಬರೇಲಿಯಿಂದ ಸ್ಪರ್ಧಿಸಲು ನಿರ್ಧರಿಸುವ ಮೊದಲು ಅವರು ತಮ ಧ್ವನಿಯನ್ನು ತೀಕ್ಷ್ಣಗೊಳಿಸಿದರು. ಕೇರಳ ಅವರಿಗೆ ಪಾಠ ಕಲಿಸಿದೆ ಎಂದರು. ಉತ್ತರಪ್ರದೇಶದ ಜನರು ಈಗ ವಯನಾಡ್‌ಗೆ ತೆರಳಿದ್ದಕ್ಕಾಗಿ ಅವರನ್ನು ಪ್ರಶ್ನಿಸುತ್ತಿದ್ದಾರೆ.

ರಾಹುಲ್ ಗಾಂಧಿಯ ನಿಜವಾದ ಮುಖವನ್ನು ಕೇರಳವೂ ಗುರುತಿಸಿದೆ. ವಯನಾಡ್ ಹೊರತುಪಡಿಸಿ, ಸೋನಿಯಾ ಗಾಂಧಿ ಅವರ ಹಿಂದಿನ ಕ್ಷೇತ್ರವಾದ ರಾಯ್ಬರೇಲಿಯ ಗಾಂಧಿ ಭದ್ರಕೋಟೆಯಿಂದ ರಾಹುಲ್ ಗಾಂಧಿ ಕಣದಲ್ಲಿದ್ದಾರೆ. ಗುಜರಾತನ ಗಾಂಧಿನಗರದಲ್ಲಿ 2022ರಲ್ಲಿ ನಿಧನರಾದ ತಮ ತಾಯಿ ಹೀರಾಬೆನ್ ಮೋದಿ ಅವರ



ಸಲಹೆಯನ್ನು ನೆನಪಿಸಿಕೊಳ್ಳುವಾಗ ಪ್ರಧಾನಿ ಭಾವುಕರಾದರು. ನನ್ನ ತಾಯಿಗೆ 100 ವರ್ಷ ತುಂಬಿದಾಗ ಮತ್ತು ಅವರ ಜನದಿನದಂದು ನಾನು ಭೇಟಿಯಾಗಲು ಹೋದಾಗ, ಅವರು ಎರಡು ವಿಷಯಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಹೇಳಿದರು, ಲಂಚ ತೆಗೆದುಕೊಳ್ಳಬೇಡ ಮತ್ತು ಬಡವರನ್ನು ಮರೆಯಬೇಡ, ಬುದ್ಧಿವಂತಿಕೆಯಿಂದ ಕೆಲಸ ಮಾಡು, ಪರಿಶುದ್ಧ ಜೀವನ ನಡೆಸು ಎಂದಿದ್ದರೆಂದು ಸರಿಸಿದರು.

ಪ್ರಧಾನಿ ಮೋದಿ ಅವರು 2014ರಿಂದ ವಾರಣಾಸಿಯಿಂದ ಮೂರನೇ ಬಾರಿಗೆ ಲೋಕಸಭೆ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದಾರೆ. 2014ರ ಚುನಾವಣೆಯಲ್ಲಿ ಅರವಿಂದ್ ಕೇಜ್ರಿವಾಲ್ ವಿರುದ್ಧ ಸ್ಪರ್ಧಿಸಿದ್ದ ಶೇ.56.37ರಷ್ಟು ಮತಗಳನ್ನು ಗಳಿಸಿದ್ದರು. 2019ರಲ್ಲಿ ಶೇ.63.62ರಷ್ಟು ಮತಗಳನ್ನು ಗಳಿಸುವ ಮೂಲಕ ಮೋದಿ ಭರ್ಜರಿ ಗೆಲುವು ಸಾಧಿಸಿದ್ದರು.

**ಅವರು ಒಮ್ಮೆಯೂ ಅಮೇಥಿಗೆ ಭೇಟಿ ನೀಡಿಲ್ಲ ಎಂದು ಕಿಡಿಕಾರಿದರು. 2019ರ ಲೋಕಸಭೆ ಚುನಾವಣೆಯಲ್ಲಿ ಉತ್ತರಪ್ರದೇಶದ ರಾಯ್ ಬರೇಲಿ ಕ್ಷೇತ್ರವನ್ನು ಮಾತ್ರ ಕಾಂಗ್ರೆಸ್ ಗೆಲ್ಲಲು ಸಾಧ್ಯವಾಯಿತು. ಈ ಬಾರಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಜೊತೆ ಮೈತ್ರಿ ಮಾಡಿಕೊಂಡು ಚುನಾವಣೆ ಎದುರಿಸುತ್ತಿದೆ. ಕಾಂಗ್ರೆಸ್ ನಾಯಕ ವಯನಾಡಿನಿಂದ ಓಡಿಹೋಗಿದ್ದಾರೆ**

**-ನರೇಂದ್ರ ಮೋದಿ, ಪ್ರಧಾನಿ**

# ಚಾಬಹಾರ್ ಒಪ್ಪಂದದ ಬೆನ್ನಲ್ಲೇ ಇಂಡಿಯಾಗೆ ಖಡಕ್ ವಾರ್ನಿಂಗ್

## ಅಮೆರಿಕಕ್ಕೆ ಕೋಪ ತರಿಸಿದ ಇರಾನ್ ಜೊತೆಗಿನ ಭಾರತದ ಸ್ನೇಹ, ಭಾರತ ಸಂಭವನೀಯ ಅಪಾಯಗಳ ಬಗ್ಗೆ ತಿಳಿದಿರಬೇಕು

**ಹೊಸದಿಲ್ಲಿ:** ಇರಾನ್‌ನ ಚಾಬಹಾರ್ ಬಂದರನ್ನು ನಿರ್ವಹಿಸಲು 10 ವರ್ಷಗಳ ಒಪ್ಪಂದಕ್ಕೆ ಭಾರತ ಸಹಿ ಹಾಕಿದ ಬೆನ್ನಲ್ಲಿಯೇ ಅಮೆರಿಕ ಭಾರತಕ್ಕೆ ಪರೋಕ್ಷ ಎಚ್ಚರಿಕೆಯನ್ನು ನೀಡಿದೆ. ಇರಾನ್‌ನ ಟೆಹ್ರಾನ್‌ನ ಮೇಲೆ ನಿರ್ಬಂಧಗಳು ಜಾರಿಯಲ್ಲಿವೆ, ಅವರೊಂದಿಗೆ ವ್ಯಾಪಾರ, ವ್ಯವಹಾರಗಳನ್ನು ಮಾಡಲು ಮುಂದಾಗುವ ಯಾರೇ ಆದರೂ ಸಂಭವನೀಯ ಅಪಾಯಗಳ ಬಗ್ಗೆ ತಿಳಿದಿರಬೇಕು ಎಂದು ಅಮೆರಿಕ ಎಚ್ಚರಿಕೆ ನೀಡಿದೆ. ಮಧ್ಯ ಏಷ್ಯಾದಲ್ಲಿ ವ್ಯಾಪಾರವನ್ನು ವಿಸ್ತರಿಸಲು ಚಾಬಹಾರ್ ಬಂದರನ್ನು ನಿರ್ವಹಿಸುವ ಒಪ್ಪಂದಕ್ಕೆ ಭಾರತ ಸೋಮವಾರ ಸಹಿ ಹಾಕಿದೆ. ಗಲ್ಫ್ ಆಫ್ ಓಮನ್‌ನಲ್ಲಿರುವ ಬಂದರು ಇದಾಗಿದ್ದು, ಅಂತಾರಾಷ್ಟ್ರೀಯ ಉತ್ತರ, ದಕ್ಷಿಣ ಸಾರಿಗೆ ಕಾರಿಡಾರ್ ಎಂಬ ರಸ್ತೆ ಮತ್ತು ರೈಲು ಯೋಜನೆಯನ್ನು ಬಳಸಿಕೊಂಡು ಅಫ್ಘಾನಿಸ್ತಾನ ಮತ್ತು ಮಧ್ಯ ಏಷ್ಯಾಕ್ಕೆ ಭಾರತೀಯ ಸರಕುಗಳನ್ನು ಸಾಗಿಸಲು ಈ ಚಾಬಹಾರ್ ಬಂದರು ನೆರವಾಗಲಿದೆ ಎನ್ನಲಾಗಿದೆ. ಅದಲ್ಲದೇ ಅಂತಾರಾಷ್ಟ್ರೀಯ ಉತ್ತರ - ದಕ್ಷಿಣ ಸಾರಿಗೆ ಕಾರಿಡಾರ್ ಪಾಕಿಸ್ತಾನದ ಸಮೀಪದಲ್ಲೇ ಹಾದು ಹೋಗುತ್ತದೆ.



**ಭಾರತಕ್ಕೆ ಅಮೆರಿಕ ವಾರ್ನಿಂಗ್**

ಭಾರತವು ಈ ಯೋಜನೆಯನ್ನು 2003ರಲ್ಲಿಯೇ ಪ್ರಸ್ತಾಪಿಸಿತ್ತು. ಆದರೆ, ಪರಮಾಣು ಯೋಜನೆ ನಡೆಸುತ್ತಿದೆ ಎಂಬ ಸಂಶಯದ ಆಧಾರದಲ್ಲಿ ಇರಾನ್ ಮೇಲೆ ಅಮೆರಿಕ ನಿರ್ಬಂಧವನ್ನು ವಿಧಿಸಿತ್ತು. ಇದರಿಂದ ಬಂದರಿನ ಅಭಿವೃದ್ಧಿ ನಿಧಾನವಾಗಿತ್ತು. ಈಗ ಇರಾನ್ ಜೊತೆ ಭಾರತ ಚಾಬಹಾರ್ ಬಂದರಿನ ನಿರ್ವಹಣೆಗೆ ಒಪ್ಪಂದ ಮಾಡಿಕೊಂಡಿದೆ.

ಈ ಬಗ್ಗೆ ಅಮೆರಿಕ ರಾಜ್ಯ ಇಲಾಖೆಯ ಉಪ ವಕ್ತಾರ ವೇದಾಂತ್ ಪಟೇಲ್ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದು, ಇರಾನ್ ಮತ್ತು ಭಾರತವು ಚಬಹಾರ್ ಬಂದರಿಗೆ ಸಂಬಂಧಿಸಿದಂತೆ ಒಪ್ಪಂದಕ್ಕೆ ಸಹಿ ಹಾಕಿವೆ ಎಂಬ ವರದಿಗಳು ಅಮೆರಿಕದ ಗಮನಕ್ಕೆ ಬಂದಿದೆ. ಭಾರತವು ತನ್ನದೇ ಆದ ವಿದೇಶಾಂಗ ನೀತಿಯನ್ನು ಹೊಂದಿದ್ದು, ಇರಾನ್‌ನೊಂದಿಗೆ ತನ್ನದೇ ಆದ ದ್ವಿಪಕ್ಷೀಯ ಸಂಬಂಧವನ್ನು ಹೊಂದಿದೆ. ಅದರ ಬಗ್ಗೆ ಭಾರತ ಮಾತನಾಡಬಹುದು. ಆದರೆ, ಇದು ಅಮೆರಿಕಕ್ಕೆ ಸಂಬಂಧಿಸಿದ್ದು, ಇರಾನ್ ಮೇಲೆ ಅಮೆರಿಕದ ನಿರ್ಬಂಧಗಳು ಜಾರಿಯಲ್ಲಿವೆ. ನಾವು ಅವುಗಳನ್ನು ಮುಂದುವರಿಸುತ್ತೇವೆ ಎಂದು ಹೇಳಿದರು.

### ಏನಿದು ಚಾಬಹಾರ್ ಬಂದರು ಯೋಜನೆ?

**ಇರಾನ್‌ನ ಚಾಬಹಾರ್ ಬಂದರನ್ನು ಅಭಿವೃದ್ಧಿಪಡಿಸುವ ದೀರ್ಘಾವಧಿಯ ಒಪ್ಪಂದಕ್ಕೆ ಇಂಡಿಯನ್ ಪೋರ್ಟ್ಸ್ ಗ್ಲೋಬಲ್ ಲಿಮಿಟೆಡ್ ಮತ್ತು ಇರಾನ್‌ನ ಪೋರ್ಟ್ ಮತ್ತು ಮ್ಯಾರಿಟೈಮ್ ಆರ್ಗನೈಸೇಶನ್ ಸಹಿ ಹಾಕಿವೆ. ಐಜಿಪಿಎಲ್ ಸುಮಾರು 120 ಮಿಲಿಯನ್ ಡಾಲರ್ ಹೂಡಿಕೆ ಮಾಡುತ್ತದೆ. ಮತ್ತೊಂದು ಕಡೆ 250 ಮಿಲಿಯನ್ ಡಾಲರ್ ಅನ್ನು ಸಾಲವಾಗಿ ಸಂಗ್ರಹಿಸಲಾಗುತ್ತದೆ. ಕೇಂದ್ರ ಬಂದರು, ಹಡಗು ಮತ್ತು ಜಲಮಾರ್ಗಗಳ ಸಚಿವ ಸರ್ಬಾನಂದ ಸೋನೊವಾಲ್ ಮತ್ತು ಇರಾನ್‌ನ ಸಾರಿಗೆ ಮತ್ತು ನಗರಾಭಿವೃದ್ಧಿ ಸಚಿವ ಮೆಹರ್ದಾದ್ ಬಜ್ರಾಶ್ ಅವರು ಒಪ್ಪಂದಕ್ಕೆ ಟೆಹ್ರಾನ್‌ನಲ್ಲಿ ಸಹಿ ಹಾಕಿದರು.**

### ಇರಾನ್, ಭಾರತದ ನಡುವೆ ವ್ಯಾಪಾರ; ಅಮೆರಿಕದ ಕಣ್ಣು ಕೆಂಪು

**ಇರಾನ್ ಜೊತೆ ಭಾರತ ಒಪ್ಪಂದ ಮಾಡಿಕೊಂಡ ಬೆನ್ನಲ್ಲೇ ಅಮೆರಿಕ ಭಾರತಕ್ಕೆ ಎಚ್ಚರಿಕೆಯನ್ನು ನೀಡಿದೆ. ಇರಾನ್ ಜೊತೆ ವ್ಯಾಪಾರ - ವ್ಯವಹಾರಗಳನ್ನು ಮಾಡಲು ಬಯಸುವವರು ಸಂಭವನೀಯ ಅಪಾಯಗಳ ಬಗ್ಗೆ ತಿಳಿದಿರಬೇಕು ಎಂದು ಅಮೆರಿಕ ವಾರ್ನಿಂಗ್ ಮಾಡಿದೆ. 10 ವರ್ಷಗಳ ಕಾಲ ಇರಾನ್‌ನ ಚಾಬಹಾರ್ ಬಂದರನ್ನು ನಿರ್ವಹಿಸಲು ಭಾರತ ಇರಾನ್ ಜೊತೆ ಒಪ್ಪಂದ ಮಾಡಿಕೊಂಡಿದೆ. ಇದರಿಂದ ಅಫ್ಘಾನಿಸ್ತಾನ, ಇರಾನ್ ಹಾಗೂ ಭಾರತದ ನಡುವೆ ವ್ಯಾಪಾರ - ವಹಿವಾಟು ಹೆಚ್ಚಲಿದೆ ಎನ್ನಲಾಗಿದೆ.**

ಮುಂದುವರೆದು ಮಾತನಾಡಿದ ಅವರು, ಯಾರಾದರೂ ಇರಾನ್‌ನೊಂದಿಗೆ ವ್ಯಾಪಾರ ವ್ಯವಹಾರಗಳನ್ನು ಮಾಡಲು ಮುಂದಾದರೆ ಅವರು ಸಂಭಾವ್ಯ ಅಪಾಯಗಳ ಬಗ್ಗೆ ಹಾಗೂ ನಿರ್ಬಂಧಗಳ ಬಗ್ಗೆ ತಿಳಿದಿರಬೇಕು ಎಂದು ವೇದಾಂತ್ ಪಟೇಲ್ ಎಚ್ಚರಿಕೆ ನೀಡಿದ್ದಾರೆ. ಭಾರತ ಹಾಗೂ ಇರಾನ್ ಒಪ್ಪಂದಕ್ಕೆ ಯಾವುದಾದರೂ ವಿನಾಯಿತಿ ಇದೆಯೇ ಎಂದು ವರದಿಗಾರರು ಕೇಳಿದಾಗ ವೇದಾಂತ್ ಪಟೇಲ್ ಇಲ್ಲ ಎಂದು ಹೇಳಿದರು.

2016ರ ಒಪ್ಪಂದದ ಬದಲಾಗಿ ಹೊಸ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ. ಚಾಬಹಾರ್ ಬಂದರಿನಲ್ಲಿರುವ ಶಾಹಿದ್ ಬೆಹೆಷ್ಟಿ ಟರ್ಮಿನಲ್‌ನಲ್ಲಿ ಭಾರತದ ಕಾರ್ಯಾಚರಣೆಯನ್ನು ಒಳಗೊಂಡಿದೆ. ಇದನ್ನು ವಾರ್ಷಿಕವಾಗಿ ನವೀಕರಿಸಲಾಗುತ್ತದೆ. ಇದೇ ಮೊದಲ ಬಾರಿಗೆ ಸಾಗರೋತ್ತರ ಬಂದರಿನ ನಿರ್ವಹಣೆಯನ್ನು ಭಾರತ ವಹಿಸಿಕೊಂಡಿದೆ. ಇದರಿಂದ ಭಾರತ, ಇರಾನ್ ಮತ್ತು ಅಫ್ಘಾನಿಸ್ತಾನದ ನಡುವೆ ವ್ಯಾಪಾರ ಹೆಚ್ಚಳವಾಗುವ ನಿರೀಕ್ಷೆಯಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯವು 2024-25ನೇ ಸಾಲಿಗೆ ಚಾಬಹಾರ್ ಬಂದರಿಗೆ 100 ಕೋಟಿ ರೂ. ಅನ್ನು ಮಂಜೂರು ಮಾಡಿದೆ.

ಉದಯ ವಾಹಿನಿ

ದೇಶ/ವಿದೇಶ

ಬುಧವಾರ 15 ಮೇ 2024 | 07

## ಮಿನಿ ನ್ಯೂಸ್

### ಕಟ್ಟಡ ಕುಸಿತ ದುರಂತದಲ್ಲಿ ಸಾವಿನ ಸಂಖ್ಯೆ 32ಕ್ಕೆ ಏರಿಕೆ

**ಕೇಪ್ ಟೌನ್:** ಕಳೆದ ವಾರ ನಿರ್ಮಾಣ ಹಂತದ ಅಪಾರ್ಟ್‌ಮೆಂಟ್ ಕಟ್ಟಡ ಕುಸಿದ ಘಟನೆಯಲ್ಲಿ ಸಾವಿನ ಸಂಖ್ಯೆ 32 ಕ್ಕೆ ಏರಿಕೆಯಾಗಿದ್ದು, ಅವಶೇಷಗಳಡಿ ಬದುಕುಳಿದವರನ್ನು ಹುಡುಕುವ ಪ್ರಯತ್ನ ರಕ್ಷಣಾ ತಂಡಗಳು ಮುಂದುವರೆಸಿದೆ. ದಕ್ಷಿಣ ಆಫ್ರಿಕಾದ ದಕ್ಷಿಣ ಕರಾವಳಿಯ ಜಾರ್ಜ್ ನಗರದಲ್ಲಿ ಕಟ್ಟಡದ ಅವಶೇಷಗಳಲ್ಲಿ ಆಹಾರ ಮತ್ತು ನೀರಿಲ್ಲದೆ 6 ದಿನಗಳ ನಂತರ ಕಟ್ಟಡ ಕಾರ್ಮಿಕನೊಬ್ಬನನ್ನು ಅವಶೇಷದಿಂದ ಜೀವಂತವಾಗಿ ಹೊರತೆಗೆಯಲಾಗಿದ್ದು,ಭರವಸೆಯನ್ನು ಹೆಚ್ಚಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇನ್ನೂ 20 ಕಾರ್ಮಿಕರು ಇನ್ನೂ ಕಾಣೆಯಾಗಿದ್ದಾರೆ, ದಕ್ಷಿಣ ಆಫ್ರಿಕಾದ ಮಾರಣಾಂತಿಕ ಕಟ್ಟಡದ ಕುಸಿತದಲ್ಲಿ ಸಾವಿನ ಸಂಖ್ಯೆ ಅಂತಿಮವಾಗಿ 50 ಕ್ಕಿಂತ ಹೆಚ್ಚಾಗುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ ಎಂದು ಹೇಳಿದ್ದಾರೆ.ಸುಮಾರು 600 ಕ್ಕೂ ಹೆಚ್ಚು ತುರ್ತು ಸೇವೆಗಳು ಮತ್ತು ಇತರ ಸಿಬ್ಬಂದಿ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಕಟ್ಟಡ ಕುಸಿದಾಗ ಸ್ಥಳದಲ್ಲಿ 81 ಕಾರ್ಮಿಕರಿದ್ದರು ಮತ್ತು 29 ಜನರನ್ನು ಜೀವಂತವಾಗಿ ಹೊರತೆಗೆಯಲಾಗಿದೆ ಎಂದು ನಗರ ತಿಳಿಸಿದ್ದಾರೆ ಅವರಲ್ಲಿ 12 ಮಂದಿ ಆಸ್ಪತ್ರೆಯಲ್ಲಿ ಬದುಕುಳಿದವರಲ್ಲಿ ಹಲವರು ಗಂಭೀರ ಸ್ಥಿತಿಯಲ್ಲಿದ್ದು ಪ್ರಯತ್ನ ಮುಂದುವರೆದಿದೆ. 32 ವರ್ಷದ ಗೇಬ್ರಿಯಲ್ ಗುವಾಂಬೆ ಎಂಬ ಕಾರ್ಮಿಕನನ್ನು ಆಸ್ಪತ್ರೆಯಲ್ಲಿದ್ದು, ಗಮನಾರ್ಹವಾಗಿ ಈತನಿಗೆ ಸಣ್ಣ ಗಾಯಗಳಾಗಿವೆ ಸುಮಾರು 118 ಗಂಟೆಗಳ ಕಾಲ ಅವಶೇಷಗಳಲ್ಲಿ ಸಿಕ್ಕಿಹಾಕಿಕೊಂಡಿದ್ದರು ಎಂದು ತಿಳಿಸಲಾಗಿದೆ.

### ಮತದಾನ ಪ್ರಮಾಣ ಏರಿಕೆ 370ನೇ ವಿಧಿ ರದ್ದತಿಯ ಫಲಿತಾಂಶಕ್ಕೆ ಸಾಕ್ಷಿ

**ನವದೆಹಲಿ:** 370ನೇ ವಿಧಿಯನ್ನು ರದ್ದುಗೊಳಿಸುವ ಪ್ರಧಾನಿ ನರೇಂದ್ರ ಮೋದಿ ಸರ್ಕಾರದ ನಿರ್ಧಾರವು, ಜಮ್ಮು ಕಾಶೀರದಲ್ಲಿ ಶೇಕಡಾವಾರು ಮತದಾನದಲ್ಲಿ ಫಲಿತಾಂಶವನ್ನು ತೋರಿಸುತ್ತಿದೆ. ಪ್ರಜಾಪ್ರಭುತ್ವದ ಮೇಲೆ ಜನರ ನಂಬಿಕೆಯನ್ನು ಹೆಚ್ಚಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. 4ನೇ ಹಂತದ ಸಾರ್ವತ್ರಿಕ ಚುನಾವಣೆಯ ಮತದಾನ ನಡೆದ ಶ್ರೀನಗರ ಲೋಕಸಭಾ ಕ್ಷೇತ್ರದಲ್ಲಿ ಶೇಕಡಾ 38ರಷ್ಟು ಮತದಾನವಾದ ಒಂದು ದಿನದ ನಂತರ ಗೃಹ ಸಚಿವರು ಮಂಗಳವಾರ ಈ ಹೇಳಿಕೆ ನೀಡಿದ್ದಾರೆ. ಶ್ರೀನಗರದಲ್ಲಿ 2019ರ ಲೋಕಸಭಾ ಚುನಾವಣೆಯಲ್ಲಿ ಶೇ.14.43, 2014ರಲ್ಲಿ ಶೇ.25.86, 2009ರಲ್ಲಿ ಶೇ. 25.55 ಮತ್ತು 2004ರಲ್ಲಿ 18.57 ಶೇಕಡಾ ಮತದಾನವಾಗಿದೆ. ಮೋದಿ ಸರ್ಕಾರದ 370ನೇ ವಿಧಿಯನ್ನು ರದ್ದುಗೊಳಿಸುವ ನಿರ್ಧಾರವು ಮತದಾನದ ಶೇಕಡಾವಾರು ಫಲಿತಾಂಶಗಳನ್ನು ಹೆಚ್ಚಿ ಸಿದೆ. ಇದು ಪ್ರಜಾಪ್ರಭುತ್ವದಲ್ಲಿ ಜನರ ನಂಬಿಕೆಯನ್ನು ಹೆಚ್ಚಿಸಿದೆ ಮತ್ತು ಅದರ ಬೇರುಗಳು ಜಮು ಮತ್ತು ಕಾಶೀರದಲ್ಲಿ ಆಳವಾಗಿವೆ ಎಂದಿದ್ದಾರೆ. ಮತದಾನದ ಶೇಕಡಾವಾರು ಹೆಚ್ಚಳದ ಮೂಲಕ ಜಮು ಮತ್ತು ಕಾಶೀರದ ಜನರು ಆರ್ಟಿಕಲ್ 370 ನಿಬಂಧನೆಗಳ ರದ್ದತಿಯನ್ನು ವಿರೋಧಿಸಿದವರಿಗೆ ತಕ್ಕ ಉತ್ತರ ನೀಡಲಾಗಿದೆ ಎಂದು ಹೇಳಿದ್ದಾರೆ. ಮೋದಿ ಸರ್ಕಾರವು 2019ರಲ್ಲಿ ಜಮು ಮತ್ತು ಕಾಶೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿಯನ್ನು ರದ್ದುಗೊಳಿಸಿತು ಮತ್ತು ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿತ್ತು.


### ಫೈರಿಂಗ್ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿ ಬಂಧನ

**ಮುಂಬೈ:** ಕಳೆದ ತಿಂಗಳು ಇಲ್ಲಿನ ಬಾಲಿವುಡ್ ಸೂಪರ್‌ಸ್ಟಾರ್ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ಗುಂಡಿನ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ನ ಮತ್ತೊಬ್ಬ ಸದಸ್ಯನನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಆರೋಪಿಯನ್ನು ಹರ್ಯಾಣದ ಫತೇಹಾಬಾದ್ ನಿವಾಸಿ ಹರ್ಪಾಲ್ ಸಿಂಗ್ (34) ಎಂದು ಗುರುತಿಸಲಾಗಿದ್ದು, ಆತನನ್ನು ಮುಂಬೈ ಅಪರಾಧ ವಿಭಾಗದ ತಂಡ ನಿನ್ನೆ ಸಂಜೆ ಆತನ ಸ್ವಗ್ರಾಮದಿಂದ ಬಂಧಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಮಂಗಳವಾರ ಮುಂಜಾನೆ ಸಿಂಗ್ ಅವರನ್ನು ಮುಂಬೈಗೆ ಕರೆತರಲಾದ್ದು, ನಂತರ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಏಪ್ರಿಲ್ 14 ರಂದು ಮುಂಬೈನ ಬಾಂದ್ರಾ ಪ್ರದೇಶದ ಗ್ಯಾಲಕ್ಸಿ ಅಪಾರ್ಟ್ ಮೆಂಟ್‌ನಲ್ಲಿರುವ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ಮೋಟಾ ರ್‌ಸೈಕಲ್‌ನಲ್ಲಿ ಬಂದ ಇಬ್ಬರು ವ್ಯಕ್ತಿಗಳು ಗುಂಡು ಹಾರಿಸಿ ಸ್ಥಳದಿಂದ ಪರಾರಿಯಾಗಿದ್ದರು. ಫೈರಿಂಗ್ ಪ್ರಕರಣದಲ್ಲಿ ಈ ತಿಂಗಳ ಆರಂಭದಲ್ಲಿ ಬಂಧಿತನಾದ ಮತ್ತೊಬ್ಬ ಬಿಷ್ಣೋಯ್ ಗ್ಯಾಂಗ್ ಸದಸ್ಯ ಮೊಹಮದ್ ರಫೀಕ್ ಚೌಧರಿ ಅವರ ವಿಚಾರಣೆಯ ಸಮಯದಲ್ಲಿ ಸಿಂಗ್ ಹೆಸರು ಹೇಳಿದ್ದ ಎಂದು ಅಧಿಕಾರಿ ತಿಳಿಸಿದ್ದಾರೆ.ಸಲ್ಮಾನ್ ಖಾನ್ ಅವರ ನಿವಾಸದ ಸುತ್ತಲೂ ವಿಹಾರ ನಡೆಸುವಂತೆ ಸಿಂಗ್ ಚೌಧರಿ ಅವರನ್ನು ಕೇಳಿಕೊಂಡಿದ್ದರು ಮತ್ತು ಅವರಿಗೆ 2-3 ಲಕ್ಷ ರೂಪಾಯಿಗಳನ್ನು ನೀಡಿದ್ದರು ಎಂದು ಪೊಲೀಸರು ತಿಳಿ ಸಿದ್ದಾರೆ. ಪ್ರಸ್ತುತ ಗುಜರಾತ್‌ನ ಅಹಮದಾಬಾದ್‌ನ ಸಬರಮತಿ ಕೇಂದ್ರ ಕಾರಾಗಹದಲ್ಲಿರುವ ಲಾರೆನ್ಸ್ ಬಿಷ್ಣೋಯ್ ಮತ್ತು ಅವರ ಕಿರಿಯ ಸಹೋದರ ಅನೋಲ್ ಬಿಷ್ಣೋಯ್ ಅವರು ಯುಎಸ್ ಅಥವಾ ಕೆನಡಾದಲ್ಲಿದ್ದಾರೆ ಎಂದು ನಂಬಲಾಗಿದೆ ಎಂದು ಫೈರಿಂಗ್ ಪ್ರಕರಣದಲ್ಲಿ ತಿಳಿಸಲಾಗಿದೆ.

### ಭಾರತದೊಳಗೆ ನುಸುಳಲೆತ್ನಿಸುತ್ತಿದ್ದ ಒಳನುಸುಳುಕೋರನ ಬಂಧನ

**ಜಮು:** ಇಲ್ಲಿನ ಗಡಿ ನಿಯಂತ್ರಣ ರೇಖೆಯ ಬಳಿಯ ಹಳ್ಳಿಯೊಂದರಿಂದ ಪಾಕಿಸ್ತಾನಿ ಒಳನುಸುಳುಕೋರನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಕಥುವಾ ಜಿಲ್ಲೆಯ ಅಂತರಾಷ್ಟ್ರೀಯ ಗಡಿ ಬಳಿ ಭಯೋತ್ಪಾದಕರು ಎಂಬ ಶಂಕೆ ಮೇಲೆ ಐವರ ಚಲನವಲನದ ಗಮನಿಸಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಯಿತು ಜಮುವಿನ ಹೊರವಲಯದಲ್ಲಿರುವ ಖೌರ್‌ನ ಪಲ್ಲನ್‌ವಾಲಾ ಪ್ರದೇಶದ ಎಲ್‌ಒಸಿ ಬಳಿಯ ಮಿಲನ್ ಡಿ ಖುಯಿ ಗ್ರಾಮದಿಂದ ಕರಾಚಿಯ ನಿವಾಸಿ ಜಹೀರ್ ಖಾನ್ ಎಂದು ಗುರುತಿಸಿಕೊಂಡ ಪಾಕಿಸ್ತಾನಿ ಒಳನುಗ್ಗಿಗಾರನನ್ನು ಬಂಧಿಸಲಾಗಿದೆ. ಆತನ ಬಗ್ಗೆ ಅನುಮಾನಗೊಂಡು ಪೊಲೀಸ್ ಸ್ಥಳೀಯ ಠಾಣೆಗೆ ಕರೆತಂದು ವಿಚಾರಣೆ ನಡೆಸಿದಾಗ ಆತ ಪಾಕಿಸ್ತಾನಿ ಪ್ರಜೆ ಎಂದು ತಿಳಿದುಬಂದಿದೆ. ಈ ವೇಲೆ ಆತ ಅಜಾಗರೂಕತೆಯಿಂದ ಗಡಿ ದಾಟಿದೆ ಎಂದು ಹೇಳಿಕೊಂಡಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಮತ್ತು ಮುಂದಿನ ತನಿಖೆ ನಡೆಸಲಾಗುತ್ತಿದೆ ಎಂದು ಅವರು ಹೇಳಿದರು. ಕಥುವಾ ಜಿಲ್ಲೆಯಲ್ಲಿ ಶಂಕಿತ ಭಯೋತ್ಪಾದಕರ ಉಪಸ್ಥಿತಿ ಬಗ್ಗೆ ಗ್ರಾಮಸ್ಥರು ತಿಳಿಸಿದ ನಂತರ ಇಂದು ಬೆಳಿಗ್ಗೆ ರಾಜ್‌ಬಾಗ್ ಪ್ರದೇಶದ ಜುಥಾನಾ ಗ್ರಾಮದಲ್ಲಿ ಪೊಲೀಸರು, ಸೇನೆ ಮತ್ತು ಬಿಎಸ್‌ಎಫ್ ಜಂಟಿ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಿದ್ದಾರೆ. ಗ್ರಾಮಸ್ಥರ ಪ್ರಕಾರ, ಕನಿಷ್ಠ ಐವರು ಶಂಕಿತ ಭಯೋತ್ಪಾದಕರ ಗುಂಪು ಮನೆಯೊಂದಕ್ಕೆ ನುಗ್ಗಿ ಆಹಾರಕ್ಕಾಗಿ ಹುಡುಕಿದೆ. ಆದರೆ, ಅವರ ಚಲನವಲನವನ್ನು ಭದ್ರತಾ ಪಡೆಗಳಿಗೆ ವರದಿ ಮಾಡಲಾಗಿದೆ ಎಂದು ಅನುಮಾನಗೊಂಡ ನಂತರ ಅವರು ಸ್ಥಳದಿಂದ ಪರಾರಿಯಾಗಿದ್ದಾರೆ ಎನ್ನಲಾಗಿದೆ.




# ಲಕ್ನೋ ಬೌಲರ್ಸ್ ಬೆವರಿಳಿಸಿದ ಡೆಲ್ಲಿ!

## 64ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ಮುಖಾಮುಖಿ

2024ರ ಇಂಡಿಯನ್ ಪ್ರೀಮಿಯರ್ ಲೀಗ್ 64ನೇ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಲಕ್ನೋ ಸೂಪರ್ ಜೈಂಟ್ಸ್ ಮುಖಾಮುಖಿಯಾಗಿವೆ. ನವದೆಹಲಿಯ ಅರುಣ್ ಜೇಟ್ಲಿ ಮೈದಾನದಲ್ಲಿ ಪಂದ್ಯ ನಡೆಯುತ್ತಿದೆ. ಕಳೆದ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು (ಆರ್‌ಸಿಬಿ) ವಿರುದ್ಧ ಸೋತಿರುವ ಡೆಲ್ಲಿ ತಂಡಕ್ಕೆ ನಾಯಕ ರಿಷಬ್ ಪಂತ್ ಒಂದು ಪಂದ್ಯದ ನಿಷೇಧದ ನಂತರ ಮರಳಿದ್ದಾರೆ. ಇನ್ನೊಂದೆಡೆ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ಹೀನಾಯವಾಗಿ ಸೋಲು ಕಂಡಿರುವ ಕೆಎಲ್ ರಾಹುಲ್ ನಾಯಕತ್ವದ ಲಕ್ನೋ ತಂಡದ ಗೆಲ್ಲುವ ನಿರೀಕ್ಷೆಯಲ್ಲಿದೆ. ಇನ್ನೂ ಡು ಆರ್ ಡೈ ಪಂದ್ಯದಲ್ಲಿ ಟಾಸ್ ಗೆದ್ದ ಲಕ್ನೋ ತಂಡ ಬೌಲಿಂಗ್ ಆಯ್ಕೆ ಮಾಡಿಕೊಂಡಿತ್ತು. ಡೆಲ್ಲಿ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 208 ರನ್‌ಗಳಿಸಿತು.

**ಡೆಲ್ಲಿ ಕ್ಯಾಪಿಟಲ್ಸ್‌ಗೆ ಆರಂಭಿಕ ಆಘಾತ!:** ಮೊದಲ ಓವರ್‌ನಲ್ಲಿಯೇ ಡೆಲ್ಲಿಗೆ ಮೊದಲ ಹೊಡೆತ ಬಿತ್ತು. ಟೂರ್ನಿಯಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ ಜೇಕ್ ಫ್ರೇಸರ್ ಮೆಕ್ ಗುರ್ಕ್ ಖಾತೆ ತೆರೆಯದೆ ವಿಕೆಟ್ ಒಪ್ಪಿಸಿದರು. ಇಂದಿನ ಪಂದ್ಯದಲ್ಲಿ ಅವರು ಅಬ್ಬರಿಸುತ್ತಾರೆ ಅಂತ ಎಲ್ಲಾ ಅಂದುಕೊಂಡಿದ್ದರು. ಪವರ್‌ಪ್ಲೇ ಮುಗಿಯುವ ವೇಳೆ ಡೆಲ್ಲಿ ಆರು ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು 73 ರನ್ ಗಳಿಸಿತು. ಇನ್ನೂ ಡೆಲ್ಲಿ ಒಂಬತ್ತನೇ ಓವರ್‌ನಲ್ಲಿ ಎರಡನೇ ವಿಕೆಟ್ ಕಳೆದುಕೊಂಡಿತು.

ಶಾಯ್ ಹೋಪ್ 27 ಎಸೆತಗಳಲ್ಲಿ ಮೂರು ಬೌಂಡರಿ ಹಾಗೂ 2 ಸಿಕ್ಸರ್ ನೆರವಿನಿಂದ 38 ರನ್ ಗಳಿಸಿ ಔಟಾದರು. 12ನೇ ಓವರ್‌ನಲ್ಲಿ ಡೆಲ್ಲಿ ಮೂರನೇ ವಿಕೆಟ್ ಕಳೆದುಕೊಂಡಿತು. ಅಭಿಷೇಕ್ ಪೊರೆಲ್ 33 ಎಸೆತಗಳಲ್ಲಿ 5 ಬೌಂಡರಿ ಹಾಗೂ 4 ಸಿಕ್ಸರ್ ನೆರವಿನಿಂದ 58 ರನ್ ಗಳಿಸಿ ಔಟಾದರು. ಡೆಲ್ಲಿ ನಾಯಕ ರಿಷಬ್ ಪಂತ್ 23 ಎಸೆತಗಳಲ್ಲಿ 33 ರನ್ ಬಾರಿಸಿ ವಿಕೆಟ್ ಒಪ್ಪಿಸಿದ್ದರು.




ಅಭಿಷೇಕ್ ಪೊರೆಲ್ ಸ್ಫೋಟಕ ಬ್ಯಾಟಿಂಗ್

### ಡೆಲ್ಲಿ-ಲಕ್ನೋ ಹೆಡ್ ಟು ಹೆಡ್!

**ಲಕ್ನೋ ಇಲ್ಲಿಯವರೆಗೆ 12 ಪಂದ್ಯಗಳನ್ನು ಆಡಿದ್ದಾರೆ. 6 ಪಂದ್ಯ ಗೆದ್ದು, 6 ಸೋಲು ಕಂಡಿದೆ. ಪ್ರಸ್ತುತ ತಂಡವು ಒಟ್ಟು 12 ಅಂಕಗಳನ್ನು ಹೊಂದಿದ್ದು, ಅಂಕಪಟ್ಟಿಯಲ್ಲಿ 7ನೇ ಸ್ಥಾನದಲ್ಲಿದೆ. ಡೆಲ್ಲಿ ಮತ್ತು ಲಕ್ನೋ ನಡುವೆ ಇಲ್ಲಿಯವರೆಗೆ ಒಟ್ಟು 4 ಪಂದ್ಯಗಳು ನಡೆದಿವೆ. ಲಕ್ನೋ 3 ಪಂದ್ಯಗಳನ್ನು ಗೆದ್ದಿದ್ದರೆ, ಡೆಲ್ಲಿ ತಂಡ ಕೇವಲ 1 ಪಂದ್ಯವನ್ನು ಗೆದ್ದಿದೆ. ಹೀಗಾಗಿ ಡೆಲ್ಲಿ ವಿರುದ್ಧ ಲಕ್ನೋ ಮೇಲುಗೈ ಸಾಧಿಸಿದೆ.**

**ಡೆಲ್ಲಿ ಕ್ಯಾಪಿಟಲ್ಸ್‌ಗೆ ಆರಂಭಿಕ ಆಘಾತ!:** ಮೊದಲ ಓವರ್‌ನಲ್ಲಿಯೇ ಡೆಲ್ಲಿಗೆ ಮೊದಲ ಹೊಡೆತ ಬಿತ್ತು. ಟೂರ್ನಿಯಲ್ಲಿ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ ಜೇಕ್ ಫ್ರೇಸರ್ ಮೆಕ್ ಗುರ್ಕ್ ಖಾತೆ ತೆರೆಯದೆ ವಿಕೆಟ್ ಒಪ್ಪಿಸಿದರು. ಇಂದಿನ ಪಂದ್ಯದಲ್ಲಿ ಅವರು ಅಬ್ಬರಿಸುತ್ತಾರೆ ಅಂತ ಎಲ್ಲಾ ಅಂದುಕೊಂಡಿದ್ದರು. ಪವರ್‌ಪ್ಲೇ ಮುಗಿಯುವ ವೇಳೆ ಡೆಲ್ಲಿ ಆರು ಓವರ್‌ಗಳಲ್ಲಿ ಒಂದು ವಿಕೆಟ್ ಕಳೆದುಕೊಂಡು 73 ರನ್ ಗಳಿಸಿತು.

ಇನ್ನೂ ಡೆಲ್ಲಿ ಒಂಬತ್ತನೇ ಓವರ್‌ನಲ್ಲಿ ಎರಡನೇ ವಿಕೆಟ್ ಕಳೆದುಕೊಂಡಿತು. ಶಾಯ್ ಹೋಪ್ 27 ಎಸೆತಗಳಲ್ಲಿ ಮೂರು ಬೌಂಡರಿ ಹಾಗೂ 2 ಸಿಕ್ಸರ್ ನೆರವಿನಿಂದ 38 ರನ್ ಗಳಿಸಿ ಔಟಾದರು.12ನೇ ಓವರ್‌ನಲ್ಲಿ ಡೆಲ್ಲಿ 3ನೇ ವಿಕೆಟ್ ಕಳೆದುಕೊಂಡಿತು. ಅಭಿಷೇಕ್ ಪೊರೆಲ್ 33 ಎಸೆತಗಳಲ್ಲಿ 5 ಬೌಂಡರಿ ಹಾಗೂ 4 ಸಿಕ್ಸರ್ ನೆರವಿನಿಂದ 58 ರನ್ ಗಳಿಸಿ ಔಟಾದರು. ಡೆಲ್ಲಿ ನಾಯಕ ರಿಷಬ್ ಪಂತ್ 23 ಎಸೆತಗಳಲ್ಲಿ 33 ರನ್ ಬಾರಿಸಿ ವಿಕೆಟ್ ಒಪ್ಪಿಸಿದ್ದರು.

# ಕೆಎಲ್ ರಾಹುಲ್ ಸಂಜೀವ್ ಗೋಯೆಂಕಾ ವಿವಾದ ಅಂತ್ಯ

ಲಖನೌ ಸೂಪರ್ ಜೈಂಟ್ಸ್ ತಂಡದ ಮಾಲಿಕ ಸಂಜೀವ್ ಗೋಯೆಂಕಾ ಹಾಗೂ ಕ್ಯಾಪ್ಟನ್ ಕೆಎಲ್ ರಾಹುಲ್ ನಡುವೆ ಎದಿದ್ದ ಬಿರುಗಾಳಿ ಈಗ ಶಾಂತವಾಗಿದೆ. ಆ ಬಗ್ಗೆ ಕೆಎಲ್ ರಾಹುಲ್ ಪತ್ನಿ ಅಥಿಯಾ ಶೆಟ್ಟಿ ಪ್ರತಿಕ್ರಿಯಿಸಿದ್ದಾರೆ. ಮುಂದಿನ ವರ್ಷ ಕೆಎಲ್ ರಾಹುಲ್ ಅವರು ಬೇರೆ ಟೀಮ್‌ಗೆ ಆಡಲಿದ್ದಾರೆ ಎಂಬ ಊಹಾಪೋಹ ಹರಡಿತ್ತು. ಅದಕ್ಕೂ ಈಗ ಪೂರ್ಣವಿರಾಮ ಬಿದ್ದಂತೆ ಆಗಿದೆ.

ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ರೋಚಕ ಹಂತ ತಲುಪಿದೆ. ಈ ನಡುವೆ ಲಖನೌ ಸೂಪರ್ ಜೈಂಟ್ಸ್ ತಂಡದ ಕ್ಯಾಪ್ಟನ್ ಕೆಎಲ್ ರಾಹುಲ್ ಅಭಿಮಾನಿಗಳು ತೀವ್ರ ಬೇಸರ ಮಾಡಿಕೊಂಡಿದ್ದಾರೆ. ತಂಡ ಮಾಲಿಕ ಸಂಜೀವ್ ಗೋಯೆಂಕಾ ಜೊತೆ ನಡೆದ ಬಿರುಸಿನ ಮಾತುಕಥೆಯ ದೃಶ್ಯ ವೈರಲ್ ಆದ ಬಳಿಕ ಸೋಶಿಯಲ್ ಮೀಡಿಯಾದಲ್ಲಿ ಹತ್ತಾರು ಬಗೆಯ ಚರ್ಚೆ ನಡೆದಿದೆ. ಈ ನಡುವೆ ಕೆಎಲ್ ರಾಹುಲ್ ಅವರ ಪತ್ನಿ, ನಟಿ ಅಥಿಯಾ ಶೆಟ್ಟಿ ಮಾರ್ಮಿಕವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ ಅವರು ಒಂದು ಸಾಲನ್ನು ಹಂಚಿಕೊಂಡಿದ್ದಾರೆ.

ಪ್ರತಿಕ್ರಿಯೆ ನೀಡಿದ ಅಥಿಯಾ

ಇತ್ತೀಚಿನ ಐಪಿಎಲ್ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ತಂಡದ ಎದುರು ಲಖನೌ ಸೂಪರ್ ಜೈಂಟ್ಸ್ ತಂಡ ಹೀನಾಯವಾಗಿ ಸೋಲು ಅನುಭವಿಸಿತು. ಪಂದ್ಯ ಮುಗಿದ ಕೂಡಲೇ ತಂಡದ ಮಾಲಿಕ ಸಂಜೀವ್ ಗೋಯೆಂಕಾ ಅವರು ಮೈದಾನಕ್ಕೆ ಬಂದು ಕೆಎಲ್ ರಾಹುಲ್ ಜೊತೆ ಮಾತಿನ ಚಕಮಕಿ ನಡೆಸಿದರು. ಹತ್ತಾರು ಕ್ಯಾಮೆರಾಗಳ ಎದುರಿನಲ್ಲೇ ತಂಡದ ನಾಯಕನನ್ನು ಆ ರೀತಿ ನಡೆಸಿಕೊಂಡಿದ್ದು ಸರಿಯಲ್ಲ ಎಂದು ಕ್ರಿಕೆಟ್‌ಪ್ರೇಮಿಗಳು ಕಮೆಂಟ್ ಮಾಡಿದ್ದಾರೆ. ಆದರೆ ಈಗ ಸಂಜೀವ್ ಗೋಯೆಂಕಾ ಮತ್ತು ಕೆಎಲ್ ರಾಹುಲ್ ನಡುವಿನ ಜಟಾಪಟಿ ಅಂತ್ಯವಾದಂತಿದೆ. ಸೋಮವಾರ ರಾತ್ರಿ ಸಂಜೀವ್ ಗೋಯೆಂಕಾ ಅವರು ಕೆಎಲ್ ರಾಹುಲ್ ಅವರನ್ನು ಊಟಕ್ಕೆ ಆಹ್ವಾನಿಸಿದ್ದಾರೆ. ಆ ಸಂದರ್ಭದ ಫೋಟೋ ವೈರಲ್ ಆಗಿದೆ. ಇಬ್ಬರೂ ನಗುನಗುತ್ತಲೇ ಪರಸ್ಪರ ತಬ್ಬಿಕೊಂಡಿದ್ದಾರೆ. ಇದರಿಂದ ಕೆಎಲ್ ರಾಹುಲ್ ಅಭಿಮಾನಿಗಳಿಗೆ ಸಮಾಧಾನ ಆಗಿದೆ. ಅಥಿಯಾ ಶೆಟ್ಟಿ ಅವರು ತಮ್ಮ ಇನ್‌ಸ್ಟಾಗ್ರಾಮ್ ಸ್ಟೋರಿಯಲ್ಲಿ 'ಬಿರುಗಾಳಿ ನಂತರದ ಪ್ರಶಾಂತತೆ' ಎಂದು ಬರೆದುಕೊಂಡಿದ್ದಾರೆ. ಅಂದರೆ, ಕೆಎಲ್ ರಾಹುಲ್ ಹಾಗೂ ಸಂಜೀವ್ ಗೋಯೆಂಕಾ ನಡುವೆ ಎದ್ದಿದ್ದ ಬಿರುಗಾಳಿ ಈಗ ಶಾಂತವಾಗಿದೆ ಎಂಬ ಅರ್ಥದಲ್ಲೇ ಅವರು ಈ ಸಾಲುಗಳನ್ನು ಬರೆದುಕೊಂಡಿದ್ದಾರೆ ಎಂದು ಅನೇಕರು ಊಹಿಸಿದ್ದಾರೆ. ಅದರ ಸ್ಕ್ರೀನ್ ಶಾಟ್ ವೈರಲ್ ಆಗಿದೆ.



# ಆರ್‌ಸಿಬಿ ತಂಡದ 18ರ ಲೆಕ್ಕಾಚಾರ ಈ ಸಲ ಗೆಲುವು ನಮ್ದೆ

ಐಪಿಎಲ್‌ನ 68ನೇ ಪಂದ್ಯದಲ್ಲಿ ಆರ್‌ಸಿಬಿ ಮತ್ತು ಸಿಎಸ್‌ಕೆ ತಂಡಗಳು ಮುಖಾಮುಖಿಯಾಗಲಿದೆ. ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಮೇ 18 ರಂದು ನಡೆಯಲಿರುವ ಈ ಪಂದ್ಯವು ಉಭಯ ತಂಡಗಳ ಪಾಲಿಗೆ ನಿರ್ಣಾಯಕ. ಅಂದರೆ ಪ್ಲೇಆಫ್ ರೇಸ್‌ನಲ್ಲಿ ಉಳಿಯಬೇಕಿದ್ದರೆ ಈ ಪಂದ್ಯದಲ್ಲಿ ಗೆಲ್ಲಲೇಬೇಕು. ಹೀಗಾಗಿಯೇ ಉಭಯ ತಂಡಗಳ ಅಭಿಮಾನಿಗಳು ನಾನಾ ಲೆಕ್ಕಾಚಾರಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಲೆಕ್ಕಾಚಾರಗಳ ನಡುವೆ ಈ ಸಲ ಗೆಲುವು ಆರ್‌ಸಿಬಿ ತಂಡದ್ದೇ ಎಂಬ ವಾದವನ್ನು ಮುಂದಿಡಲಾಗುತ್ತಿದೆ. ಇದಕ್ಕೆ ಕಾರಣ ಪಂದ್ಯ ನಡೆಯುತ್ತಿರುವುದು ಮೇ 18 ರಂದು. ಅಂದರೆ ಮೇ 18 ರಂದು ಆರ್‌ಸಿಬಿ ಈವರೆಗೆ 4 ಪಂದ್ಯಗಳನ್ನಾಡಿದೆ.



2013 ರ ಮೇ 18 ರಂದು ಸಿಎಸ್‌ಕೆ ವಿರುದ್ಧ ಆರ್‌ಸಿಬಿ ಜಯ ಸಾಧಿಸಿತ್ತು. ಇದಾದ ಬಳಿಕ 2014 ರಲ್ಲೂ ಮೇ 18 ರಂದು ಸಿಎಸ್‌ಕೆ ತಂಡಕ್ಕೆ ಸೋಲುಣಿಸುವಲ್ಲಿ ಆರ್‌ಸಿಬಿ ಯಶಸ್ವಿಯಾಗಿತ್ತು. ಇನ್ನು 2016 ರ ಮೇ 18 ರಂದು ಪಂಜಾಬ್ ಕಿಂಗ್ಸ್ ವಿರುದ್ಧ ಆರ್‌ಸಿಬಿ ಜಯ ಸಾಧಿಸಿತ್ತು. 2023 ರ ಮೇ 18 ರಂದು ಎಸ್‌ಆರ್‌ಹೆಚ್ ವಿರುದ್ಧ ಆರ್‌ಸಿಬಿ ಗೆದ್ದು ಬೀಗಿತ್ತು.

ಇದೀಗ ಮೇ 18ರಂದೇ ಆರ್‌ಸಿಬಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸುತ್ತಿದೆ. ಈ ಹಿಂದೆ ಇದೇ ದಿನಾಂಕದಂದು ಸಿಎಸ್‌ಕೆಗೆ ಆರ್‌ಸಿಬಿ ಎರಡು ಬಾರಿ ಸೋಲುಣಿಸಿತ್ತು. ಹೀಗಾಗಿ ಈ ಬಾರಿ ಕೂಡ ಗೆಲುವು ಆರ್‌ಸಿಬಿ ತಂಡದ್ದೇ ಎಂಬ ವಾದವನ್ನು ಅಭಿಮಾನಿಗಳು ಮುಂದಿಡುತ್ತಿದ್ದಾರೆ. ಇನ್ನು ಮೇ 18 ರಂದು ವಿರಾಟ್ ಕೊಹ್ಲಿ ಕೂಡ ಭರ್ಜರಿ ಪ್ರದರ್ಶನ ನೀಡಿದ ಇತಿಹಾಸವಿದೆ. ಐಪಿಎಲ್‌ನಲ್ಲಿ ಕಿಂಗ್ ಕೊಹ್ಲಿ ಮೇ 18 ರಂದು 4 ಪಂದ್ಯಗಳನ್ನಾಡಿದ್ದಾರೆ. ಈ ವೇಳೆ ಸಿಎಸ್‌ಕೆ ವಿರುದ್ಧ 56★ (29), 27 (29) ರನ್ ಕಲೆಹಾಕಿದರೆ, ಪಂಜಾಬ್ ಕಿಂಗ್ಸ್ ವಿರುದ್ಧ 113 (50) ರನ್ ಬಾರಿಸಿದ್ದರು. ಹಾಗೆಯೇ ಕಳೆದ ಸೀಸನ್‌ನಲ್ಲಿ ಎಸ್‌ಆರ್‌ಹೆಚ್ 100 (63) ರನ್ ಬಾರಿಸಿ ಅಬ್ಬರಿಸಿದ್ದರು. ಹೀಗಾಗಿ ಮೇ 18 ರಂದು ಮತ್ತೊಮ್ಮೆ ಕಿಂಗ್ ಕೊಹ್ಲಿ ಬ್ಯಾಟ್‌ನಿಂದ ಭರ್ಜರಿ ಪ್ರದರ್ಶನವನ್ನು ನಿರೀಕ್ಷಿಸಬಹುದು.

ಇಲ್ಲಿ ಮತ್ತೊಂದು ಇಂಟ್ರೆಸ್ಟಿಂಗ್ ವಿಷಯ ಎಂದರೆ, ಈ ಪಂದ್ಯದಲ್ಲಿ ಆರ್‌ಸಿಬಿ ಕನಿಷ್ಠ 18 ರನ್‌ಗಳ ಅಂತರದಿಂದ ಗೆದ್ದರೆ ಸಿಎಸ್‌ಕೆ ತಂಡದ ನೆಟ್ ರನ್ ರೇಟ್ ಅನ್ನು ಹಿಂದಿಕ್ಕಬಹುದು. ಒಂದು ವೇಳೆ ಆರ್‌ಸಿಬಿ ಚೇಸ್ ಮಾಡಿದರೆ 18.1 ಓವರ್‌ಗಳಲ್ಲಿ ಗುರಿ ಮುಟ್ಟುವ ಮೂಲಕ ಸಿಎಸ್‌ಕೆ ತಂಡವನ್ನು ಅಂಕ ಪಟ್ಟಿಯಲ್ಲಿ ಹಿಂದಿಕ್ಕಬಹುದು. ಕಾಕತಾಳೀಯ ಎಂಬಂತೆ ಇಲ್ಲೂ ಕೂಡ 18ರ ಲೆಕ್ಕಾಚಾರ ಕಾಣಿಸಿಕೊಂಡಿದೆ. ಈ ಎಲ್ಲಾ ಕಾರಣಗಳಿಂದಾಗಿ ಇದೀಗ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ನಿರ್ಣಾಯಕ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಗೆಲ್ಲುವ ನಿರೀಕ್ಷೆಯನ್ನು ಅಭಿಮಾನಿಗಳು ವ್ಯಕ್ತಪಡಿಸುತ್ತಿದ್ದಾರೆ. ಈ ನಿರೀಕ್ಷೆಯೊಂದಿಗೆ ಆರ್‌ಸಿಬಿ ಈ ಬಾರಿ ಪ್ಲೇಆಫ್‌ಗೆ ಎಂಟ್ರಿ ಕೊಡಲಿದೆಯಾ ಕಾದು ನೋಡಬೇಕಿದೆ.

# 'ಲವ್ ಲಿ' ಚಿತ್ರದ ಲವ್ಲಿ ಹಾಡಿಗೆ ದನಿಯಾದ ವಸಿಷ್ಠ ಸಿಂಹ

ಸ್ಯಾಂಡಲ್‌ವುಡ್ ನಟ ಕಮ್ ಗಾಯಕ ವಸಿಷ್ಠ ಸಿಂಹ ಇದೀಗ 'ಲವ್ ಲಿ' ಚಿತ್ರದ 'ಬಯಸಿ ಬಯಸಿ' ಎಂಬ ಹಾಡಿಗೆ ದನಿಯಾಗಿದ್ದಾರೆ. 'ಮರೆತೆ ಹೋದೇನು' ಎಂದು ಹಾಡಿದ್ದ ವಸಿಷ್ಠ ಈಗ ಹೊಸ ಹಾಡಿನ ಮೂಲಕ ಮೋಡಿ ಮಾಡಿದ್ದಾರೆ.

ನಾಯಕಿ ಸ್ಟೆಫಿ ಪಟೇಲ್

'ಲವ್ ಲಿ' ಚಿತ್ರದಲ್ಲಿ ನಾಯಕನಾಗಿ ನಟಿಸಿರುವ ವಸಿಷ್ಠ ಸಿಂಹ ಇದೀಗ ಮತ್ತೊಮ್ಮೆ ಗಾಯಕನಾಗಿ ಸದ್ದು ಮಾಡಿದ್ದಾರೆ. ಸಮುದ್ರ ತೀರದಲ್ಲಿ ಕುಳಿತು ನಾಯಕಿಯನ್ನು ಹಾಡಿನ ಮೂಲಕ ವಸಿಷ್ಠ ಬಣ್ಣಿಸಿದ್ದಾರೆ. ಚೇತನ್ ಕೇಶವ್ ಮತ್ತು ಪ್ರಜ್ವಲ್ ಕೆ.ಪಿ ಬರೆದ ಸಾಹಿತ್ಯ ಬರೆದಿದ್ದಾರೆ. ಅನೂಪ್ ಸೀಳಿನ್ ಸಂಗೀತ ಸಂಯೋಜನೆ ಮಾಡಿದ್ದಾರೆ. ವಸಿಷ್ಠ ಸಿಂಹ ತಮ್ಮ ಧ್ವನಿಯನ್ನ ಚೆನ್ನಾಗಿ ಇಟ್ಟುಕೊಂಡಿದ್ದಾರೆ. ಹಾಗಾಗಿಯೇ ಸಖತ್ ಆಗಿಯೇ ಡೈಲಾಗ್ ಹೊಡೆಯುತ್ತಾರೆ. ಹಾಡು ಅಂತ ಬಂದರೆ ಅದ್ಭುತವಾಗಿ ಹಾಡುತ್ತಾರೆ. ಆ ಲೆಕ್ಕದಲ್ಲಿ ಒಂದಷ್ಟು ಸಿನಿಮಾಗಳಿಗೆ ವಸಿಷ್ಠ ಸಿಂಹ ಹಾಡಿದ್ದಾರೆ. ಸದ್ಯ ಈ ಚಿತ್ರದ ಹಾಡಿಗೆ ಉತ್ತಮ ರೆಸ್ಪಾನ್ಸ್ ಸಿಕ್ಕಿದೆ. ಈ ಚಿತ್ರದಲ್ಲಿ ವಸಿಷ್ಠ ಸಿಂಹಗೆ ನಾಯಕಿಯಾಗಿ ಸ್ಟೆಫಿ ಪಟೇಲ್ ನಟಿಸಿದ್ದಾರೆ. 'ಲವ್ ಲಿ' ಒಂದು ದಶಕದ ಹಿಂದೆ ನಡೆದ ನೈಜ ಘಟನೆಗಳನ್ನು ಆಧರಿಸಿದ ಕಮರ್ಷಿಯಲ್ ರೊಮ್ಯಾಂಟಿಕ್ ಪ್ರೇಮಕಥೆಯಾಗಿದೆ. ಇದು ಯುವಕನ ಜೀವನದ ಬಗ್ಗೆ ಮತ್ತು ಪ್ರೀತಿಯಲ್ಲಿ ಬಿದ್ದ ನಂತರ ಅದು ಹೇಗೆ ಬದಲಾಗುತ್ತದೆ ಎಂಬುದೇ ಈ ಸಿನಿಮಾ. ಈ ಚಿತ್ರವನ್ನು ರವೀಂದ್ರ ಕುಮಾರ್ ನಿರ್ಮಾಣ ಮಾಡಿದ್ದಾರೆ. ಸದ್ಯದಲ್ಲೇ ಸಿನಿಮಾ ರಿಲೀಸ್ ಆಗಲಿದೆ.






# ಶೂರ್ಪನಕಿಯಾಗಿ ರಕುಲ್‌ಪ್ರೀತ್ ಸಿಂಗ್

ಕನ್ನಡದ 'ಗಿಲ್ಲಿ' ನಟಿ ರಕುಲ್ ಪ್ರೀತ್ ಸಿಂಗ್ ಇದೀಗ ಯಶ್ ನಿರ್ಮಾಣದ ರಾಮಾಯಣ ಸಿನಿಮಾದಲ್ಲಿ ನಟಿಸಲು ಅವಕಾಶ ಗಿಟ್ಟಿಸಿಕೊಂಡಿದ್ದಾರೆ. ಶೂರ್ಪನಕಿಯಾಗಿ 'ರಾಮಾಯಣ' ಚಿತ್ರಕ್ಕೆ ರಕುಲ್ ಎಂಟ್ರಿ ಕೊಡ್ತಿದ್ದಾರೆ. ನ್ಯಾಷನಲ್ ಸ್ಟಾರ್ ಯಶ್ ಸಹ ನಿರ್ಮಾಪಕನಾಗಿ ಕೈಜೋಡಿಸಿರುವ 'ರಾಮಾಯಣ' ಸಿನಿಮಾತಂಡ ದಿನದಿಂದ ದಿನಕ್ಕೆ ಹಿರಿದಾಗುತ್ತಿದೆ. ರಾಮನಾಗಿ ರಣ್‌ಬೀರ್ ಕಪೂರ್ ಮತ್ತು ಸೀತೆಯಾಗಿ ಸಾಯಿ ಪಲ್ಲವಿ ನಟಿಸುತ್ತಿದ್ದಾರೆ. ಲಂಕಾಧೀಶ ರಾವಣನ ಸಹೋದರಿಯಾಗಿ ರಕುಲ್ ಕಾಣಿಸಿಕೊಳ್ಳಲಿದ್ದಾರೆ. ಕನ್ನಡದ 'ಗಿಲ್ಲಿ' ಚಿತ್ರದ ಮೂಲಕ ಬಣ್ಣದ ಹಚ್ಚಿದ ನಟಿ ರಕುಲ್ ತೆಲುಗು ಸಿನಿಮಾಗಳ ನಂತರ ಬಾಲಿವುಡ್‌ನಲ್ಲಿ ಸ್ಟಾರ್ ನಟರ ಜೊತೆ ನಟಿಸುವ ಚಾನ್ಸ್ ಗಿಟ್ಟಿಸಿಕೊಂಡರು. ಇದೀಗ ರಾಮಾಯಣ ಸಿನಿಮಾದ ಆಫರ್ ಸಿಕ್ಕಾಗ ಸೂಕ್ತ ಅವಕಾಶ ಎನಿಸಿ ನಟಿ ಓಕೆ ಎಂದಿದ್ದಾರೆ. ಸದ್ಯದಲ್ಲೇ ಶೂಟಿಂಗ್‌ನಲ್ಲಿ ರಕುಲ್ ಭಾಗಿಯಾಗಲಿದ್ದಾರೆ. ಅಂದಹಾಗೆ, ಇತ್ತೀಚೆಗೆ ನಿರ್ಮಾಪಕ ಜಾಕಿ ಭಗ್ನಾನಿ ಜೊತೆ ನಟಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಮದುವೆ ಬಳಿಕವೂ ನಟಿ ಚಿತ್ರರಂಗದಲ್ಲಿ ಆ?ಯಕ್ಟೀವ್ ಆಗಿದ್ದಾರೆ.

# ಹಲಗಲಿ ಚಿತ್ರದಿಂದ ಹೊರಬಂದಿದ್ದೇಕೆ? ಡಾರ್ಲಿಂಗ್ ಕೃಷ್ಣ


ಸ್ಯಾಂಡಲ್‌ವುಡ್ ನಟ ಡಾರ್ಲಿಂಗ್ ಕೃಷ್ಣ ತಮ್ಮ ಮೊದಲ ಪ್ಯಾನ್ ಇಂಡಿಯಾ ಚಿತ್ರ ಹಲಗಲಿ ಸಿನಿಮಾದಿಂದ ಹೊರಬಂದಿದ್ದಾರೆ. ಒಂದೇ ಚಿತ್ರಕ್ಕೆ 3 ವರ್ಷ ಡೇಟ್ಸ್ ಕೊಡೋಕೆ ಆಗಲ್ಲ ಅಂತ ಚಿತ್ರತಂಡ ಡಾರ್ಲಿಂಗ್ ಕೃಷ್ಣ ಹೊರನಡೆದಿದ್ದಾರೆ. ಈ ಚಿತ್ರದ ಕುರಿತು ಕೃಷ್ಣ ಮಾತನಾಡಿದ್ದಾರೆ. 'ಹಲಗಲಿ' ಸಿನಿಮಾ ಅತೀ ದೊಡ್ಡ ಪ್ರಾಜೆಕ್ಟ್ ಆದರೆ ಬೇರೆ ಸಿನಿಮಾಗಳಲ್ಲಿ ನಟಿಸುತ್ತಾ ಈ ಚಿತ್ರದಲ್ಲಿ ನಟಿಸಲು ಡಾರ್ಲಿಂಗ್ ಕೃಷ್ಣ ರೆಡಿ ಇದ್ದರು. ಆದರೆ ಚಿತ್ರತಂಡ ಇದಕ್ಕೆ ಒಪ್ಪಿಗೆ ನೀಡಲಿಲ್ಲ. ಮೂರು ವರ್ಷ ಬೇರೆ ಸಿನಿಮಾದಲ್ಲಿ ನಟಿಸದೇ ಈ ಸಿನಿಮಾಗಾಗಿ ಮೀಸಲಿಡಲು ಸಾಧ್ಯವಿಲ್ಲ ಎಂದು ಕೃಷ್ಣ ಸಿನಿಮಾದಿಂದ ಹೊರಬಂದಿರುವ ಬಗ್ಗೆ ತಿಳಿಸಿದ್ದಾರೆ. 'ಹಲಗಲಿ' ಸಿನಿಮಾಗಾಗಿ ಕಳೆದ 6 ತಿಂಗಳಿಂದ ಬೇರೆ ಯಾವುದೇ ಸಿನಿಮಾವನ್ನು ಒಪ್ಪಿಕೊಂಡಿರಲಿಲ್ಲ. ಇತ್ತೀಚೆಗೆ ಫಾದರ್ ಸಿನಿಮಾದ ಆಫರ್ ಸಿಕ್ಕಿದೆ. ಇದಾದ ನಂತರ ಮತ್ತೆ ನಿರ್ದೇಶಕ ಶಶಾಂಕ್ ಜೊತೆ ಹೊಸ ಸಿನಿಮಾ ಮಾಡುವ ಬಗ್ಗೆ ಕೃಷ್ಣ ತಿಳಿಸಿದ್ದರು.

ಆದರೆ 'ಹಲಗಲಿ' ಚಿತ್ರತಂಡ 3 ವರ್ಷದ ಕಮಿಟ್‌ಮೆಂಟ್ ಕೇಳಿದ್ರಿಂದ ಚಿತ್ರ ಕೈಬಿಡಬೇಕಾಯ್ತು ಎಂದು ಬೇರೆ ಏನು ವೈಯಕ್ತಿಕ ಕಾರಣ ಇಲ್ಲ ಎಂದು ಡಾರ್ಲಿಂಗ್ ಕೃಷ್ಣ ಹೇಳಿದ್ದಾರೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಗೆರಿಲ್ಲಾ ವಾರ್ ಮಾಡುವ ಮೂಲಕ ಬ್ರಿಟಿಷರಿಗೆ ಸಿಂಹಸ್ವಪ್ನರಾಗಿದ್ದ ಹಲಗಲಿ ಬೇಡರ ಕಥೆಯನ್ನು ಸಿನಿಮಾ ನಿರ್ದೇಶಕ ಸುಕೇಶ್ ಡಿ.ಕೆ. ಮಾಡುತ್ತಿದ್ದಾರೆ. ಇದೊಂದು ಐತಿಹಾಸಿಕ ಸಿನಿಮಾವಾಗಿದ್ದರಿಂದ ಮತ್ತು ಆ ಕಾಲ ಘಟ್ಟವನ್ನು ಕಟ್ಟಿ ಕೊಡಬೇಕಾಗಿದ್ದರಿಂದ ಬರೋಬ್ಬರಿ 80 ಕೋಟಿ ರೂಪಾಯಿಯನ್ನು ಈ ಸಿನಿಮಾಗಾಗಿ ಖರ್ಚು ಮಾಡುತ್ತಿದ್ದಾರೆ




# ಸ್ಟಾರ್ ನಟನಿಗೆ ಕೀರ್ತಿ ಸುರೇಶ್ ನಾಯಕಿ

'ಮಹಾನಟಿ' ಕೀರ್ತಿ ಸುರೇಶ್ ಸದ್ಯ ಬಾಲಿವುಡ್ ಸಿನಿಮಾಗಳಲ್ಲಿ ಬ್ಯುಸಿಯಾಗಿದ್ದಾರೆ. ವರುಣ್ ಧವನ್‌ಗೆ ನಾಯಕಿಯಾಗಿ ಬಿಟೌನ್‌ಗೆ ಪಾದಾರ್ಪಣೆ ಮಾಡಿದ ಬೆನ್ನಲ್ಲೇ ಕೀರ್ತಿ ಸುರೇಶ್‌ಗೆ ಬಂಪರ್ ಅವಕಾಶವೊಂದು ಸಿಕ್ಕಿದೆ. ವರುಣ್ ಧವನ್ ಹೊಸ ಸಿನಿಮಾದಲ್ಲಿ ಕೀರ್ತಿ ಸುರೇಶ್ ನಟಿಸುತ್ತಿದ್ದಾರೆ. 'ಬೇಬಿ ಜಾನ್' ಎಂದು ಈ ಸಿನಿಮಾಗೆ ಟೈಟಲ್ ಇಡಲಾಗಿದೆ. ಈ ಚಿತ್ರವನ್ನು 'ಜವಾನ್') ಡೈರೆಕ್ಟರ್ ಅಟ್ಲಿ ನಿರ್ದೇಶನ ಮಾಡುತ್ತಿದ್ದಾರೆ.



ಇದರ ನಡುವೆ ಅಕ್ಷಯ್‌ಕುಮಾರ್ ನಾಯಕಿಯಾಗಿ ನಟಿಸುವ ಚಾನ್ಸ್ ಗಿಟ್ಟಿಸಿಕೊಂಡಿದ್ದಾರೆ. ಸತತ ಸೋಲಿನಿಂದ ಸುಸ್ತಾಗಿರುವ ಅಕ್ಷಯ್ ಕುಮಾರ್ ಇದೀಗ ಖ್ಯಾತ ನಿರ್ದೇಶಕ ಪ್ರಿಯದರ್ಶನ್ ಜೊತೆ ಕೈಜೋಡಿಸಿದ್ದಾರೆ. ಇಬ್ಬರ ಕಾಂಬಿನೇಷನ್‌ನಲ್ಲಿ ಸಿನಿಮಾ ಬರುವ ಬಗ್ಗೆ ಘೋಷಣೆ ಕೂಡ ಆಗಿದೆ. ಈ ಸಿನಿಮಾದಲ್ಲಿ ನಟಿಸಲು ಹಲವು ನಟಿಮಣಿಯರ ಹೆಸರು ಸದ್ದು ಮಾಡಿತ್ತು. ಕಡೆಯದಾಗಿ ಕೀರ್ತಿ ಸುರೇಶ್ ಸೂಕ್ತ ಎಂದೆನಿಸಿ ನಟಿಗೆ ಸಿನಿಮಾ ಟೀಮ್ ಮಣೆ ಹಾಕಿದೆ. ಕಾಮಿಡಿ ಕಮ್ ಲವ್ ಸ್ಟೋರಿ ಇರುವ ಸಿನಿಮಾ ಇದಾಗಿದ್ದು, ನಾಯಕನಿಗೆ ಪ್ರಾಮುಖ್ಯತೆ ಇರುವಷ್ಟೇ ಕೀರ್ತಿ ಪಾತ್ರಕ್ಕೂ ವ್ಯಾಲ್ಯೂ ಇದೆಯಂತೆ. ಹಾಗಾಗಿ ನಟಿ ನಟಿಸಲು ಒಪ್ಪಿಕೊಂಡಿದ್ದಾರೆ. ಸಾಲು ಸಾಲು ಸಿನಿಮಾಗಳು ಮಕಾಡೆ ಮಲಗಿದ ಬೆನ್ನಲ್ಲೇ ಸೌತ್ ನಟಿಗೆ ಚಿತ್ರತಂಡ ಮಣೆ ಹಾಕಿದೆ. ಅಂದಹಾಗೆ, ಮೊದಲ ಬಾರಿಗೆ ಜೋಡಿಯಾಗಿ ಕಾಣಿಸಿಕೊಳ್ತಿರುವ ಅಕ್ಷಯ್- ಕೀರ್ತಿ ಲವ್ ಸ್ಟೋರಿಯೂ ಪ್ರೇಕ್ಷಕರಿಗೆ ಇಷ್ಟ ಆಗುತ್ತಾ ಎಂದು ಕಾಯಬೇಕಿದೆ.

ಬಾಲಿವುಡ್‌ನಲ್ಲಿ ಸಿಕ್ತು ಗೋಲ್ಡನ್ ಚಾನ್ಸ್



# ಮತ್ತೆ ಒಂದಾದ ಮಮ್ಮುಟ್ಟಿ, ನಯನತಾರಾ

ಕಾಲಿವುಡ್ ಲೇಡಿ ಸೂಪರ್ ಸ್ಟಾರ್ ನಯನತಾರಾ ಹಲವು ವರ್ಷಗಳ ನಂತರ ಹೊಸ ಚಿತ್ರಕ್ಕಾಗಿ ಮಾಲಿವುಡ್‌ನತ್ತ ಮುಖ ಮಾಡಿದ್ದಾರೆ. ಮಮ್ಮುಟ್ಟಿ ಹೊಸ ಸಿನಿಮಾಗೆ ನಯನತಾರಾ ನಾಯಕಿಯಾಗಿ ನಟಿಸುವ ಸುದ್ದಿಯೊಂದು ಭಾರೀ ಚರ್ಚೆಯಾಗುತ್ತಿದೆ.

ಶಾರುಖ್ ಖಾನ್‌ಗೆ ನಾಯಕಿಯಾಗಿ 'ಜವಾನ್' ಸಿನಿಮಾದಲ್ಲಿ ನಟಿಸಿದ ಮೇಲೆ ನಯನತಾರಾ ಬೇಡಿಕೆ ಹೆಚ್ಚಾಗಿದೆ. ಇದೀಗ ಜವಾನ್ ನಂತರ ಮಲಯಾಳಂನಲ್ಲಿ ನಟಿಸಲು ಆಫರ್ ಅರಸಿ ಬಂದಿದೆ. ಮಮ್ಮುಟ್ಟಿಗೆ ನಯನತಾರಾ ನಾಯಕಿಯಾಗಲು ಮತ್ತೊಮ್ಮೆ ಅವಕಾಶ ಸಿಕ್ಕಿದೆ ಎಂಬ ಸುದ್ದಿ ನೆಟ್ಟಿಗರ ಚರ್ಚೆಗೆ ಗ್ರಾಸವಾಗಿದೆ. ನಯನತಾರಾ ಮತ್ತು ಮಮ್ಮುಟ್ಟಿ ಈ ಜೋಡಿಯನ್ನು ಜೊತೆಯಾಗಿ ಸಿನಿಮಾದಲ್ಲಿ ತೋರಿಸಬೇಕು ಎಂದು ಹಿರಿಯ ನಿರ್ದೇಶಕ ಗೌತಮ್ ವಾಸುದೇವ್ ಮೆನನ್ ಪ್ಲ್ಯಾನ್ ಮಾಡಿದ್ದಾರೆ. ಈ ಚಿತ್ರದ ಬಗ್ಗೆ ಒಂದು ಹಂತದ ಮಾತುಕತೆ ಕೂಡ ನಡೆದಿದೆ ಎನ್ನಲಾಗಿದೆ. ಈ ವಿಚಾರದ ಬಗ್ಗೆ ಚಿತ್ರತಂಡ ಅಧಿಕೃತ ಮಾಹಿತಿ ನೀಡುವವರೆಗೂ ಕಾಯಬೇಕಿದೆ.

2005ರಲ್ಲಿ 'ರಪ್ಪಕಲ್' ಎಂಬ ಸಿನಿಮಾದಲ್ಲಿ ನಯನತಾರಾ ಮತ್ತು ಮಮ್ಮುಟ್ಟಿ ಜೋಡಿಯಾಗಿ ನಟಿಸಿದ್ದರು. ಭಾಸ್ಕರ್ ದಿ ರಾಸ್ಕಲ್ ಸೇರಿದಂತೆ ಹಲವು ಚಿತ್ರಗಳಲ್ಲಿ ಜೊತೆಯಾಗಿ ನಟಿಸಿದ್ದಾರೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966